UNIVERSAL
LIBRARY
OU_198307
UNIVERSAL
LIBRARY

# LIVES OF GREAT INDIAN WOMEN.

# ಭಾರತ ಸಾಧ್ವೀಮಣಿಯರ ಇತಿಹಾಸ ಮಂಜರಿ.



**Part I.**

ಪ್ರಥಮ ಭಾಗ.

ಸುಪ್ರಸಿದ್ಧರಾದ ನಾಲ್ವರು ಮಹಾರಾಣಿಯರ
ಇತಿಹಾಸಗಳು.

---

BANGALORE:
PRINTED AT THE CAXTON PRESS.

**1915.**

(*All Rights Reserved.*)

ಕ್ರಯ ೮ ಆಣೆ.] [Price 8 Annas.

# ಉಪೋದ್ಘಾತ.

ಈ ಭರತಖಂಡದ ದೇಶಭಾಷೆಗಳಲ್ಲಿ ಗ್ರಂಥ ಸಂಖ್ಯೆಯು ಬೆಳೆಯುತ್ತಿರುವಂತೆ ನಮ್ಮ ಕನ್ನಡದಲ್ಲಿಯೂ ದಿನೇದಿನೇ ಹೊಸ ಗ್ರಂಥಗಳು ಪ್ರಚುರವಾಗುತ್ತಿರುವದು ಸಂತೋಷಕರವಾಗಿದೆ. ಆದರೂ ಇತಿಹಾಸ ಗ್ರಂಥಗಳನ್ನು ಸ್ತ್ರೀಯರಾರೂ ಮೈಸೂರು ದೇಶದಲ್ಲಿ ಬರೆದಂತೆ ಕಾಣಲಿಲ್ಲ. ಈಚೆಗೆ ಆಂಧ್ರಭಾಷೆಯಲ್ಲಿ ಸೌಭಾಗ್ಯವತಿ ಭಂಡಾರಂ ಅಚ್ಚಮಾಂಬೆಯು ರಚಿಸಿದ "ಅಬಲಾ ಸಚ್ಚರಿತ್ರ ರತ್ನಮಾಲ" ಎಂಬದನ್ನು ಓದಿ, ಸಾಧ್ವೀಮಣಿಯರ ಇತಿಹಾಸಗಳು ಶ್ಲಾಘ್ಯವಾಗಿ ತೋರಿದ್ದರಿಂದ, ಇವುಗಳನ್ನು ಕನ್ನಡಿಸಬಹುದೆಂದು ನನ್ನ ಮಕ್ಕಳಾದ ಸೌಭಾಗ್ಯವತಿ ಅಚ್ಚಮ್ಮನಿಗೂ, ಸೌಭಾಗ್ಯವತಿ ರಾಜಮ್ಮನಿಗೂ ಹೇಳಿದೆನು. ತೆಲುಗು ಭಾಷೆಯಲ್ಲಿ ಇವರಿಗೆ ಹೆಚ್ಚು ಪರಿಚಯವಿಲ್ಲದಿದ್ದರೂ ಯಥಾಮತಿ ಬರೆಯುವೆವೆಂದು ಒಪ್ಪಿ, ವಿರಾಮಕಾಲಗಳಲ್ಲಿ ಬರೆದುಕೊಟ್ಟರು. "ಇದನ್ನು ವಿದ್ಯಾವತಿಯರಾದ ದೇಶ ಸಹೋದರಿಯರ ಉಪಯೋಗಕ್ಕಾಗಿ ಪ್ರಕಟಿಸುವದು ಒಳ್ಳೇದು" ಎಂದು ಅಪೇಕ್ಷಿಸಿದರು.—ಅವರ ಕೋರಿಕೆಯಂತೆ ಈ ಗ್ರಂಥವನ್ನು ಬೇರೆ ಬೇರೆ ಭಾಗಗಳಾಗಿ ವಿಂಗಡಿಸಿ, "ಭಾರತ ಸಾಧ್ವೀಮಣಿಯರ ಇತಿಹಾಸ ಮಂಜರಿ" ಎಂಬ ಹೆಸರಿನಿಂದ ಪ್ರಕಟಿಸಿ ಇದೆ.

ಈ ಪ್ರಥಮ ಭಾಗದಲ್ಲಿ ಸುಪ್ರಸಿದ್ಧರಾದ ನಾಲ್ವರು ಮಹಾರಾಣಿಯರು—ಅಂದರೆ—

1. ತಿರುವಾಂಕೂರು ಮಹಾರಾಣಿ ಲಕ್ಷ್ಮೀಬಾಯಿ ;

2. ಮೈಸೂರು ಮಹಾರಾಣಿ ಲಕ್ಷ್ಮಮ್ಮಣ್ಣಿ ;

3. ಇಂದೂರು ಮಹಾರಾಣಿ ಅಹಲ್ಯಾಬಾಯಿ ;

4. ನಾಟೂರು ಮಹಾರಾಣಿ ಭವಾನಿ ;

ಇವರ ಇತಿಹಾಸಗಳು ಮುದ್ರಿಸಲ್ಪಟ್ಟವೆ.

ವಾಚಕ ಮಹಾಶಯರು ಇದರಲ್ಲಿ ತಪ್ಪುಗಳಿದ್ದರೂ ಮನ್ನಿಸಿ, ಗುಣಗಳನ್ನು ಮಾತ್ರ ಗ್ರಹಿಸಬೇಕೆಂದು ಪ್ರಾರ್ಥಿಸುತ್ತೇನೆ.

S. VARADA RAJA IYENGAR,
*Retired Sub-Judge.*

Bangalore 1915.

ಶ್ರೀ

# ಭಾರತ ಸಾಧ್ವೀಮಣಿಮಂಜರಿ.

ಶ್ರೀವಲ್ಲಭೇತಿ ವರದೇತಿ ದಯಾಪರೇತಿ
ಭಕ್ತಪ್ರಿಯೇತಿ ಭವಲುಂಠನಕೋವಿದೇತಿ ।
ನಾಥೇತಿ ನಾಗಶಯನೇತಿ ಜಗನ್ನಿವಾಸೇ
ತ್ಯಾಲಾಪನಂ ಪ್ರತಿಪದಂ ಕುರುಮಾಂಮುಕುಂದ ॥

## ತಿರುವಾಂಕೂರು ಸಂಸ್ಥಾನದ ಮಹಾರಾಣೀ ಲಕ್ಷ್ಮೀಬಾಯಿ ಧರ್ಮವರ್ಧನೀ.

ಈ ಪ್ರಪಂಚದಲ್ಲಿ ಮನುಷ್ಯರಿಗೆ ಅನೇಕ ಪ್ರತಿಬಂಧಕಗಳು ಉಂಟೆಂಬುದು ಪ್ರತಿಯೊಬ್ಬರಿಗೂ ತಿಳಿದ ವಿಷಯವೇ. ಹೀಗೆ ಪ್ರತಿಬಂಧಕಗಳು ಹತ್ತು ಮಂದಿಯನ್ನು ಸಂರಕ್ಷಣೆ ಮಾಡುವವರಿಗೆ ಹೆಚ್ಚಾಗಿಯೇ ಇರುವುವು. ತನ್ನ ಸಂರಕ್ಷಣೆಯಲ್ಲಿರುವವರೊಳಗೆ ಪ್ರತಿಯೊಬ್ಬರ ಸ್ವಭಾವವೂ ಬೇರೆಬೇರೆಯಾಗಿರುವುದರಿಂದ, ಅವರವರ ಕೋರಿಕೆಗಳನ್ನು ತೀರಿಸಿ, ಅವರೆಲ್ಲರನ್ನೂ ಆಜ್ಞೆಯಲ್ಲಿರಿಸಿಕೊಳ್ಳುವುದಕ್ಕೆ ಬಹು ಚಾತುರ್ಯವೂ, ಧೈರ್ಯವೂ ಬೇಕಾಗಿರುವುವು. ಒಂದು ಕುಟುಂಬವನ್ನು ಸಂರಕ್ಷಿಸುವುದಕ್ಕೆ ಇಷ್ಟುಶ್ರಮ ಉಂಟಾಗುವಲ್ಲಿ, ಒಂದು ರಾಜ್ಯ

ವನ್ನು ವಹಿಸುವದಕ್ಕೆಷ್ಟು ಶ್ರಮ ಉಂಟಾಗುವುದೋ ಬೇರೆ ಹೇಳಬೇಕಾಗಿಲ್ಲ. ರಾಜ್ಯಭಾರ ಮಾಡುವುದರಲ್ಲಿ ಎಷ್ಟು ಕಷ್ಟಗಳಿರುವುವೋ ಅವೆಲ್ಲವನ್ನೂ ಕುಟುಂಬ ಸಂರಕ್ಷಕರು ಸುಲಭವಾಗಿ ಊಹಿಸಬಹುದು. ರಾಜ್ಯದಲ್ಲಿ ಅನೇಕ ಪ್ರಕೃತಿಗಳ ಜನಗಳಿರುವರು. ಪರರಾಜರುಗಳು ಯಾವಾಗಲೂ ಯುದ್ಧೋತ್ಸಾಹಿಗಳಾಗಿರುವರು. ಇವರುಗಳನ್ನೆಲ್ಲಾ ಸಮಾಧಾನಮಾಡಿ ರಾಜ್ಯವನ್ನು ನಡೆಯಿಸುವುದು ದುಸ್ತರ. ಇದರಿಂದಲೇ ರಾಜ್ಯವನ್ನು ರಾಜ್ಯಭಾರವೆಂದು ಹೇಳುವರು. ಈ ಭಾರವನ್ನು ವಹಿಸುವುದಕ್ಕೆ ವಿದ್ಯೆ, ಸಾರಾಸಾರ ವಿಚಾರ, ದಕ್ಷತೆ ಮೊದಲಾದ ಸದ್ಗುಣಗಳು ಅನೇಕ ಬೇಕಾಗಿರುವುವು. ಒಂದಾನೊಂದು ಸಮಯದಲ್ಲಿ ಈ ರಾಜ್ಯಭಾರವು ಯೌವನದಿಂದಲೇ ವಹಿಸಲು ಸಂಪ್ರಾಪ್ತವಾದ ಪಕ್ಷದಲ್ಲಿ ಅದು ಎಷ್ಟು ದುಸ್ತರವಾಗಿರುವುದೋ ಬೇರೆ ಹೇಳಬೇಕೇ ? ಇಷ್ಟು ಸಂಗತಿಗಳೂ ವಿಶೇಭವಿಸಿ ಈ ರಾಜ್ಯಭಾರವು ಒಬ್ಬ ಸ್ತ್ರೀಗೆ ಸಂಪ್ರಾಪ್ತವಾದ ಪಕ್ಷದಲ್ಲಿ ಆಕೆಯು ಹೇಗೆ ನಿರ್ವಹಿಸುವಳೋ ಎಂದು ನಮಗೆ ಆಶ್ಚರ್ಯವು ತೋರುವುದು. ಆದರೆ ಈಶ್ವರಾನುಗ್ರಹದಿಂದ ಜಗತ್ತಿನಲ್ಲಿ ಯಾವಾಗ, ಎಲ್ಲೆಲ್ಲಿ, ಸ್ತ್ರೀಯರಿಗೆ ರಾಜ್ಯಾಧಿಕಾರಗಳು ದೊರಕಿದುವೋ, ಆಗಾಗ, ಅಲ್ಲಲ್ಲಿ, ಸ್ತ್ರೀಯರು ಪುರುಷರಿಗಿಂತಲೂ ಅಧಿಕ ಧೈರ್ಯದೊಡನೆಯೂ, ಅಧಿಕ ನೀತಿಯಿಂದಲೂ, ಅಧಿಕ ನ್ಯಾಯದಿಂದಲೂ ರಾಜ್ಯಭಾರವನ್ನು ಮಾಡಿದರೆಂದು ಚರಿತ್ರೆಗಳಿಂದ ಸ್ಪಷ್ಟವಾಗಿರುವುದು. ಪ್ರತಿದೇಶದ ಚರಿತ್ರೆಯಿಂದಲೂ ಇಂಥ ಉದಾಹರಣೆಗ

ಳನ್ನು ಅನೇಕವಾಗಿ ಕೊಡಬಹುದು. ಈಗ ಮಲಬಾರು ದೇಶದೊಳಗಿನ ಒಂದು ಉದಾಹರಣೆಯನ್ನು ಕೊಡಲು ಯೋಚಿಸಿರುವೆವು.

ಮಲಬಾರುದೇಶದಲ್ಲಿ ತಿರುವಾಂಕೂರು ಎಂಬುದಾಗಿಯೂ, ಕೊಚ್ಚಿ ಎಂಬುದಾಗಿಯೂ, ಎರಡು ಸಂಸ್ಥಾನಗಳುಂಟು. ಅದರಲ್ಲಿ ತಿರುವಾಂಕೂರು ಎಂಬ ರಾಜ್ಯವು ಅತಿಪ್ರಾಚೀನಕಾಲದಿಂದಲೂ ದಾನ ಧರ್ಮದವಿಷಯದಲ್ಲಿ ವಿಖ್ಯಾತಿಯಂ ಪಡೆದು, ಶ್ರೇಷ್ಠವಾಗಿ ಒಪ್ಪುತ್ತಿರುವುದು. ಈ ದೇಶವನ್ನು ನಮ್ಮ ಕರ್ಣಾಟಕದವರು ಸ್ತ್ರೀಮಳಯಾಳವೆಂದು ಹೇಳುವರು. ಇಲ್ಲಿ ಗಂಡಸರೇ ಇಲ್ಲವೆಂಬುದಾಗಿಯೂ, ಎಲ್ಲರೂ ಹೆಂಗಸರೇ ಆಗಿರುವರೆಂಬದಾಗಿಯೂ, ಗಾಳಿಗೆ ಮಕ್ಕಳು ಹುಟ್ಟುವರೆಂಬದಾಗಿಯೂ ಕೆಲವರು ಕಥೆಗಳನ್ನು ಹೇಳುವರು. ಅವುಗಳೆಲ್ಲವೂ ನಿಜವಾದ ಸಂಗತಿಗಳಲ್ಲ. ಆದರೆ, ಅವರ ಆಚಾರ ವಿಚಾರಗಳಿಗೂ ನಮ್ಮ ಆಚಾರ ವಿಚಾರಗಳಿಗೂ ಅನೇಕ ಭೇದಗಳುಂಟು. ಮುಖ್ಯವಾಗಿ:—

ಆ ದೇಶದಲ್ಲಿ ನಮ್ಮ ದೇಶದಹಾಗೆ ಕ್ರಮಪ್ರಕಾರ ತಂದೆಯ ಸ್ವತ್ತು ಪುತ್ರನಿಗೆ ಸಲ್ಲದೆ ಸೋದರಳಿಯನಿಗೆ ಸಲ್ಲುವುದು. ಸೋದರಳಿಯನಿಲ್ಲದ ಪಕ್ಷದಲ್ಲಿ, ಸೋದರ ಸೊಸೆಗೂ ಆಕೆಯ ಸಂತತಿಗೂ ಸಲ್ಲುವುದು. ಈ ಪ್ರಕಾರ ಆ ಪ್ರಾಂತ್ಯ ಕನ್ಯಾವಂಶಕ್ಕೇನೇ ರಾಜ್ಯದಹಕ್ಕು. ಪುತ್ರವಂಶಕ್ಕಿಲ್ಲ. ರಾಜಪುತ್ರಿಗೆ ೯—೧೦ ವಯಸ್ಸಾದೊಡನೆಯೇ ತಾಳೀ ಕಟ್ಟುವುದೆಂಬ ಒಂದು ವಿವಾಹ ವಿಧಿಯನ್ನು ಮಾಡುವರು ಆಗ ವರನಿರುವುದಿಲ್ಲ. ಪುರೋಹಿತನೇ

ಆ ಹುಡುಗಿಗೆ ಮಂಗಳಸೂತ್ರವನ್ನು ಕಟ್ಟುವನು. ಆ ರಾಜಕನ್ನಿಕೆಗೆ ಯೌವ್ವನ ಪ್ರಾಪ್ತವಾದ ತರುವಾಯ ಒಬ್ಬ ನಂಬೂರಿ ಬ್ರಾಹ್ಮಣನನ್ನು ತಂದು ಆಕೆಗೆ ವಿವಾಹ ಮಾಡುವರು. ಇವನನ್ನು "ಕೋವಿಲ್ ತಂಬೂರಾನ್" ಎಂದರೆ, ರಾಜಭವನದ ಮಹಾರಾಜನೆಂದು ಕರೆಯುವರು. ಈ ಕೋವಿಲ ತಂಬೂರಾನಿಗೂ ರಾಜಕನ್ನಿಕೆಗೂ ಹುಟ್ಟುವ ಹೆಣ್ಣುಮಕ್ಕಳ ಸಂತತಿಗೆ ರಾಜ್ಯವು ದೊರಕುವದು. ಮುಖ್ಯವಾಗಿ ಆ ಹೆಣ್ಣುಮಕ್ಕಳ ಪುತ್ರರಿಗೆ ರಾಜ್ಯವು ದೊರೆಯುವುದು. ಪುತ್ರರಿಲ್ಲದ ಪಕ್ಷದಲ್ಲಿ ಕನ್ನಿಕೆಯರಿಗೆ ದೊರಕುವುದು. ರಾಜ್ಯಭಾರಮಾಡುವ ರಾಜನ ಹೆಂಡತಿ ರಾಣಿಯಾಗುವುದಿಲ್ಲ. ಆ ರಾಜನ ಕುಮಾರರಿಗೆ ಅವರ ಸೋದರಮಾವನ ಸ್ವತ್ತು ಲಭಿಸುವುದೇ ವಿನಾ ರಾಜ್ಯವು ಲಭಿಸುವುದಿಲ್ಲ. ಅವರು ಯಾವಾಗಲೂ ಯುವರಾಜರಾಗಲಾರರು. ಇಷ್ಟು ಜ್ಞಾಪಕದಲ್ಲಿದ್ದಲ್ಲಿ, ಈ ಚರಿತ್ರೆಯನ್ನು ತಿಳಿಯಲು ಸುಲಭವಾಗಿರುವುದು.

೩. ತಿರುವಾಂಕೂರು ಸಿಂಹಾಸನದಮೇಲೆ ಅನೇಕ ಸ್ತ್ರೀಯರು ಆರೋಹಣಮಾಡಿದ್ದರು. ಅವರಲ್ಲಿ ಲಕ್ಷ್ಮೀಬಾಯಿ ಪ್ರಮುಖಳು. ಲಕ್ಷ್ಮೀಬಾಯಿಗೆ ಪೂರ್ವದಲ್ಲಿ, ಹತ್ತೊಂಬತ್ತನೆಯ ಶತಮಾನಾರಂಭದಲ್ಲಿ, ರಾಜ್ಯವನ್ನು ವಂಶಪಾಲ ಬಲರಾಮ ಶರ್ಮನೆಂಬುವನು ಪಾಲಿಸುತ್ತಿದ್ದನು. ಈ ರಾಜನು ರಾಜ್ಯ ಪರಿಪಾಲನೆಯಲ್ಲಿ ಅಷ್ಟು ದಕ್ಷತೆಯುಳ್ಳವನಾಗಿರಲಿಲ್ಲವಾದ್ದರಿಂದ, ಬಡವರಿಗೆ ನ್ಯಾಯ ವಿಮರ್ಶೆಯಿಲ್ಲದಿತ್ತು. ದೊಡ್ಡ ಅಧಿಕಾರಿಗಳು ಅವರವರ ಅಧಿಕಾರದಲ್ಲಿ ಅಧ್ಯಕ್ಷವಂ ಮಾಡತೊಡಗಿದರು. ಕೆಲವು

ಅಧಿಕಾರಗಳಲ್ಲಿ, ಲೆಕ್ಕವನ್ನು ಕೇಳುವರಿಲ್ಲದ್ದರಿಂದ, ರಾಜನಿಗೆ ಬರಬೇಕಾದ ದ್ರವ್ಯವು ಬಾರದೆ ಹೋಯಿತು. ಹೀಗೆ ಒಬ್ಬರನ್ನೊಬ್ಬರು ಲಕ್ಷ್ಯಮಾಡದ್ದರಿಂದ ರಾಜ್ಯವೆಲ್ಲವೂ ಪತಿಯಿಲ್ಲದ ಪತ್ನಿಯಂತೆ ದೀನದಶೆಗೆ ಬಂದಿತ್ತು. ಆಗ ಈಸ್ಟಿಂಡಿಯಾ ಕಂಪನಿಯವರು ತಮ್ಮ ರೆಸಿಡೆಂಟನ ದ್ವಾರ "ನೀವು ಈ ರಾಜ್ಯವನ್ನು ಚೆನ್ನಾಗಿ ಇಟ್ಟುಕೊಂಡು ಒಳ್ಳೇ ದಶೆಗೆ ತರಬೇಕಾಗಿರುವದೆಂದು" ಅನೇಕ ವೇಳೆ ರಾಜನಿಗೆ ಸೂಚನೆಯನ್ನು ಕೊಟ್ಟರು. ರಾಜನು ಆ ಸೂಚನೆಗಳನ್ನು ಲಕ್ಷ್ಯಮಾಡದಿರಲು, ರಾಜ್ಯದ ದೀನದಶೆಯು ದಿನದಿನಕ್ಕೆ ಹೆಚ್ಚುತ್ತ ಬಂತು. ಇದನ್ನು ನೋಡಿ, ಈಸ್ಟಿಂಡಿಯಾ ಕಂಪನಿಯವರು ೧೮೩೦ನೇ ಸಂವತ್ಸರದಲ್ಲಿ, "ನೀವು ಈ ರಾಜ್ಯದ ಸ್ಥಿತಿಯನ್ನು ೬ ತಿಂಗಳೊಳಗೆ ಚೆನ್ನಾಗಿ ಮಾಡುವಿರಾ? ಇಲ್ಲವಿದ್ದರೆ ಈ ರಾಜ್ಯದ ಬಂದೋಬಸ್ತು ನಾವು ಮಾಡುವೆವು." ಎಂದು ರಾಜನಿಗೆ ತಿಳಿಯಪಡಿಸಿದರು. ಇದರಿಂದ ರಾಜನು ಚಿಂತಾಕ್ರಾಂತನಾಗಿ ಕೆಲವು ದಿನಗಳಲ್ಲಿಯೇ ಪರಲೋಕವನ್ನೈದಿದನು. ವಂಶಪಾಲ ಬಲರಾಮ ಶರ್ಮನ ತರುವಾಯ, ರಾಜ್ಯಾರೂಢನಾಗುವದಕ್ಕೆ ಗಂಡು ವಾರಸುದಾರರು ಯಾರೂ ಇಲ್ಲದೆ ಹೋದರು. ರಾಜನ ತಾಯಿಯೂ, ಅಕ್ಕ ಗೌರೀಬಾಯಿಯೂ, ಅದುವರೆಗೇನೇ ಮೃತಿ ಹೊಂದಿದ್ದರು. ಗೌರೀಬಾಯಿಗೆ ಪುತ್ರಸಂತಾನವಿಲ್ಲದೆ ಇತ್ತು. ಆದರೆ ಅವಳಿಗೆ ಲಕ್ಷ್ಮೀಬಾಯಿಯೆಂದೂ, ಪಾರ್ವತೀಬಾಯಿಯೆಂದೂ ಇಬ್ಬರು ಕುಮಾರ್ತೆಯರಿದ್ದರು. ಆಗ ಇವರು ಬಾಲ್ಯಾವಸ್ಥೆ

ಯಲ್ಲಿ ಇದ್ದುದರಿಂದ ಇವರಿಗೂ ಸಂತಾನ ಪ್ರಾಪ್ತಿಯಿಲ್ಲದೆ ಇತ್ತು. ತರುವಾಯ ದೊಡ್ಡವಳಾದ ಲಕ್ಷ್ಮೀಬಾಯಿ ರಾಜ್ಯಭಾರ ಮಾಡಬೇಕೆಂತಲೂ, ಅವಳಿಗೆ ಮಗನು ಹುಟ್ಟಿದರೆ ಅವನು ರಾಜ್ಯಕ್ಕೆ ವಾರಸುದಾರನೆಂತಲೂ, ಕಂಪನಿಯವರು ಏರ್ಪಾಡು ಮಾಡಿದರು. ಈ ಏರ್ಪಾಟಿಗೆ ಮುಖ್ಯ ಕಾರಣವು ಲಕ್ಷ್ಮೀಬಾಯಿಯ ತಿಳಿವಳಿಕೆಯೇ. ಲಕ್ಷ್ಮೀ ಪಾರ್ವತಿಯರಿಬ್ಬರೂ, ಸ್ವದೇಶ ಭಾಷೆಯಲ್ಲಿಯೂ ಸಂಸ್ಕೃತ ಭಾಷೆಯಲ್ಲಿಯೂ ಹೆಚ್ಚಾದ ಪ್ರವೀಣತೆಯುಳ್ಳವರಾಗಿ, ಸುಶೀಲತೆಯನ್ನು ಪ್ರಸಿದ್ಧಪಡಿಸಿದ್ದರು. ಆಗ ಲಕ್ಷ್ಮೀಬಾಯಿ ಇಪ್ಪತ್ತು ವರುಷ ವಯಸ್ಸುಳ್ಳವಳಾಗಿದ್ದರೂ, ಒಳ್ಳೇ ಗುಣಗಳಿಗೂ, ದೀರ್ಘಾಲೋಚನೆಗೂ, ಪ್ರಶಂಸನೀಯವಾದ ಯುಕ್ತಿಗಳಿಗೂ, ಶತವೃದ್ಧರಿಗಿಂತ ಪ್ರಸಿದ್ಧಿ ತೋರಿಸಿದ್ದರಿಂದ ಆಗಿನ ರೆಸಿಡೆಂಟರಾದ ಕರ್ನಲ್ ಮೆಕಾಲೆ ದೊರೆಯವರು ತಿರುವಾಂಕೂರು ಸಿಂಹಾಸನಾರೋಹಣಕ್ಕೆ ಇವಳೇ ಅರ್ಹಳೆಂದು ತಿಳಿದು, ಈ ಸಂಗತಿಯನ್ನು ಕಂಪನಿಯವರಿಗೆ ತಿಳಿಸಿ, "ಇವಳು ಚಿಕ್ಕವಳಾದರೂ ಇದುವರೆಗೆ ರಾಜ್ಯದಲ್ಲಿ ಉಂಟಾಗಿರುವ ಅವ್ಯವಸ್ಥೆಯನ್ನು ತೊಲಗಿಸಿ, ರಾಜ್ಯವನ್ನು ಉನ್ನತ ಸ್ಥಿತಿಗೆ ತರುವ ಸದ್ಗುಣಗಳಿವಳಲ್ಲಿರುವುವು" ಎಂಬ ತನ್ನ ಅಭಿಪ್ರಾಯವನ್ನು ಬರೆದನು. ಕಂಪನಿಯವರು ಇದೆಲ್ಲವನ್ನು ಕೇಳಿ, ಲಕ್ಷ್ಮೀಬಾಯಿಯನ್ನು ಸಿಂಹಾಸನಾರೂಢಳನ್ನಾಗಿ ಮಾಡುವುದಕ್ಕೆ ಇಷ್ಟಪಟ್ಟು, ಆ ಮಹೋತ್ಸವವನ್ನು ಯಥಾವಿಧಿಯಾಗಿ ನಡೆಸುವುದಕ್ಕೆ ರೆಸಿಡೆಂಟ್ ಕರ್ನಲ್

ಮೆಕಾಲೆಯವರನ್ನೇ ನಿಯಮಿಸಿದರು.

೪. ಇಷ್ಟರಲ್ಲಿ ಲಕ್ಷ್ಮೀಬಾಯಿಯ ದಾಯಾದಿಗಳು ಕೆಲವರು, ಆ ಸಿಂಹಾಸನದ ಮೇಲೆ ತಮಗೆ ಸಂಪೂರ್ಣವಾದ ಹಕ್ಕಿರುವುದೆಂತಲೂ; ಹಕ್ಕುದಾರರು ನಾವಿರುವಾಗ ಹೆಣ್ಣು ಹುಡುಗಿಗೆ ರಾಜ್ಯವನ್ನು ಕೊಡುವುದು ನ್ಯಾಯವಲ್ಲವೆಂತಲೂ, ಹೇಳತೊಡಗಿದರು. ಆದರೆ ಮೆಕಾಲೆ ದೊರೆಯು ಅವರ ಹೇಳಿಕೆಗೆ ಲಕ್ಷ್ಯ ಮಾಡತಕ್ಕವನಾಗಿರಲಿಲ್ಲ. ಆದ್ದರಿಂದ ಅವರು ತಿರುಗಿ ಬಿದ್ದರು. ಅದರ ಮೇಲೆ ಅವರನ್ನೂ, ಅವರ ಸಹಾಯಕರನ್ನೂ ರಾಜದ್ರೋಹಿಗಳೆಂದು ಕರ್ನಲ್ ದೊರೆಯುವರು ಕಾರಾಗೃಹಕ್ಕೆ ಕಳುಹಿಸಿದರು. ಮೊದಲು ಅವರನ್ನು ತಲಚೇರಿ ಎಂಬ ಪಟ್ಟಣದಲ್ಲಿ ಇಟ್ಟಿದ್ದು, ತರುವಾಯ ಚೆಂಗಲ್ಪಟ್ಟಿಗೆ ಕಳುಹಿಸಿದರು. ಅಲ್ಲಿ ಅವರೆಲ್ಲರೂ ಕಾರಾಗೃಹದಲ್ಲಿಯೇ ಮೃತಿ ಹೊಂದಿದರು. ಹೀಗೆ ಶತ್ರುಗಳೆಲ್ಲರನ್ನೂ ಘೋರವಾಗಿ ಶಿಕ್ಷಿಸಿ, ತರುವಾಯ ಲಕ್ಷ್ಮೀಬಾಯಿಗೆ ಪಟ್ಟಾಭಿಷೇಕಮಾಡಲು ರೆಸಿಡೆಂಟ್ ದೊರೆಯುವರು ದೊಡ್ಡ ಉತ್ಸವವನ್ನು ಮಾಡಿದರು. ರಾಜಸಭೆಯನ್ನು ಮಾಡುವ ಆಸ್ಥಾನಮಂಟಪವು ಅನೇಕ ಸುಂದರವಾದ ಪದಾರ್ಥಗಳಿಂದ ಅಲಂಕರಿಸಲ್ಪಟ್ಟು, ನೋಡುವವರಿಗೆಲ್ಲಾ ಆಹ್ಲಾದಕರವಾಗಿತ್ತು. ಆ ಮಹೋತ್ಸವವನ್ನು ನೋಡುವುದಕ್ಕೆ ರಾಜ್ಯದ ಚಿಕ್ಕ ಚಿಕ್ಕ ಪ್ರದೇಶಗಳಿಂದ ಜನರು ಬಹಳವಾಗಿ ಬಂದಿದ್ದರು. ಮುಖ್ಯಮುಖ್ಯರಾದ ಸಾಮಂತ ಸರದಾರರುಗಳೆಲ್ಲರೂ ಬಂದು, ಅವರವರ ನಿಯಮಿತ ಸ್ಥಾನಗಳಲ್ಲಿ ಕುಳಿತಮೇಲೆ, ರಾಜಕ

ನ್ನಿಕೆಯಾದ ಲಕ್ಷ್ಮೀ ಪಾರ್ವತಿಯು, ಅವರ ದೇಶಾಚಾರವನ್ನನುಸರಿಸಿ ಉತ್ತಮವಾದ ವಸ್ತ್ರಾಭರಣಗಳನ್ನು ಧರಿಸಿಕೊಂಡು ಬಂದು, ಸಭೆಯಲ್ಲಿ ಅವರಿಗೋಸ್ಕರ ನಿಯಮಿಸಿದ ಉನ್ನತ ಸ್ಥಾನದಮೇಲೆ ಕುಳಿತುಕೊಂಡರು. ತರುವಾಯ ಕಂಪನಿಯವರ ಪ್ರತಿನಿಧಿಯಾದ ಕರ್ನಲ್ ಮೆಕಾಲೆ ದೊರೆಯವರು ನಿಂತುಕೊಂಡು, ಅಲ್ಲಿನ ಸಭೆಯವರಿಗೆಲ್ಲಾ ತಿಳಿಯುವಂತೆ "ಕಂಪನಿ ಸರ್ಕಾರದವರ ಅನುಮತಿ ಪ್ರಕಾರ ರಾಣಿ ಲಕ್ಷ್ಮೀಬಾಯಿಯನ್ನು ತಿರುವಾಂಕೂರು ಸಿಂಹಾಸನದಮೇಲೆ ಕೂಡಿಸುವೆನು" ಎಂದು, ಮೃದುಮಧುರ ಗಂಭೀರ ಸ್ವರದಿಂದ ಹೇಳಿ, ಸನ್ಮಾನಪೂರ್ವಕವಾಗಿ, ರಾಣಿ ಲಕ್ಷ್ಮೀಬಾಯಿಯನ್ನು ಉಚ್ಚಸ್ಥಾನದಲ್ಲಿರುವ ಸಿಂಹಾಸನದಮೇಲೆ ಕೂಡಿಸಿದನು. ಆಗಲೇ ಸರ್ವಜನರನ್ನೂ ಅನುಮತಿಪಡಿಸಿ, ಆತನು ರಾಣಿಯವರಿಗೆ "ಧರ್ಮವರ್ಧಿನೀ ರಾಜೇಶ್ವರೀ" ಎಂಬ ಬಿರುದನ್ನು ಕೂಡ ಸಂಭ್ರಮದಿಂದ ಕೊಟ್ಟನು.

೫. ಇಲ್ಲಿ ಓದುವವರು ಮಹಾರಾಣಿಯವರಿಗೆ "ಧರ್ಮವರ್ಧಿನೀ" ಎಂಬ ಬಿರುದಿನಿಂದೇನು ಪ್ರಯೋಜನವೆಂದು ಶಂಕಿಸುವರೇನೋ? ಆದರೆ ಸ್ವಲ್ಪವಾಗಿ ವಿವರಿಸುವೆವು. ತಿರುವಾಂಕೂರು ರಾಜ್ಯಕ್ಕೆ ರಾಜಧಾನಿಯಾದ ತಿರುವನಂತಪುರ (Trivandram) ಎಂಬುವುದಕ್ಕೇನೇ ಅನಂತಶಯನವೆಂದು ಹೆಸರು. ಇದು ಒಂದು ಪುಣ್ಯಕ್ಷೇತ್ರವಾಗಿರುವುದು. ಇಲ್ಲಿ ಪದ್ಮನಾಭಸ್ವಾಮಿಯು ಶೇಷಶಾಯಿಯಾಗಿರುವನು. ತಿರುವಾಂಕೂರು ರಾಜರ ಕುಲ

ದೇವರು ಈ ಪದ್ಮನಾಭಸ್ವಾಮಿಯೇ. ಈ ರಾಣಿಯ ಪೂರ್ವಿಕನಾದ "ಮಾರ್ತಾಂಡವರ್ಮ" ಎಂಬುವನು ತನ್ನ ರಾಜ್ಯವನ್ನೆಲ್ಲಾ ಒಂದುದಿನ ದೇವರಿಗೆ ಸಮರ್ಪಿಸಿ ಬಿಟ್ಟನಂತೆ! ಅಂದಿನಿಂದಲೂ ಈ ರಾಜರುಗಳು ಪದ್ಮನಾಭ ಸೇವಕರೆಂಬುದಾಗಿಯೂ, ಧರ್ಮವರ್ಧಕರೆಂಬುದಾಗಿಯೂ ಬಿರುದಾಂಕಿತರಾಗಿದ್ದರು. ಇವರ ರಾಜಮುದ್ರೆಯಮೇಲೆ "ಧರ್ಮೋಸ್ಮತ್ಕುಲದೈವತಂ" ಎಂಬ ವಾಕ್ಯವಿರುವುದು. ಈ ಪ್ರಕಾರ ಪ್ರತಿರಾಜನೂ, ರಾಣಿಯೂ, "ಧರ್ಮವರ್ಧನ" "ಧರ್ಮವರ್ಧಿನೀ" ಎಂಬ ಬಿರುದನ್ನು ಭೂಷಣವಾಗೆಣಿಸುತ್ತಿದ್ದರು. ಆದ್ದರಿಂದ ಈ ರಾಣಿಯವರಿಗೆ "ಧರ್ಮವರ್ಧನೀ" ಎಂಬ ಪದವಿಯು ರಾಜ್ಯಾರೋಹಣ ಸಮಯದಲ್ಲಿ ಕೊಡಲ್ಪಟ್ಟಿತು. ಮಹಾರಾಣಿಯವರ ಸಂಪೂರ್ಣನಾಮವು ಬಿರುದಿನ ಸಂಗಡ ಮಳೆಯಾಳದಲ್ಲಿ ಹೀಗೆ ಬರೆಯಲ್ಪಟ್ಟಿರುವುದು :—

"ಶ್ರೀ ಪದ್ಮನಾಭ ಸೇವಿನೀ ವಂಚಿ ಧರ್ಮವರ್ಧನೀ ರಾಜ ರಾಜೇಶ್ವರೀ ರಾಣೀ ಗೌರೀ ಲಕ್ಷ್ಮೀಬಾಯಿ."

ಈ ರಾಜ್ಯಾಭಿಷೇಕವಾದ ತರುವಾಯ, ಮುಹೂರ್ತಕಾಲದಮೇಲೆ, ರಾಣಿ ಲಕ್ಷ್ಮೀಬಾಯಿಯವರು ಸಿಂಹಾಸನದಿಂದಿಳಿದು, ಪ್ರಸನ್ನಮುಖದೊಡನೆ, ಮೆಕಾಲೆ ದೊರೆಯವರಿಗೂ, ಸಕಲ ಸಭಿಕರಿಗೂ ಸಂಬೋಧಿಸಿ, ಮಲಬಾರೀ ಭಾಷೆಯಲ್ಲಿ ಅಸ್ಖಲಿತವಾಗಿ ಹೀಗೆ ಸಂಭಾಷಿಸಿದರು.

"ಪರಮ ಸನ್ಮಾನನೀಯರಾದ ಕರ್ನಲ್ ದೊರೆಯವರೆ! ಅನಾದಿಕಾಲದಿಂದಲೂ ಪಾಲಿಸಲ್ಪಟ್ಟು, ಈಸ್ಟಿಂಡಿಯಾ ಕಂಪೆನಿಯವರಿಂದ ಇದುವರೆಗೂ ಸಂರಕ್ಷಿಸಲ್ಪಟ್ಟ

ಈ ತಿರುವಾಂಕೂರು ಸಂಸ್ಥಾನವು ನನಗೆ ಪ್ರಾಪ್ತಿಸುವು ದೆಂದು ಇದುವರೆಗೂ ನಾನು ಸ್ವಪ್ನದಲ್ಲಾದರೂ ನೆನಸಿದ ವಳಲ್ಲ. ಈಗ ಈಶ್ವರೇಚ್ಛೆಯಿಂದ ಪರಲೋಕವಾಸಿ ಯಾದ ನನ್ನ ಮಾವನಾದ ವಂಚಿಪಾಲ ಮಹಾರಾಜರು ಕೇವಲ ಇಪ್ಪತ್ತೊಂಬತ್ತು ವರ್ಷ ಪ್ರಾಯದವರಾಗಿದ್ದರು. ಅವರ ಮಾವನವರು ಧರಿಸಿದ ಹಾಗೆ ರಾಜ ದಂಡವನ್ನು ಇವರೂ ಬಹುಕಾಲದವರೆಗೂ ಧರಿಸಬೇಕೆಂದು ಪದ್ಮನಾಭ ಸ್ವಾಮಿಯ ಆಜ್ಞೆಯಿಲ್ಲದೆ ಹೋಯಿತು. ಆ ಪದ್ಮನಾಭ ಸ್ವಾಮಿಯ ಇಚ್ಛಾನುಸಾರವಾಗಿಯೇ ನನಗೆ ರಾಜ್ಯವು ಪ್ರಾಪ್ತವಾಗಿರುವುದು. ಆದ್ದರಿಂದ ಅವನ ಆಜ್ಞೆ ನನಗೆ ಶಿರಸಾವಂದ್ಯವು. ನಾನು ಸ್ವಾಮಿಯಾಜ್ಞೆ ಶಿರಸಾವಹಿಸು ವುದಕ್ಕೆ ಸಿದ್ಧಳಾಗಿರುವೆನು. ಆದರೂ ನಾನು ಅಬಲೆಯು. ಅದೂ ಅಲ್ಲದೆ ಅಲ್ಪವಯಸ್ಕಳು. ಇಂಥ ದೊಡ್ಡಕಾರ್ಯಗಳ ಅನುಭವವು ನನಗೆ ಇಲ್ಲದಿರುವುದರಿಂದ ನಮ್ಮಲ್ಲಿ ಸ್ನೇಹ ಬೆ ಳೆಸಿದಾಗಿನಿಂದಲೂ ಈತಿರುವಾಂಕೂರು ರಾಜ್ಯವನ್ನು ಹಡೆ ದಮಕ್ಕಳ ಹಾಗೆ ಕಾಪಾಡಿಕೊಂಡು ಬಂದಂಥ ಆನರೆಬಲ್ ಈಸ್ಟಿಂಡಿಯಾ ಕಂಪೆನಿಯವರ ವಿನಹ ನನಗೆ ಇಂತಹ ಸ್ಥಿತಿ ಗೆ ಬೇರೇ ಆಧಾರವೇ ಇಲ್ಲ. ಆದ್ದರಿಂದ, ಕರ್ನಲ್ ದೊರೆ ಯವರೆ! ಇಂದಿನಿಂದ ನಿಮ್ಮನ್ನು ನಾನು ಸ್ವಂತ ಸಹೋ ದರನ ಹಾಗೆ ಭಾವಿಸಿ, ರಾಜ್ಯದಲ್ಲಿ ಪ್ರತಿಯೊಂದು ಕಾರ್ಯ ವನ್ನೂ ವಿಶ್ವಾಸ ಪೂರ್ವಕವಾಗಿ ನಿಮ್ಮ ಮೇಲೆಯೇ ಇರಿ ಸಿ, ಸರ್ವ ಭಾರವನ್ನೂ ಹಾಕುವೆನು. ಇದಕ್ಕಿಂತಲೂ ಅಧಿಕವಾಗಿ ಹೇಳಬೇಕಾದ್ದು ಏನೂ ಇಲ್ಲ."

ಈಕೆಯ ಗಂಭೀರವಾದ ಸಂಭಾಷಣೆಯನ್ನು ಕೇಳಿ ಸಭಿಕರೆಲ್ಲರೂ ಅನುಮೋದಿಸಿದರು. ಲಕ್ಷ್ಮೀಬಾಯಿ ಸಣ್ಣವಯಸ್ಸಿನವಳಾದ್ದರಿಂದ ಆಕೆಯು ಯಾವ ಸ್ವಭಾವವುಳ್ಳವಳಾಗುವಳೋ! ರಾಜ್ಯಭಾರವನ್ನು ಯಾವ ಪ್ರಕಾರ ಮಾಡುವಳೋ! ಪ್ರಾಪ್ತವಾದ ಅಧಿಕಾರವನ್ನು ಯಾವ ರೀತಿಯಲ್ಲಿ ನಿರ್ವಹಿಸಿಕೊಳ್ಳುವಳೋ! ಎಂದು ಲೋಕದವರಿಗೆ ವಿಚಾರವಾಗಿತ್ತು. ಆದರೆ ಆಕೆಯು ನಿರ್ಭಯವಾಗಿ ಸಿಂಹಾಸನದಿಂದಿಳಿದು ವಾಕ್ ಪ್ರೌಢಿಮೆಯಿಂದ ಅಸಮಾನ ಪ್ರಜ್ಞೆಯುಂಟಾಗಿ, ಸಭೆಯವರನ್ನು ತನ್ನ ಇಚ್ಛೆಯ ಪ್ರಕಾರ ಆಡಿಸುವ ವಾಗ್ಮಿಯ ಹಾಗೆ, ಲಕ್ಷ್ಮೀಬಾಯಿಯು ಗಂಭೀರ ರಸದೊಡನೆ ಸಂಭಾಷಿಸುವುದನ್ನು ಕೇಳಿ, ಅಲ್ಲಿನವರೆಲ್ಲರೂ ಬಹಳ ಆಶ್ಚರ್ಯಪಟ್ಟರು. ಆ ಸಂಭಾಷಣೆಯನ್ನು ಕೇಳಿದವರೆಲ್ಲರೂ, ಈಕೆಯು ಸಾಮಾನ್ಯಳಲ್ಲ ವೆಂಬುದಾಗಿಯೂ, ಈಕೆಯ ರಾಜ್ಯದಲ್ಲಿ ಪ್ರಜೆಗಳಿಗೆ ಸುಖವೇ ಹೊರತು ದುಃಖವಿಲ್ಲವೆಂಬುದಾಗಿಯೂ ನಿಶ್ಚಯಿಸಿದರು. ಆಕೆಯ ಮೃದು ಮಧುರ ಗಂಭೀರ ವಾಕ್ಯಗಳನ್ನು ಕೇಳಿ, ಕರ್ನಲ್ ಮೆಕಾಲೆ ದೊರೆಯವರು ಆಕೆಯಲ್ಲಿ ಅಧಿಕ ಪೂಜ್ಯಭಾವವನ್ನುಳ್ಳವರಾಗಿ, ಪ್ರತಿಕಾರ್ಯದಲ್ಲಿಯೂ ಆಕೆಗೆ ಸಹಾಯ ಮಾಡುವೆನೆಂದು ನಂಬಿಕೆ ಹುಟ್ಟುವ ಹಾಗೆ ಹೇಳಿದರು. ಈ ಪ್ರಕಾರ ರಾಜ್ಯಾಭಿಷೇಕವು ಸಮಾಪ್ತಿಯಾಯಿತು.

೭. ಅನಂತರ, ಲಕ್ಷ್ಮೀಬಾಯಿಯು ರಾಜನಿರ್ವಾಹಕತ್ವವನ್ನು ಹೊತ್ತುಕೊಂಡ ಒಡನೆಯೇ, ಪ್ರಜೆಗಳ ಕ್ಷೇ

ಮುಕ್ಕಾಗಿ ಯತ್ನಿಸತೊಡಗಿದಳು. ಆಕೆಯ ದೂರದೃಷ್ಟಿಯೂ, ದೀರ್ಘಾಲೋಚನೆಯೂ ಸಮಯಜ್ಞತ್ವವೂ, ಸೂಕ್ಷ್ಮಗ್ರಾಹ್ಯತ್ವವೂ ಬಹುಪ್ರಶಂಸನೀಯಗಳು. ಅಷ್ಟು ಚಿಕ್ಕವಯಸ್ಸಿನಲ್ಲಿ ಆಕೆಯ ಬುದ್ಧಿವಿಶಾಲತೆಯನ್ನು ನೋಡಿದಲಾಗಿ ಅತ್ಯಂತಾಶ್ಚರ್ಯವನ್ನು ಹೊಂದಿ, ಆಕೆಯು ವಯಸ್ಸಿನಲ್ಲಿ ಚಿಕ್ಕವಳಾಗಿದ್ದರೂ ಬುದ್ಧಿಯಲ್ಲಿ ಪ್ರೌಢಳೇ ಎಂದು ಹೇಳಬಹುದು. ತನ್ನ ರಾಜ್ಯದಲ್ಲೆಲ್ಲಾ ಪರಿಪೂರ್ಣನ್ಯಾಯವಿರಬೇಕೆಂದು ಆಕೆಯ ಕೋರಿಕೆ ಇತ್ತು. ದೀನದಶೆಗೆಬಂದ ತನ್ನ ರಾಜ್ಯವನ್ನು ಯಾವಪ್ರಕಾರದಲ್ಲಿಯಾದರೂ ಉನ್ನತಸ್ಥಿತಿಗೆ ತರಬೇಕೆಂದು ಮನಸ್ಸಿನಲ್ಲಿ ದೃಢವಾದ ಇಚ್ಛೆಯುಳ್ಳವಳಾದಳು. ರಾಜಪದ್ಧತಿಯಂತೆಯೇ, ಸಂಸ್ಕರಣಗಳು ಹೇಗೋ ಹಾಗೆ ಮಾಡಬೇಕೆಂದು ರಾತ್ರಿಹಗಲೂ ಮನಸ್ಸಿನಲ್ಲಿ ಯೋಚಿಸುತ್ತಿದ್ದಳು. ಇತರರಕಣ್ಣಿನಿಂದ ನೋಡಿಸಲು ಅವಳಿಗೆ ಯಾವಾಗಲೂ ಇಷ್ಟವಿರಲಿಲ್ಲ. ಅಂದರೆ ತ್ವರೆಯಾಗಿ, ತಾನು ಯೋಚಿಸದೆ ಇತರರುಹೇಳಿದಹಾಗೆ ನಡೆಯಲು ಅವಳು ಯಾವಾಗಲೂ ಸಮ್ಮತಿಸಿದವಳಲ್ಲ. ಮೆಕಾಲೆ ದೊರೆಯವರನ್ನು ತನ್ನ ಅಣ್ಣನಂತೆ ಭಾವಿಸಿದ್ದುದು ನಿಜವೇ. ನಂಬಿಕೆಯಾಗಿ ಅವನಿಂದ ಅನೇಕ ರಾಜ್ಯಕಾರ್ಯಗಳನ್ನು ಮಾಡಿಸಿದ್ದೂ ನಿಜವೇ. ಪ್ರತಿಸಂಗತಿಯನ್ನು ಕುರಿತೂ ಅವನ ಸಹಾಯವನ್ನು ಕೇಳುತ್ತಿದ್ದುದೂ ನಿಜವೇ. ಆದರೆ ಕಾರ್ಯವನ್ನು ಮಾಡುವಾಗೆಲ್ಲಾ ಇವಳು ತನ್ನ ಮನಸ್ಸಿನಲ್ಲಿ ಯೋಚಿಸಿದಪ್ರಕಾರವೇ ನಡೆಯುತ್ತಿದ್ದಳು.

ಹೊಸಪದ್ಧತಿಯನ್ನು ಮಾಡುವುದರಲ್ಲಿಯೂ, ಹಳೇ ಪದ್ಧತಿಯನ್ನು ತೆಗೆದುಹಾಕುವುದರಲ್ಲಿಯೂ, ನಾಗರಿಕತೆಯನ್ನು ವೃದ್ಧಿಮಾಡುವುದರಲ್ಲಿಯೂ, ಸ್ವಂತವಾಗಿ ರಾಣಿಯು ಅನೇಕನೂತನ ಕಲ್ಪನೆಗಳನ್ನು ಮಕಾಲೆ ದೊರೆಯವರಿಗೆ ತಿಳಿಸಿದಳು. ಇದರಿಂದ ರಾಣಿಯ ಅಸಮಾನ ಬುದ್ಧಿ ವೈಭವಗಳು ಸ್ಪಷ್ಟವಾಗುತ್ತವೆ. ವಂಚಿಪಾಲ ಬಲರಾಮವರ್ಮನ ರಾಜ್ಯದಲ್ಲಿ ಅತ್ಯಂತಾ ಸ್ವಸ್ಥತೆ ಹೇಕೆ ಉಂಟಾಯಿತೆಂತಲೂ, ಈಗ ಅನನ್ನು ಹೇಗೆ ಸರಿಮಾಡಬಹುದೆಂಬುದಾಗಿಯೂ ರಾಣಿಯು ಯೋಚಿಸುವಳಾದಳು. ಒಬ್ಬ "ಉಮಸಿತಂಬೀ" ಎಂಬ ಕುಮಂತ್ರಿಯಿಂದ ಇಷ್ಟು ಅನರ್ಥ ವುಂಟಾಯಿತೆಂದು ರಾಣಿಗೆ ತಿಳಿಯಿತು. ಆ ಸಂಗತಿ ತಿಳಿದ ಒಡನೆಯೇ ರಾಣಿಯು ಆ ಕುಮಂತ್ರಿಯನ್ನು ಕೆಲಸದಿಂದ ತೆಗೆದುಹಾಕಿದಳು. ತರುವಾಯ "ಯೋಗ್ಯನಾದ ದಿವಾನನು ದೊರಕುವವರೆಗೂ ನೀವೇ ಈ ಕೆಲಸವನ್ನು ನೋಡಬೇಕಾಗಿರುವದೆಂದು" ರಾಣಿಯು ಮೆಕಾಲೆ ದೊರೆಯುವರನ್ನು ಕೇಳಿದಳು. ಆದಕ್ಕವನು ಸಮ್ಮತಿಸಿ, ರೆಸಿಡೆಂಟ್ ಕೆಲಸವನ್ನೂ ದಿವಾನ್ ಕೆಲಸವನ್ನೂ ನಿರ್ವಹಿಸುತ್ತಿದ್ದನು.

೮. ಮೆಕಾಲೆ ದೊರೆಗೆ ದಿವಾನ್‌ಗಿರಿ ಕ್ಕೆಗೆ ಬಂದೊಡನೆಯೇ ಆತನು ಮಾಡಬೇಕಾದ ಕೆಲಸಗಳನ್ನು ಕುರಿತು ಆತನಿಗೆ ರಾಣಿಯುವರು ಹೀಗೆಂದು ಬರೆದರು, "(೧) ನಮ್ಮರಾಜ್ಯದಲ್ಲಿರುವ ಅಧಿಕಾರಿಗಳೆಲ್ಲರೂ ತಮ್ಮತಮ್ಮ ಕೆಲಸಗಳನ್ನು ಚೆನ್ನಾಗಿಮಾಡುತ್ತಿದಾರೆಯೋ ಇಲ್ಲವೇ

ಎಂಬ ಅಂಶವನ್ನು ಮೊಟ್ಟಮೊದಲು ವಿಚಾರಿಸುವುದು, (೨) ನ್ಯಾಯಸ್ಥಾನಗಳಲ್ಲಿಯೂ ಇತರ ಕಚೇರಿಗಳಲ್ಲಿಯೂ ನಿಯಾಮಕವಾಗಿ ಕೆಲಸಗಳು ನಡೆಯುತ್ತವೆಯೋ ಇಲ್ಲವೇ ? ಎಂದು ವಿಚಾರಿಸಿ ತಪ್ಪದಹಾಗೆ ಜರುಗುವಂತೆ ಮಾಡುವುದು, (೩) ಯಾರಾದರೂ ಸಂಸ್ಥಾನದಲ್ಲಿ ಉದ್ಯೋಗಸ್ಥರು ಕೆಲಸವನ್ನು ಚೆನ್ನಾಗಿಮಾಡದೆ ಇದ್ದಲ್ಲಿ ಅವರಿಗೆ ಜುರ್ಮಾನೇಮೊದಲಾದ ಅಲ್ಪಶಿಕ್ಷೆಯನ್ನು ವಿಧಿಸಿ, ಅವರನ್ನು ದೂರಿಗೆ ತರಬೇಕೇಹೊರತು, ಏಕಾಏಕೀ ಅವರ ಬಾಯಿತುತ್ತು ತೆಗೆಯಬಾರದು ; (೪) ವಸೂಲೀ ಲೆಕ್ಕಗಳನ್ನು ಚೆನ್ನಾಗಿ ನೋಡಿ, ಆ ಮೇಲೆ ಬಾಕಿಗಳೆಲ್ಲವನ್ನೂ ವಸೂಲುಮಾಡಬೇಕಾಗಿರುವುದು." ಈ ಸಂಗತಿಗಳೆಲ್ಲವೂ ರಾಣಿಯು ಸ್ವಂತವಾಗಿ ಯೋಚಿಸಿ ಬರೆದುದು. ಆಕೆಯ ಬುದ್ಧಿವಿಕಾಸವು ಇದರಿಂದಲೂ ವ್ಯಕ್ತವಾಗುವುದು.

೯. ಈ ಪ್ರಕಾರ ರಾಣಿಯು ಆಜ್ಞಾಪಿಸಿದೊಡನೆಯೇ, ಮಕಾಲೆ ದೊರೆಯು ಆ ಕೆಲಸಗಳನ್ನು ಮಾಡಲಾರಂಭಿಸಿದರು.

ಮೊದಲು ಸರ್ಕಾರದ ಉದ್ಯೋಗಸ್ಥರೆಲ್ಲರೂ ತಮ್ಮ ತಮ್ಮ ಕೆಲಸಗಳನ್ನು ಕಾನೂನಿನ ನಿಯಾಮಕಪ್ರಕಾರ ಮಾಡಿಕೊಂಡಿರುವುದೆಂದು ಆಜ್ಞಾಪತ್ರಿಕೆಯನ್ನು ಪ್ರತಿಗ್ರಾಮದಲ್ಲಿ ಉದ್ಯೋಗಸ್ಥರಿಗೂ ಕಳುಹಿಸಿದನು. ಅವರೆಲ್ಲರೂ ತನ್ನ ಆಜ್ಞೆಯಪ್ರಕಾರ ನಡೆಯುವರೋ ಇಲ್ಲವೋ ಎಂದು ನೋಡುವುದಕ್ಕೆ, ಮಕಾಲೆದೊರೆಯೇ ಸ್ವಂತವಾಗಿ ರಾಜ್ಯ

ದಲ್ಲಿರುವ ಪ್ರತಿಗ್ರಾಮದಲ್ಲಿಯೂ ತಿರುಗುತಿದ್ದನು. ಮೊದಲು ಅನೇಕ ಸಂಗಟಗಳು ಬಂದವು. ಆದರೂ ಎಲ್ಲವನ್ನೂ ಸಹಿಸಿಕೊಂಡು ಬಹಳ ಪ್ರಯಾಸಪಟ್ಟು ಮೆಕಾಲೆಯವರು ತಮ್ಮ ಇಷ್ಟಪ್ರಕಾರವೇ ನಡೆಸಿದರು. ಕೆಳಗಿನ ರಾಜ ಉದ್ಯೋಗಸ್ಥರೆಲ್ಲರೂ ಬಹಳ ಸೋಮಾರಿಗಳಾಗಿ ಮೆಕಾಲೆಯವರ ಎಷ್ಟು ಕಠಿಣವಾದ ಆಜ್ಞೆಯನ್ನಾದರೂ ಲಕ್ಷ್ಯಮಾಡದೆಹೋದರು. ಹೀಗೆ ನಿರ್ಭಯವಾಗಿ ನಿದ್ರೆಹೋಗುವರೆಲ್ಲರನ್ನೂ ಮೆಕಾಲೆದೊರೆಯವರು ಎಚ್ಚರಿಕೆಯಾಗುವಂತೆ ಎಬ್ಬಿಸುತ್ತಿದ್ದರು. ಕೈಲಾದಮಟ್ಟಿಗೂ ಅವರನ್ನು ಉದ್ಯೋಗದಿಂದ ತೆಗೆಯದೆ ಚಿಕ್ಕಮಕ್ಕಳಿಗೆ ಹೊಡೆದು ಬುದ್ಧಿಕಲಿಸುವಹಾಗೆ, ಜುಲ್ಮಾನೆಮೊದಲಾದ ಶಿಕ್ಷೆಗಳಿಂದ ದಾರಿಗೆ ತರುತ್ತಿದ್ದರು. ಆದರೆ ಕೆಲವರನ್ನು ಮಾತ್ರ ಕೆಲಸದಿಂದ ನಿರ್ವಾಹವಿಲ್ಲದೆ ತೆಗೆಯಬೇಕಾಯಿತು. ಹೀಗೆ ಎಲ್ಲಾಕಡೆಗಳಲ್ಲಿಯೂ ಬಂದೋಬಸ್ತಿಗೆ ಪ್ರಾರಂಭಿಸಿದೊಡನೆಯೇ, ರಾಜ್ಯದಲ್ಲಿನ ವ್ಯಾಪಾರಗಳು ನಿಯಾಮಕವಾಗಿ ನಡೆಯಲು ಪ್ರಾರಂಭವಾದವು. ಪೂರ್ವದ ದಿವಾನನಾದ " ಉಮನೀತಂಬಿ " ಯನ್ನು ಕೆಲಸದಿಂದ ತೆಗೆದು, ರಾಣಿಯವರು ಆ ಕೆಲಸದಮೇಲೆ ಮೆಕಾಲೆದೊರೆಯನ್ನೇ ಏರ್ಪಡಿಸಿದುದರಿಂದ, " ಉಮನೀತಂಬಿ "ಯು ಕರ್ನಲ್‌ದೊರೆಯನ್ನು ದ್ವೇಷಿಸುತ್ತಿದ್ದನು. ಒಂದಾನೊಂದುಸಮಯದಲ್ಲಿ ಅವನು ಕರ್ನಲ್‌ದೊರೆಗೆ ವಿಷಪ್ರಯೋಗಮಾಡಲು, ಯತ್ನಿಸಿದನಂತೆ. ಈ ಸಂಗತಿ ರಾಣಿಯವರಿಗೆ ತಿಳಿದಬಡನೆಯೇ ಆಕೆಯು ಅದನ್ನು ಕುರಿತು ಯೋಚನೆ

ಮಾಡಿ, ಸಾಕ್ಷ್ಯಗಳನ್ನು ವಿಚಾರಿಸಿ, ತಪ್ಪಿತಸ್ಥನೆಂದು ಸ್ಥಿರಪಟ್ಟದ್ದರಿಂದ 'ಉಮಸೀತಂಪಿ' ಯನ್ನು ಚಂಗಲ್ಪಟ್ಟಿನಲ್ಲಿರುವ ಕಾರಾಗೃಹದಲ್ಲಿ ರಾಜಕೀಯ ಖೈದಿಯನ್ನಾಗಿಟ್ಟಳು. ಅವನು ಅಲ್ಲಿಯೇ ಕೆಲದಿವಸಗಳಮೇಲೆ ಗತಿಸಿದನು.

೧೦. ತರುವಾಯ ರಾಣಿಯುವರು ವಸೂಲಿವಿಷಯದಲ್ಲಿ ವಿಚಾರಮಾಡಲಾಗಿ ಆದಾಯವೆಷ್ಟೋ, ಸಾಲವೆಷ್ಟೋ, ತಿಳಿದುಕೊಳ್ಳುವುದು ಬಹುಕಷ್ಟವಾಗಿತ್ತು. ಈ ಕಷ್ಟತರವಾದ ಅಸ್ಪಷ್ಟವಾದ ಲೆಕ್ಕಗಳು ತಿರುವಿಹಾಕಿ ನೋಡುವಲ್ಲಿ ಈಷ್ಟ್ ಇಂಡಿಯಕಂಪೆನಿಯುವರಿಗು ಮತ್ತು ತಿನವಲ್ಲಿ, ಕೋಟಾರ, ಬೊಂಬಾಯಿ ಮೊದಲಾದ ಸ್ಥಳಗಳಲ್ಲಿನ ಸಾಹುಕಾರರಿಗೂ ಕೊಡಬೇಕಾದ ಸಾಲವು ಅಧಿಕವಾದದೆಂದು ಹೊರಪಟ್ಟಿತು. ಈ ಸಾಲವೆಲ್ಲವನ್ನೂ ಲೆಕ್ಕಮಾಡಿ, ನೋಡಲಾಗಿ ಸಂಸ್ಥಾನದ ಒಂದುವರುಷದ ಆದಾಯಕ್ಕೆ ಸರಿಯಾಗಿತ್ತು. ಇಂಥದೊಡ್ಡ ಸಾಲವು ತೀರುವ ಉಪಾಯವನ್ನು ಕಾಣದೆ, ರಾಣಿಯು ಯೋಚಿಸಿ, ಯೋಚಿಸಿ, ಕೊನೆಗೆ ಒಂದು ಉಪಾಯವನ್ನು ಮಾಡಿದಳು. ತಿರುವಾಂಕೂರು ರಾಜ್ಯದಲ್ಲಿ ದೊಡ್ಡದೇವಾಲಯಗಳು ಅನೇಕವಿವೆ, ಅವುಗಳಲ್ಲಿ ಬಹುಧನವಿದ್ದರೂ ಪೂಜೆಯೂ, ಅರ್ಚನೆಯೂ ಕ್ರಮವಾಗಿ ಜರುಗದೆ ಇದ್ದದರಿಂದ, ಆ ಹಣವನ್ನು ಸಂಸ್ಥಾನದಮೇಲೆ ಉಪಯೋಗಿಸಿ, ರಾಜರವರೇ ದೇವಸ್ಥಾನಗಳ ಉತ್ಸವಗಳನ್ನು ನಡಿಸುವುದು ಎಂದು ಪೂರ್ವದ ದಿವಾನನು ಸೂಚಿಸಿದ್ದನು. ಈ ಸೂಚನೆಯು ರಾಣಿಯುವರ ಜ್ಞಾಪಕಕ್ಕೆಬಂದು, ಸಮ್ಮತಳಾಗಿ, ಅದರಮೇಲೆ

ಅವಳು ದೇವಸ್ಥಾನದಲ್ಲಿದ್ದ ಅಧಿಕ ಸಂಚಯವನ್ನು ಸ್ವಾರ್ಥ ಪರಮಾರ್ಥಗಳಿಗೆ ಉಪಯೋಗಿಸಲು, ನಿಶ್ಚಯಿಸಿದಳು. ಅದು ಹೇಗೆಂದರೆ ;—ದೇವಸ್ಥಾನಗಳಿಂದ ಸಾಲ ತೆಗೆದುಕೊಂಡು ಋಣವಿಮುಕ್ತರಾಗಿ ಮಾಡುವುದು ಸ್ವಾರ್ಥವು. ಸುಮ್ಮನೆ ಅಭುಕ್ತಮೂಲೆ ಪಾಲಾಗುತ್ತಿದ್ದ ದೇವಸ್ಥಾನಗಳ ಧನಗಳಿಗೆ ಬಡ್ಡಿ ದೊರಕುವಂತೆ ಮಾಡುವುದೇ ಪರಮಾರ್ಥವು. ಹೀಗೆ ಯೋಚಿಸಿ ರಾಣಿಯುವರು ಈ ಸಂಗತಿಯನ್ನು ಮೆಕಾಲೆದೊರೆಯುವರಿಗೆ ತಿಳಿಯಪಡಿಸಿದರು. ಅವರು ರಾಣಿಯುವರ ಯೋಚನಾಶಕ್ತಿಯನ್ನು ಪ್ರಶಂಸಿಸಿ, ಸಮ್ಮತಿಸಿದರು. ಅದನ್ನು ಪ್ರಧಾನಿಗಳೂ ಸಮ್ಮತಿಸಿದನಂತರ, ತ್ವರೆಯುಲ್ಲಿಯೇ ರಾಣಿಯು ಒಂದು ಸಭೆಯನ್ನು ಮಾಡಿದಳು. ಆ ಸಭೆಗೆ ದೇವಸ್ಥಾನಗಳ ಅಧಿಕಾರಿಗಳೆಲ್ಲರನ್ನೂ ಕರೆಸಿ, ಅವರಿಗೆ ತನ್ನ ಉದ್ದೇಶವನ್ನು ತಿಳುಹಿ, ಅದರಮೇಲೆ ದೇವಸ್ಥಾನಗಳಿಗೂ ತನಗೂ ಉಂಟಾಗುವ ಲಾಭವನ್ನು ಸ್ಪಷ್ಟಪಡಿಸಿದಳು. ಈ ಸಂಗತಿ ಯೆಲ್ಲವೂ ಅವರಿಗೆ ವಿಶದವಾದಮೇಲೆ, ಅವರೆಲ್ಲರೂ ರಾಣಿಯು ಹೇಳಿದಹಾಗೆ ನಡೆದುಕೊಳ್ಳಲು ಸಮ್ಮತಿಸಿದರು. ಇದರಮೇಲೆ ದೇವಸ್ಥಾನಗಳನ್ನು ಒಂದೋಬಸ್ತು ಮಾಡುವುದಕ್ಕೆ ರೇಡಿರಾವ್ ಉರುಫ್ ವೆಂಕಟರಾವ್ ಎಂಬುವನನ್ನು ಅಧಿಕಾರಿಯುನ್ನಾಗಿ ರಾಣಿಯು ಏರ್ಪಡಿಸಿದಳು. ಅವನು ಆ ಕೆಲಸವನ್ನು ಬಹಳ ಶ್ರದ್ಧೆಯಿಂದ ಮಾಡುತ್ತಿದ್ದುದರಿಂದ ಕೆಲವು ದಿನಗಳಲ್ಲಿಯೇ ಸಂಸ್ಥಾನದ ಸಾಲವೆಲ್ಲವೂ ತೀರಿತು.

೧೧. ಹೀಗೆ ಸಾಲವನ್ನು ಪರಿಹಾರಮಾಡಿ, ನ್ಯಾಯಸಭೆಯನ್ನು ಸಂಸ್ಕರಿಸುವುದಕ್ಕೆ ಯತ್ನಿಸಿದಮೇಲೆ, ಸಂಸ್ಕೃತದಲ್ಲಿ ಪಾಂಡಿತ್ಯವುಳ್ಳವಳಾದ ಈ ರಾಣಿಯು ಪೂರ್ವಾಚಾರದಲ್ಲಿ ಇಷ್ಟವುಳ್ಳವಳಾಗಿ ಮನುಸ್ಮೃತಿ, ಪರಾಶರಸ್ಮೃತಿ, ವಿಜ್ಞಾನೇಶ್ವರ ಮೊದಲಾದ ಗ್ರಂಥಗಳ ಆಧಾರದಮೇಲೆಯೂ, ಇಂಡಿಯಾ ಗವರ್ನಮೆಂಟಿನ ಕಾನೂನುಗಳ ಆಧಾರದಮೇಲೆಯೂ, ಪ್ರಜೆಗಳಿಗೆ ಹಿತಕರವಾಗುವಂತೆ ತನಗೆ ಯುಕ್ತವೆಂದು ತೋರಿದ ಕಾನೂನಿನ ಕೆಲಸವನ್ನು ಕುರಿತು ಒಂದು ದೊಡ್ಡ ಕಾನೂನಿನ ಗ್ರಂಥವನ್ನು ತಮ್ಮ ರಾಜ್ಯದಲ್ಲಿ ನಿರ್ಮಿಸಬೇಕೆಂದು ಯೋಚಿಸಿದಳು. ಆದರೆ ಇಂಥ ದೊಡ್ಡ ಗ್ರಂಥವು, ನ್ಯಾಯಶಾಸ್ತ್ರದಲ್ಲಿ ಅಸಮಾನ ಪ್ರಜ್ಞೆಯುಳ್ಳ ವಿದ್ವಾಂಸರ ಸಹಾಯವಿಲ್ಲದೆ ಆಗುವುದಿಲ್ಲವೆಂದು ರಾಣಿಯವರಿಗೆ ತಿಳಿಯಿತು. ಇಷ್ಟರಲ್ಲಿಯೇ ರಾಣಿಯವರಿಗೆ ವಿವಾಹ ಸಮಯವು ಬಂತು. ತುಂಬಿದ ಯವ್ವನಾವಸ್ಥೆಯು ಪ್ರಾಪ್ತವಾದ್ದರಿಂದ, ಇನ್ನು ವಿವಾಹವನ್ನು ಮಾಡಿಕೊಳ್ಳಬೇಕೆಂದು ಲಕ್ಷ್ಮೀಬಾಯಿಯವರು ನಿಶ್ಚಯಿಸಿದರು. ಪೂರ್ವದ ರಾಣಿಯ ಗಂಡನ ಬಂಧುವಾಗಿ ಕುಲೀನ ಬ್ರಾಹ್ಮಣನಾದ “ರಾಜರಾಜವರ್ಮ” ಎಂಬ ವಿದ್ವಾಂಸನೊಬ್ಬನು ಚೆಂಗನಾಸೇರಿ ಎಂಬ ಗ್ರಾಮದಲ್ಲಿ ವಾಸಮಾಡುತ್ತಿದ್ದನು. ಅವನ ವಿದ್ವತ್ತಿಗೆ ಮೋಹಿಸಿ, ಅವನನ್ನು ರಾಣಿಯು ವರಿಸಿದಳು. ಜಾಗ್ರತೆಯಾಗಿಯೇ ಇವರಿಗೆ ವಿವಾಹವಾಗಿ ರಾಜವರ್ಮನು “ಕೋವಿಲತಂಬೂರಾನ್” ಪದವಿಯನ್ನು ಹೊಂದಿದನು. ಇವನು

ರಾಣಿಯವರಿಗಿಂತ ಒಂದು ವರ್ಷ ದೊಡ್ಡವನು. ಇವನು ವಿದ್ವಾಂಸನೆಂದು ಕೀರ್ತಿಹೊಂದಿದವನು. ಮುಖ್ಯವಾಗಿ ಇವನಿಗೆ ಪ್ರಿಯವಾದದ್ದು ನ್ಯಾಯಶಾಸ್ತ್ರ. ಸಿದ್ಧಾಂತ ಮುಕ್ತಾವಳಿ ಮುಂತಾದ ನ್ಯಾಯಶಾಸ್ತ್ರಗಳನ್ನೋದಿ, ಈತನು ನ್ಯಾಯವಿಶಾರದನಾಗಿದ್ದನು. ಧರ್ಮಶಾಸ್ತ್ರದಲ್ಲಿಯೂ ಈತನಿಗೆ ಹೆಚ್ಚು ಪ್ರವೀಣತೆ ಯಿತ್ತು. ಇಂಥ ಅಸಾಮಾನ್ಯ ಪಂಡಿತನಾದ ಪತಿಯಿಂದ ರಾಣಿಯವರು ಮಾಡಬೇಕೆಂದಿರುವ ಗ್ರಂಥ ನಿರ್ಮಾಣಕ್ಕೆ ಬಹು ಸಹಾಯ ಉಂಟಾಗುತ್ತಿತ್ತು ಎಂದು ಬೇರೆ ಹೇಳಬೇಕೇ ? ರಾಣಿಯವರಿಗೆ ಇವರು ಎಲ್ಲಾ ಕಾರ್ಯಗಳಲ್ಲಿಯೂ ಸಹಾಯಭೂತರಾಗಿ ವರ್ತಿಸುತ್ತಿದ್ದರು.

೧೨. ಓದುವವರುಗಳಿರಾ ! ಪ್ರೌಢತ್ವದಲ್ಲಿ ವಿವಾಹ ಮಾಡಿಕೊಳ್ಳುವ ಪದ್ಧತಿಯು ಮಲಬಾರ್ ದೇಶದಲ್ಲಿದ್ದದ್ದರಿಂದಲ್ಲವೇ, ಲಕ್ಷ್ಮೀಬಾಯಿಯವರಿಗೆ ವಯೋರೂಪಗುಣ ವಿದ್ಯೆಗಳಲ್ಲಿ ಸಮಾನನಾದ ಪತಿಯು ದೊರಕಿದನು. ಪ್ರೌಢ ವಿವಾಹಗಳನ್ನು ನಡೆಸಿದಲ್ಲಿ ಸ್ತ್ರೀಯು ನೀತಿಭ್ರಷ್ಟಳಾಗುವಳೆಂತಲೂ, ಸಂಘ ಸೌಖ್ಯವು ತಪ್ಪುವುದೆಂತಲೂ ವೃಥಾ ವಾಕ್ಪಾಂಡಿತ್ಯವನ್ನು ತೋರಿಸುವಂಥವರು, ರಾಣಿ ಲಕ್ಷ್ಮೀಬಾಯಿಯ ಉದಾಹರಣೆಯನ್ನು ನೋಡಿ, ವಿದ್ಯಾ ಪ್ರೌಢ ವಿವಾಹದಿಂದ ಸ್ತ್ರೀಯರ ಕುಟುಂಬ ಸೌಖ್ಯವು ವೃದ್ಧಿಯಾಗುವುದೇ ಹೊರತು ತಗ್ಗಲಾರದೆಂದು, ಮನಸ್ಸಮಾಧಾನ ಮಾಡಿಕೊಳ್ಳಬಹುದು.

ಬೊಂಬೆಗಳ ಮದುವೆಯಹಾಗೆ ಮಾತನಾಡುವುದಕ್ಕೆ ತಿಳಿಯದ ಹಸುಮಕ್ಕಳಿಗೆ ಮದುವೆಯನ್ನು ಮಾಡುವುದ ರಿಂದುಂಟಾಗುವ ನಷ್ಟವು ಎಲ್ಲರಿಗೂ ತಿಳಿದ ವಿಷಯವೇ ಆಗಿರುವುದರಿಂದ ಇಲ್ಲಿ ವಿವರಿಸಬೇಕಾದ ಅಗತ್ಯವಿಲ್ಲ.

೧೩ ವಿವೇಕಿಯಾದ ಲಕ್ಷ್ಮೀಬಾಯಿಗೆ ವಿದ್ವಾವಂತನಾದ ಕೋವಿಲ್ ತಂಬೂರಾನ್ ಸಾಂಗತ್ಯದಿಂದ ಮತ್ತಷ್ಟು ಉತ್ಸಾಹವುಂಟಾಯಿತು. ಇವಳು ಪ್ರಾರಂಭಿಸಿದ ಕಾನೂನಿನ ಗ್ರಂಥವನ್ನು ಶೀಘ್ರವಾಗಿ ಬರೆಯುತ್ತ, ನಡುನಡುವೆ ಅದನ್ನು ಮೆಕಾಲೆದೊರೆಯವರಿಗೆ ತೋರಿಸುತ್ತಾ, ಅವರ ಅನುಮತಿಯನ್ನು ಹೊಂದಿ, ಆ ಗ್ರಂಥವನ್ನು ಸಂಪೂರ್ಣ ಮಾಡಿದಳು. ಅದಕ್ಕೆ "ಸತ್ಯಾವರ್ಧಕ" ಎಂದು ಹೆಸರನ್ನಿಟ್ಟಳು. ೧೮೧೨ನೇ ಸಂವತ್ಸರದಿಂದ ರಾಜ್ಯದ ಸರ್ವ ವ್ಯಾಪಾರವನ್ನೂ ಈ ಸತ್ಯಾವರ್ಧಕವನ್ನನುಸರಿಸಿ ನಡೆಸುತ್ತಿದ್ದಳು. ಈ ಹೊಸ ಕಾನೂನಿನ ಪ್ರಕಾರ ನ್ಯಾಯವು ಜರುಗಬೇಕೆಂದು ರಾಣಿಯು ಹೊಸನ್ಯಾಯಸ್ಥಾನಗಳನ್ನೇರ್ಪಡಿಸಿದಳು. ಕ್ರಮವಾಗಿ ನ್ಯಾಯಸ್ಥಾನಗಳಲ್ಲಿಯೂ ಸಂಸ್ಕೃತ, ಮಲಬಾರಿ ಇವುಗಳಲ್ಲಿ ಪ್ರವೀಣರಾಗಿರುವವರನ್ನು ನಿಯಮಿಸಿದಳು. ಕೊಚ್ಚಿ ನಿವಾಸಸ್ಥನಾದ ರಾಮನ್ ಮೀನನ್ ಎಂಬ ಪಂಡಿತೋತ್ತಮನನ್ನು ಪ್ರಧಾನ ನ್ಯಾಯಸಭೆಯಲ್ಲಿ ಮುಖ್ಯ ನ್ಯಾಯಾಧೀಶನನ್ನಾಗಿ ಏರ್ಪಡಿಸಿದಳು. ತರುವಾಯ, ರಾಣಿಯು ಒಂದು ಕಾನೂನನ್ನೇರ್ಪಡಿಸಿ, ಪ್ರಜೆಗಳಿಗೆ ಭಾರವಾದ ಕಂದಾಯಗಳನ್ನು ಕಮ್ಮಿ ಮಾಡಿದಳು. ಉಪ್ಪಿನ ವ್ಯಾಪಾರವನ್ನು

ವೃದ್ಧಿಪಡಿಸಿದಳು. ಹೀಗೆ ದಿನದಿನಕ್ಕೆ ಪ್ರವರ್ಧಮಾನವಾಗಿ ರಾಜ್ಯವು ಉನ್ನತಸ್ಥಿತಿಯನ್ನು ಹೊಂದುತಿತ್ತು.

೧೪. ರಾಣಿ ಲಕ್ಷ್ಮೀಬಾಯಿಯವರು ಪದ್ಮನಾಭ ಸ್ವಾಮಿಯವರಲ್ಲಿ ಅಧಿಕ ವಿಶ್ವಾಸವುಳ್ಳವರಾಗಿ, ಆ ದೇವರನ್ನು ಭಕ್ತಿಪ್ರಪತ್ತಿಗಳಿಂದ ಪೂಜಿಸುತ್ತಿದ್ದರು. ವಂಶಪರಂಪರೆಯಾಗಿ ಜರುಗುತ್ತಿದ್ದ ದಾನಧರ್ಮಗಳನ್ನು ತಪ್ಪದೇ ನಡೆಸಬೇಕೆಂತಲೂ, ಪೂರ್ವೀಕರಿಗಿಂತ ಅಧಿಕವಾಗಿ ದಾನದರ್ಮಗಳನ್ನು ಮಾಡಬೇಕೆಂತಲೂ, "ಧರ್ಮವರ್ಧಿನೆ" ಎಂಬ ಬಿರುದನ್ನು ಸಾರ್ಥಕಪಡಿಸಬೇಕೆಂತಲೂ ರಾಣಿಯವರು ಸದಾಯೋಚಿಸುತ್ತಿದ್ದರು.

ಆದರೆ ದಿವಾನರಾದ ಮೆಕಾಲೆ ದೊರೆಯವರು ಆಂಗ್ಲೇಯರಾದುದರಿಂದ ದಾನ, ಧರ್ಮ, ಅನ್ನಸತ್ರ, ಮೊದಲಾದುವೆಲ್ಲವೂ ವ್ಯರ್ಥವಾದ ಖರ್ಚೆಂದು ತಿಳಿಯುತ್ತಿದ್ದರು. ತರುವಾಯ ಧರ್ಮಸಂಬಂಧವಾದ ಕಾರ್ಯವು ಸರಿಯಾಗಿ ನಡೆಯುವುದೋ ಇಲ್ಲವೋ ಎಂಬುದನ್ನು ಕೂಡ ಮೆಕಾಲೆ ದೊರೆಯು ವಿಚಾರಿಸದೇಲೂ, ಆ ವಿಷಯವಾದ ಪ್ರಜೆಗಳ ಮೊರೆಯನ್ನು ಕೇಳದೇಲೂ ಉದಾಸೀನನಾದನು. ಅದರಿಂದ ರಾಜ್ಯದಲ್ಲಿ ದಾನಧರ್ಮ ವಿಷಯವಾಗಿ ಮತ್ತಷ್ಟು ಅವ್ಯವಸ್ಥೆ ಜರುಗುತ್ತಿತ್ತು.

೧೫. ಒಂದುದಿನ ರಾಮೇಶ್ವರಕ್ಕೆ ಹೋಗುವಂಥ ಯಾತ್ರಿಕರು ಕೆಲವರು ರಾಣಿಯಸಮೀಪಕ್ಕೆ ಬಂದು ತಮಗೆ ಅನ್ನಪಾನಾದಿಗಳು ದೊರಕುವುದಿಲ್ಲವೆಂತಲೂ, ಈ ವಿಷಯವಾಗಿ ದಿವಾನರವರು ನಿರ್ಲಕ್ಷ್ಯವನ್ನು ಮಾಡುತ್ತಿರುವರೆಂತಲೂ ಮೊರೆಯಿಟ್ಟುಕೊಂಡರು. ಅವರಿಗೆ ಸ್ವಲ್ಪ

ಧನವನ್ನು ಕೊಟ್ಟು ಕಳುಹಿಸಿ ರಾಣಿಯುವರು ಮೆಕಾಲೆ ದೊರೆಯುವರಿಗೆ ಹೀಗೆಂದು ಬರೆದರು. "ನನಗೆ ಜ್ಯೇಷ್ಠ ಭ್ರಾತೃಸಮಾನರಾದ ಕರ್ನಲ್ ದೊರೆಯುವರಿಗೆ—ನೀವು ಎಲ್ಲಾ ಕೆಲಸವನ್ನೂ ದಕ್ಷತೆಯಿಂದ ಮಾಡುತ್ತಿರುವುದರಿಂದ ನಿಮಗೆ ದೇಶದ ಘನತೆಯೂ, ಸ್ಥಿತಿಯು ರೀತಿಯೂ, ರೂಢಿಯೂ, ಆಚಾರವೂ ಇವೆಲ್ಲವೂ ಸಂಪೂರ್ಣವಾಗಿ ತಿಳಿದು ಇರುವುವು. ಆದ್ದರಿಂದ ಅದನ್ನು ಕುರಿತು ನಾನು ನಿಮಗೆ ಬರೆಯುವುದನಾವಶ್ಯಕ. ನಮ್ಮ ಪೂರ್ವಿಕರು ಏರ್ಪಡಿಸಿದ ನಿಯಾಮಕಗಳನ್ನೂ, ಪದ್ಧತಿಗಳನ್ನೂ, ಆಚಾರಗಳನ್ನೂ ಅವರ ದಯಾಳುತ್ವಕ್ಕೆ ಉದ್ಯೋತಕವಾಗಿಯೂ ಪ್ರಜೆಗಳ ಹಿತಕ್ಕಾಗಿಯೂ, ದೇಶಕ್ಷೇಮಕ್ಕಾಗಿಯೂ ಏರ್ಪಡಿಸುವುದು ತರುವಾಯ ನೀವು ಪೂರ್ವದ ನಿಯಾಮಕ ಪ್ರಕಾರ ತಪ್ಪದೆ ರಾಜ್ಯವನ್ನು ನಡೆಸುವುದು. ಅದರಲ್ಲಿ ಹೆಚ್ಚುಕಡಮೆಯೇನೂ ಇಲ್ಲದಿರಬೇಕೆಂದು ನಿಮಗೆ ನನ್ನ ಬಿನ್ನಹವು. ರಾಮೇಶ್ವರಕ್ಕೆ ಹೋಗುವ ಯಾತ್ರಿಕರಿಗೆ ಅನ್ನಪಾನಾದಿಗಳೂ, ದಕ್ಷಿಣೆಯೂ ದೊರೆಕುವುದಿಲ್ಲವೆಂಬ ಮೊರೆಯು ನನ್ನ ಕಿವಿಗೆ ಸೋಕಿತು. ಆ ಸಂಗತಿಯನ್ನು ನಿಮಗೆ ತಿಳಿಯಪಡಿಸುತ್ತೇನೆ. ಆದ್ದರಿಂದ ನೀವು ಈ ವಿಷಯವಾಗಿ ಬಂದೋಬಸ್ತು ಮಾಡುವಿರೆಂದು ನಂಬುವೆನು. ಮಹಾಸಿಂಗ್ ಕಿಲ್ಲೆದಾರನಿಗೂ ಕೂಡ ಬಂದೋಬಸ್ತು ಮಾಡುವಹಾಗೆ ಆಜ್ಞೆಯನ್ನು ಮಾಡಿರುವೆನು. ಉತ್ತರ ಪ್ರತ್ಯುತ್ತರದಿಂದ ಯಾವ ಕೆಲಸವಾದರೂ ಜಾಗ್ರತೆಯಲ್ಲಿ ಆಗುವುದು. ಕರ್ನಲ್ ದೊರೆಯುವರೂ ಈ ಮಾತು

ಗಳನ್ನು ಸನ್ಮಾನಿಸುವರೆಂದು ನಂಬುವೆನು. ನಾನು ಸ್ತ್ರೀಯಾದುದರಿಂದ ನಿಮ್ಮನ್ನು ಜ್ಯೇಷ್ಠ ಸಹೋದರನ ಹಾಗೆ ಭಾವಿಸಿ ರಾಜ್ಯದಲ್ಲಿರುವ ಕಾರ್ಯವೆಲ್ಲವನ್ನೂ ವಿಶ್ವಾಸವಾಗಿ ನಿಮಗೆ ಸಮರ್ಪಿಸಿದೆನು. ಆದ್ದರಿಂದ ನನ್ನ ರಾಜ್ಯದಲ್ಲಿ ದಾನಧರ್ಮಗಳು ಇದುವರೆಗೂ ಹೇಗೆ ನಡೆಯುತ್ತಿದ್ದುವೋ ಹಾಗೆ ಜರುಗಿಸಿ, ನೀವು ನಮ್ಮ ದೇಶಕ್ಕೂ ನಮ್ಮ ಪ್ರಜೆಗಳಿಗೂ ಸುಖವನ್ನುಂಟುಮಾಡುವಿರೆಂದು ಸಂಪೂರ್ಣವಾಗಿ ನಂಬುವೆನು.''

(ದಸ್ಕತ್) ಲಕ್ಷ್ಮೀಬಾಯಿ.

ರಾಣಿಯವರು ತಾವು ನಂಬಿದ ಧರ್ಮವನ್ನು ದೃಢವಾಗಿ ಪಾಲಿಸುವುದಕ್ಕೆ ಎಷ್ಟು ತತ್ಪರರಾಗಿದ್ದರೋ, ಮತ್ತು ಆಂಗ್ಲೇಯರೊಂದಿಗೆ ಸ್ವತೇಜೋಬಲವನ್ನು ನಿರ್ಭಯದಿಂದ ಹೇಗೆ ಪ್ರಕಟಮಾಡುತ್ತಿದ್ದರೋ ಎಂಬುದು ಈ ಪತ್ರದಿಂದ ವ್ಯಕ್ತವಾಗುವುದು. ಹೀಗೆ ಶುಕ್ಲಪಕ್ಷದ ಚಂದ್ರನಂತೆ ತಿರುವಾಂಕೂರು ರಾಜ್ಯವು ದಿನೇದಿನೇ ಅಭಿವೃದ್ಧಿಯನ್ನು ಹೊಂದುತ್ತಿತ್ತು.

೧೬. ಸನ್ ೧೮೧೩ನೇ ವರ್ಷವಲ್ಲಿ ಲಕ್ಷ್ಮೀಬಾಯಿಯವರಿಗೆ ಒಬ್ಬ ಪುತ್ರನು ಜನಿಸಿದನು. ಸಿಂಹಾಸನಕ್ಕೆ ಅಧಿಪತಿಯು ಜನಿಸಿದನೆಂದು ರಾಜ್ಯದಲ್ಲೆಲ್ಲೆಲ್ಲಿಯೂ ದೊಡ್ಡ ಉತ್ಸವವನ್ನು ಮಾಡಿದರು. ಮನೆಮನೆಗಳಲ್ಲಿಯೂ ಹೊಸ ತೋರಣಗಳು ಮೊದಲಾದ್ದನ್ನು ಕಟ್ಟಿ ಹಬ್ಬವನ್ನು ಮಾಡಿದರು. ನಾಮಕರಣದ ದಿನದ ಮಹೋತ್ಸವವನ್ನು ಅತಿ ವಿಜೃಂಭಣೆಯಿಂದ ಮಾಡಿ, ಮಗುವಿಗೆ "ರಾಮವರ್ಮ

ಮಹಾರಾಜಾ" ಎಂದು ಹೆಸರಿಸಲ್ಪಟ್ಟರು. ಹಿಂದೂ ಧರ್ಮಶಾಸ್ತ್ರಪ್ರಕಾರ ಇನ್ನುಮೇಲೆ ತಿರುವಾಂಕೂರು ರಾಜ್ಯಕ್ಕೆ ಈ ಶಿಶುವೇ ಅಧಿಪತಿಯೆಂದು ಪ್ರಸಿದ್ಧಿಪಡಿಸಿದರು. ಎರಡನೆಯ ವರುಷ ಒಂದು ಶುಭಮುಹೂರ್ತದಲ್ಲಿ ಆ ಶಿಶುವಿಗೆ ರಾಜ್ಯಾಭಿಷೇಕವನ್ನು ಮಾಡಲು ನಿಶ್ಚಯಿಸಿದರು. (ಡಿವಿ ೨೫ ಚಿಂಗಂ) ಸಿಂಹಮಾಸ ಮಲಬಾರ ಸಂವತ್ಸರ ೯೮೪ (Ad. ೧೮೧೪)ನೇ ವರ್ಷದಲ್ಲಿ ರಾಜ್ಯಾಭಿಷೇಕ ಮಹೋತ್ಸವವು ಜರುಗಿತು. ಅಲ್ಲಿಯ ಪದ್ಧತಿಯನ್ನನುಸರಿಸಿ, ಆ ದಿನ ದೊಡ್ಡ ಸಭೆಯನ್ನು ಮಾಡಿದರು.

ರಾಣಿ ಲಕ್ಷ್ಮೀಬಾಯಿಯು ಮಗುವನ್ನು ಉತ್ತಮವಸ್ತ್ರಾಭರಣಗಳಿಂದಲಂಕರಿಸಿ, ತಾನೂ ಅಲಂಕೃತಳಾಗಿ ಬಾಲರಾಜನನ್ನೆತ್ತಿಕೊಂಡು ಸಭಾಮಂಟಪಕ್ಕೆ ಹೊರಟುಬಂದು ಸಿಂಹಾಸನಾರೂಢಳಾದಳು. ಸಭಾಜನರೆಲ್ಲರೂ ತಮ್ಮ ತಮ್ಮ ನಿಯಮಿತ ಸ್ಥಾನಗಳಲ್ಲಿ ಕುಳಿತನಂತರ, ತನ್ನೆರಡು ಹಸ್ತಗಳಿಂದ ರಾಣಿಯವರು ಬಾಲರಾಜನನ್ನೆತ್ತಿಕೊಂಡು, ಸಿಂಹಾಸನದಿಂದಿಳಿದು, ಪ್ರಸನ್ನವದನಳಾಗಿ ತನ್ನ ಸ್ವಾಭಾವಿಕ ಗಂಭೀರ ವಾಕ್ಯಗಳಿಂದ ಎಲ್ಲರೂ ಆಶ್ಚರ್ಯ ಹೊಂದುವಂತೆ ಹೇಗೆಂದಳು; "ಆನರೆಬಲ್ ಈಸ್ಟಿಂಡಿಯಾ ಕಂಪೆನಿಯವರು ಸದಾ ನ್ಯಾಯಮಾರ್ಗದಲ್ಲಿ ವರ್ತಿಸುತ್ತಿರುವರು. ನನ್ನ ಕುಲದೇವರಾದ ಪದ್ಮನಾಭಸ್ವಾಮಿಯವರ ಪ್ರಸಾದದಿಂದ ನನಗೆ ಜನಿಸಿದ ಈ ಕುಮಾರನನ್ನು ಕಂಪೆನಿಯವರ ಕೈಯಲ್ಲಿಡುತ್ತಲಿರು

ಪೆನು. ತರುವಾಯ ಇವನನ್ನು ದೊಡ್ಡವನನ್ನಾಗಿ ಮಾಡುವುದೂ, ಇವನಿಗೆ ವಿದ್ಯಾಬುದ್ಧಿಗಳನ್ನು ಹೇಳಿಸುವುದೂ, ಇವನನ್ನು ಒಳ್ಳೆಯ ಪ್ರಕಾಶಮಾನಕ್ಕೆ ತರುವುದೂ ಕಂಪೆನಿಯವರ ಭಾರವಾಗಿರುವುದು. ನಾನು ಇದಕ್ಕಿಂತಲೂ ಹೆಚ್ಚಾಗಿ ಹೇಳತಕ್ಕದ್ದೇನಿರುವುದು ?" ಹೀಗೆ ಹೇಳಿ ಮಗುವನ್ನು ಮೆಕಾಲೆದೊರೆಯವರ ಕೈಗೆ ಕೊಟ್ಟಳು. ಒಡನೆಯೇ ಆತನು ಮಗುವನ್ನು ಸಿಂಹಾಸನದಮೇಲೆ ಕುಳ್ಳಿರಿಸಿ, "ರಾಮವರ್ಮರು ರಾಜ್ಯಕ್ಕೆ ಇಂದಿನಿಂದ ದೊರೆಯಾದರು. ಇವರು ಯುಕ್ತವಯಸ್ಸುಳ್ಳವರಾಗುವವರೆಗೂ ರಾಣಿ ಲಕ್ಷ್ಮೀಬಾಯಿಯವರು ಪಾಲನಕರ್ತ್ರಿ (Regent) ಯಾಗಿ ರಾಜ್ಯವನ್ನು ಮಾಡುವರು;" ಎಂದು ಎಲ್ಲರಿಗೂ ತಿಳಿಸಿ, ಅದೇ ಸಮಯದಲ್ಲಿ ಮೆಕಾಲೆ ದೊರೆಯವರು ದಿವಾನಗಿರಿಯನ್ನು ಬಿಟ್ಟರು. ದೇವರ್ ಪದ್ಮನಾಭರವರು ಹೊಸ ದಿವಾನರಾದರು. ಆದರೆ ಆ ದಿವಾನನು ಅಧಿಕಾರವನ್ನು ಕೆಲವು ದಿನಗಳು ಮಾತ್ರ ಅನುಭವಿಸಿ, ಐದಾರು ತಿಂಗಳಲ್ಲಿ ಸ್ಫೋಟಕ ರೋಗದಿಂದ ಮೃತಿಹೊಂದಿದನು.

೧೨. ಅನಂತರ ಒಂದು ವರ್ಷಕ್ಕೆ ರಾಣಿಯವರಿಗೆ ಎರಡನೇ ಮಗನು ಹುಟ್ಟಿದನು. ಆ ಆನಂದವು ಬಹಳ ದಿನಗಳಿರಲಿಲ್ಲ-ಏಕೆಂದರೆ ? ರಾಣಿಯವರಿಗೆ ಬಾಣಂತಿ ರೋಗವು ಪ್ರಾಪ್ತವಾಗಿ, ಎರಡು ತಿಂಗಳಲ್ಲಿಯೇ ಅದು ಅಸಾಧ್ಯವಾಯಿತು-ಅನೇಕ ವೈದ್ಯರು ಹಲವು ಔಷಧಗಳನ್ನು ಕೊಟ್ಟರು. ಆದರೂ ಅದರಿಂದ ಗುಣವೇನೂ ಆಗದೆ ವ್ಯಾಧಿಯು ಹೆಚ್ಚುತ್ತಲೇ ಇತ್ತು. ಬದುಕುವೆನೆಂಬ ಆಶೆಯು ಉಡುಗಿತು. ತರುವಾಯ ಒಂದುದಿನ ಲಕ್ಷ್ಮೀಬಾಯಿಯು

ತನ್ನ ಪ್ರಿಯಪತಿಯನ್ನು ಹತ್ತಿರ ಕರೆದು, ತನ್ನ ತಂಗಿಯಾದ ಪಾರ್ವತೀಬಾಯಿಯನ್ನೂ ತನ್ನ ಚಿಕ್ಕಮಕ್ಕಳನ್ನೂ ಆತನ ಕೈಲಿಟ್ಟು ಹೀಗೆಂದಳು, "ಇದುವರೆಗೂ ನನ್ನಿಂದ ರಕ್ಷಿಸಲ್ಪಟ್ಟ ಈ ಹುಡುಗರನ್ನು ನಿಮ್ಮ ಕೈಲಿಡುತ್ತೇನೆ. ಇನ್ನು ತಾವು ಇವರೆಲ್ಲರನ್ನೂ ಸಂರಕ್ಷಿಸುವುದು. ಈ ರಾಮವರ್ಮ ಮಹಾರಾಜನು ಯುಕ್ತ ವಯಸ್ಸುಳ್ಳವನಾಗುವವರೆಗೂ ಪಾರ್ವತೀಬಾಯಿ "ಪಾಲನಾಕತ್ರಿ"ಯಾಗಿ ರಾಜ್ಯವನ್ನು ಆಳುವಹಾಗೆಮಾಡಿ, ನನಗೆ ಸಹಾಯ ಮಾಡುತ್ತಿದ್ದಹಾಗೆ, ಇವಳಿಗೂ ಸಕಲ ರಾಜ ಕಾರ್ಯಗಳಲ್ಲಿಯೂ ಸಹಾಯ ಮಾಡುತ್ತೇವೆಂದು ತಾವು ಮಾತು ಕೊಟ್ಟರೆ ಅನಂತರ ನಾನು ಸುಖವಾಗಿ ಪ್ರಾಣವನ್ನು ಬಿಡುವೆನು." ತನ್ನ ಪ್ರಿಯಪತ್ನಿಯ ನಿರಾಶಾ ವಚನಗಳನ್ನು ಕೇಳಿ, ರಾಜರಾಜವರ್ಮನು ಅತ್ಯಂತ ದುಃಖಿತನಾಗಿ ನೇತ್ರಗಳಿಂದ ಬರುವ ದುಃಖಾಶ್ರುಗಳಿಂದ ಬಾಯಿಯಲ್ಲಿ ಯಾವಮಾತೂ ಹೊರಡದೆ ಸ್ವಲ್ಪಕಾಲ ಸುಮ್ಮನಿದ್ದು ಧೈರ್ಯವನ್ನು ತಂದುಕೊಂಡು ಪತ್ನಿಯೊಡನೆ "ನಾನು ನಿನ್ನ ಇಷ್ಟಪೂರ್ತಿ ಮಾಡುವೆನು." ಎಂದು ಹೇಳಿದನು. ತರುವಾಯ ರಾಣಿಯವರು ತಂಗಿಯಾದ ಪಾರ್ವತಿಬಾಯಿಯಕಡೆ ನೋಡಿ, ಬಹಳ ದೀನಸ್ವರದಿಂದ ಹೀಗೆಂದಳು. "ಅಮ್ಮಾ ಪಾರ್ವತಿ! ನೀನು ಬಹು ಜಾಗರೂಕತೆಯಿಂದ ರಾಜ್ಯಾಧಿಪತ್ಯವನ್ನು ಮಾಡಬೇಕು. ಈ ಅರ್ಭಕರನ್ನು ಚೆನ್ನಾಗಿ ಸಂರಕ್ಷಿಸುವುದು. ಇವರನ್ನು ನಾಳೆ ರಾಮವರ್ಮ ರಾಜರು ಯುಕ್ತವಯಸ್ಕರಾ

ಗಲು, ಶುದ್ಧಾಂತಃಕರಣದಿಂದ ಅವರ ರಾಜ್ಯವನ್ನು ಅವರಿಗೆ ಕೊಟ್ಟು ಕೃತಾರ್ಥಳಾಗವ್ವಾ! ನಾನಾದರೆ ಹೊರಡುವಳಾಗಿರುವೆನು. ನನಗೋಸ್ಕರ ದುಃಖಪಡಕೂಡದು." ಈಪ್ರಕಾರ ಅಕ್ಕನಾದ ಲಕ್ಷ್ಮೀಬಾಯಿಯು ಅಂತ್ಯಕಾಲದಲ್ಲಿ ಇಂಥ ಉಪದೇಶವನ್ನು ಮಾಡಲು ಕೇಳಿ, ಆ ಕೋಮಲಾಂತಃಕರಣಳಾದ ಹದಿನೆಳುವರ್ಷದ ಅಬಲೆಯು ದುಃಖಾತಿರೇಕದಿಂದ ಬಾಯಿಂದ ಮಾತುಹೊರಡದೆ ಗದ್ಗದ ಕಂಠದಿಂದ "ಅಕ್ಕಾ! ನೀವು ಹೇಳಿದಪ್ರಕಾರ ಮಾಡುವೆನು ನಿಮ್ಮ ಆಜ್ಞೆಯನ್ನು ಎಷ್ಟುಮಾತ್ರವೂ ತಪ್ಪದೆ ನಡೆದುಕೊಳ್ಳುವೆನು. ನೀನುಮಾತ್ರ ನನ್ನನ್ನು ಬಿಟ್ಟು ಹೋಗುವಿಯೊ?" ಎಂದು ದುಃಖಿಸತೊಡಗಿದಳು. ಆಗ ಅಲ್ಲಿನವರೆಲ್ಲರೂ ದುಃಖಿಸಿದರು. ಆಮೇಲೆ ಎರಡು ದಿನಗಳಿಗೆ ಲಕ್ಷ್ಮೀಬಾಯಿಯು ನಶ್ವರ ಸುಖಗಳನ್ನು ಬಿಟ್ಟು ಶಾಶ್ವತ ಸುಖವನ್ನನುಭವಿಸುವುದಕ್ಕೆ ಹೋದಳು! ಮಲಬಾರು ದೇಶವೆಲ್ಲವೂ ಆಗ ದುಃಖಸಮುದ್ರದಲ್ಲಿ ಮುಳುಗಿತು. ತಿರುವಾಂಕೂರಿನಲ್ಲಿ ಪ್ರತಿ ಮನೆಯಲ್ಲಿಯೂ ರೋದನ ಮಾಡುವಹಾಗೆ ಪ್ರಜೆಗಳೆಲ್ಲಾ ರೋದನ ಮಾಡಿದರು. ರಾಣಿ ಲಕ್ಷ್ಮೀಬಾಯಿಯುವರು ನಾಲ್ಕು ಸಂವತ್ಸರಗಳೇ ರಾಜ್ಯಭಾರಮಾಡಿದ್ದು. ಆದರೆ ಈಕೆಯ ರಾಜ್ಯಭಾರದಲ್ಲಿ ಅನುಭವಿಸಿದಷ್ಟು ಸೌಖ್ಯವನ್ನು ಪ್ರಜೆಗಳು ಹಿಂದೆ ಗತಿಸಿದ ಯಾವರಾಜರ ಪರಿಪಾಲನೆಯಲ್ಲಿಯೂ ಅನುಭವಿಸಿರಲಿಲ್ಲ. ಆಕೆಯು ಪ್ರಜೆಗಳನ್ನು "ಆತ್ಮವತ್ಸರ್ವಭೂತಾನಿ" ಎಂಬಂತೆ ಕಾಪಾಡುತಿದ್ದಳು.

೧೮. ರಾಜ್ಯವಿಷಯವಾಗಿ ಕರ್ನಲ್‌ರವರ ಸಹಾಯವುಳ್ಳವಳಾಗಿದ್ದರೂ ತನಗೆ ಯೋಗ್ಯವೆಂದು ತೋರಿದವುಗಳನ್ನೇ ಗ್ರಹಿಸುತ್ತಿದ್ದಳು ಈಕೆಯು ಸ್ವಬುದ್ಧಿಯಿಂದ ಬೇರೆ ಕಾನೂನುಗಳನ್ನು ನಿರ್ಮಿಸಿದಳೆಂದು ಇದುವರೆಗೇನೇ ತಿಳಿಸಿರುವೆವು. ನ್ಯಾಯ, ನೀತಿ ಮೊದಲಾದ ಸಂಗತಿಗಳನ್ನು ಕುರಿತು ಆಕೆಯು ತೋರಿಸಿದ ಚಾತುರ್ಯವೂ, ಔದಾರ್ಯವೂ ಅತ್ಯಂತ ಸ್ತುತಿ ಪಾತ್ರಗಳು. ಆಕೆಯಲ್ಲಿ ದೃಢ ನಿಶ್ಚಯ-ವೆಂಬ ಸದ್ಗುಣವು ಇತರ ಗುಣಗಳಿಗಿಂತಲೂ ಅಧಿಕವಾಗಿತ್ತು. ಆಕೆಯು ತನ್ನ ರಾಜ್ಯದಲ್ಲಿ ನ್ಯಾಯಸಭೆಗಳ ವಿಷಯದಲ್ಲಿ ಅನೇಕ ಬದಲಾವಣೆಗಳನ್ನು ಮಾಡಿದ್ದರಿಂದಲೂ, ಅಯೋಗ್ಯನಾದ ಹಳೇ ದಿವಾನನ್ನು ತೆಗೆದುಹಾಕಿ, ದೀರ್ಘ ಪ್ರಯತ್ನವುಳ್ಳ ಮೆಕಾಲೆ ದೊರೆಯನ್ನು ದಿವಾನನಾಗಿ ಏರ್ಪಡಿಸಿದ್ದರಿಂದಲೂ, ಆಕೆಯ ವಿಶಾಲವಾದ ದೂರದೃಷ್ಟಿಯು ವ್ಯಕ್ತವಾಗುವುದು. ಮೆಕಾಲೆ ದೊರೆಯು ಆಕೆಯ ವಾಕ್ಯಗಳನ್ನು ಮನ್ನಿಸಿ, ದೇಶ ಕಲ್ಯಾಣವನ್ನು ಬಯಸಿ, ಸದಾ ಕಾರ್ಯ ತತ್ಪರನಾಗಿ, ರಾಣಿಯವರಿಗೆ ಮನಃಪೂರ್ವಕವಾಗಿ ಸಹಾಯ ಮಾಡಿದ್ದರಿಂದ ಆತನನ್ನು ಎಷ್ಟು ಕೊಂಡಾಡಿದರೂ ಸಾಲದು. ಅಲ್ಲದೆ, ವಿಪ್ರವರ್‍ಯನಾದ ಕೋವಿಲತಂಬೂರಾನ್ ತನ್ನ ಸತ್ಸ್ವಭಾವದಿಂದ ಮೆಕಾಲೆದೊರೆಯುವರ ಸಹಾಯವನ್ನು ಪಡೆದುಕೊಂಡು, ಹೊಸ ಕಾನೂನನ್ನು ನಿರ್ಮಿಸುವದರಲ್ಲಿಯೂ ನ್ಯಾಯಸಭೆಯನ್ನು ಸಂಸ್ಕರಿಸುವದರಲ್ಲಿಯೂ ಅನುಮೋದಿಸುತ್ತಾ, ಮಹಾರಾಣಿಯವರಿಗೆ ಬೆಂಬಲವಾಗಿದ್ದು

ಕೀರ್ತಿಯನ್ನು ತಂದದ್ದು ಸಹ ತುಂಬ ಶ್ಲಾಘನೀಯವಾಗಿರುವುದು.

೧೯. ಈ ರಾಣಿಯವರ ಚರಿತ್ರೆಯಿಂದ ಒಂದು ದೊಡ್ಡ ಸಿದ್ಧಾಂತವನ್ನು ಸ್ಥಾಪಿಸಬೇಕಾಗಿರುವುದು. ಅದೇನೆಂದರೆ, "ನಿಷ್ಪಕ್ಷಪಾತಬುದ್ಧಿಯಿಂದ ವಿಚಾರಿಸಿದ್ದಾದರೆ, ಮಾನಸಶಾಸ್ತ್ರ ತಿಳಿದಂಥ ಸ್ತ್ರೀಯರು, ಪುರುಷರಿಗಿಂತಲೂ ಅಧಿಕರಲ್ಲದೆ ಹೋದರೂ, ಹೇಗೆ ನೋಡಿದರೂ ಪುರುಷರಿಗಿಂತಲೂ ಕನಿಷ್ಠರಾದವರಲ್ಲ;" ಎಂಬದು. ಅನೇಕ ಸಂವತ್ಸರಗಳು ರಾಜ್ಯ ಭಾರವನ್ನುಮಾಡಿ ಅನುಭವ ಶೀಲರೂ, ವಯೋವೃದ್ಧರೂ ಆದರಾಜರು ತೋರಿಸಿದ ಬುದ್ಧಿಕೌಶಲ್ಯ, ಸ್ಮೃತಿ, ಧೈರ್ಯ, ಕಾರ್ಯಾಕಾರ್ಯವಿಚಾರ, ಇವುಗಳನ್ನೆಲ್ಲಾ ಲಕ್ಷ್ಮೀಬಾಯಿಯು ನಾಲ್ಕುಸಂವತ್ಸರಗಳ ರಾಜ್ಯಭಾರದಲ್ಲಿಯೇ ತೋರಿಸಿದಳು. ಆದರೆ ಇವಳೊಬ್ಬಳೇ ಇಂಥ ಸಾಮರ್ಥ್ಯವನ್ನು ತೋರಿಸಿದಳೆಂದು ಅಲ್ಲ, ಇನ್ನೂ ಅನೇಕ ರಾಣಿಯರೂ, ಮಹಾರಾಣಿಯರೂ, ಚಕ್ರವರ್ತಿನೀಯರೂ ಮತ್ತು ಸಾಮಾನ್ಯ ಸ್ಥಿತಿಯಲ್ಲಿರುವ ಸಾಧ್ವೀಮಣಿಯರೂ ಕೂಡ, ಇಂಥಹ ಅಮಿತವಾದ ಬುದ್ಧಿಸಾಮರ್ಥ್ಯಗಳನ್ನು ತೋರಿಸಿರುವರು. ಈ ವಿಷಯವಾಗಿ ಒಬ್ಬ ಗ್ರಂಥಕಾರನು ಹೀಗೆ ಬರೆದಿರುವನು:—"ಹಿಂದೂದೇಶದಲ್ಲಿ ಒಂದಾನೊಂದು ಸಂಸ್ಥಾನದಲ್ಲಿ ರಾಜ್ಯವ್ಯವಹಾರವು ಬಹು ಬಂದೋಬಸ್ತಾಗಿಯೂ ಬಹು ಮಿತವ್ಯಯವುಳ್ಳದ್ದಾಗಿಯೂ ಜರುಗುತ್ತದೆಂದೂ, ಆಸಂಸ್ಥಾನದಲ್ಲಿನ ಜನಗಳು ಅನ್ಯಾಯ ಪರಂಪರೆಗಳಿಂದ

ಬಾಧೆಪಡದೆ ಸುಖಿಸುವರೆಂದೂ, ದಿನದಿನದಲ್ಲಿಯೂ ರಾಜ್ಯದಲ್ಲಿ ವ್ಯವಸಾಯವು ಅಧಿಕವಾಗುವುದೆಂಬುದಾಗಿಯೂ ಕೇಳಿದ ವಿಷಯದಲ್ಲಿ, ಹಾಗೆ ಆಳಲ್ಪಡುವಂಥ ನಾಲ್ಕು ಸಂಸ್ಥಾನಗಳಲ್ಲಿ ಮೂರುಸಂಸ್ಥಾನಗಳು ಸ್ತ್ರೀಯರಿಂದ ಪಾಲಿಸುವಂಥಾವಾಗಿರುವುವೆಂದು ನಿಶ್ಚಯಿಸಲು ಸಂದೇಹವಿಲ್ಲ. ಕೇವಲ ನಮ್ಮ ಹಿಂದೂದೇಶದ ಸ್ತ್ರೀಯರ ವಿಷಯದಲ್ಲಿಯೇ ಈ ಮಾತು ನಿಶ್ಚಯವೆಂಬಲ್ಲ. ದೇಶಾಂತರಗಳಲ್ಲಿಯೂ ರಾಜ್ಯಾರೂಢರಾದ ರಾಜಪುತ್ರಿಯರುಸಹ ಇಂಥ ಕೌಶಲ್ಯವನ್ನೇ ತೋರಿಸಿರುವರು. ರಾಜ್ಯಭಾರವಂಮಾಡಿದ ಪುರುಷರ ಸಂಖ್ಯೆಗಿಂತ ಸಿಂಹಾಸನಾರೂಢರಾದ ಸ್ತ್ರೀಯರ ಸಂಖ್ಯೆಯು ಅತ್ಯಂತ ಸ್ವಲ್ಪವಾಗಿರುವುದು. ಅಪರಿಮಿತವಾದ ರಾಜರ ಸಂಖ್ಯೆಯಲ್ಲಿ ಉತ್ತಮ ರಾಜರೆಂದು ಎಷ್ಟುಮಂದಿಯನ್ನು ಆರಿಸಿತೋರಿಸಬಹುದೋ, ಅಷ್ಟುಮಂದಿ ಉತ್ತಮ ರಾಜ್ಞಿಯರನ್ನು ರಾಜ್ಯವಂನಾಳಿದ ಸ್ತ್ರೀಯರ ಅತಿಸ್ವಲ್ಪ ಸಂಖ್ಯೆಯಿಂದಲೇ ತೋರಿಸಬಹುದೆಂದು ಹೇಳುವುದಕ್ಕೆ ಎಷ್ಟೋ ಸಂತೋಷವಾಗುತ್ತದೆ. ಈ ಸಂಗತಿಯು ಸ್ತ್ರೀಜಾತಿಗೆ ಎಷ್ಟೋಭೂಷಣಾಸ್ಪದವಾಗಿದೆ. ರಾಜ್ಯಭಾರವನ್ನು ಮಾಡಿದ ಸ್ತ್ರೀಯರಲ್ಲಿ ಅನೇಕಮಂದಿ, ಪೂರ್ವರಾಜರುಗಳಿಂದ ಅಧೋಗತಿಗೆ ತರಲ್ಪಟ್ಟ ರಾಜ್ಯಪೀಠದಮೇಲೆ ಕುಳಿತುಕೊಂಡು, ಅಂಥಾ ರಾಜ್ಯವನ್ನು ಮರಳಿ ಸಮುನ್ನತ ದೆಶೆಗೆತಂದಿರುವರು.— ಇದಕ್ಕೆ ಉದಾಹರಣೆಯು, ನಮ್ಮ ಲಕ್ಷ್ಮೀಬಾಯಿಯೇ. ಪಾಪನಿಂದ ಹಾಳಾಗಿ ಕೆಟ್ಟುಹೋಗಿದ್ದ ರಾಜ್ಯ

ವನ್ನು ನಿರ್ವಹಿಸಿ ಮಹೋನ್ನತ ದಶೆಗೆತಂದಂಥ ಲಕ್ಷ್ಮೀ ಬಾಯಿಯನ್ನು ಎಷ್ಟು ಕೊಂಡಾಡಬೇಕೋ ತಿಳಿಯದು. ಸ್ತ್ರೀಸಾಮಾನ್ಯಕ್ಕೆ ಸ್ವಾಭಾವಿಕವಾಗಿ ವಾಡಿಕೆಯಲ್ಲಿರುವ ಚಪಲತ್ವವೇ ಮೊದಲಾದ ದುರ್ಗುಣಗಳು ಇಂಥ ರಾಜ ಸ್ತ್ರೀಯಲ್ಲಿ ಕಾಣಿಸದೆ, ತದ್ವಿರೋಧಗಳಾದ ಮನೋದಾರ್ಢ್ಯಾದಿ ಸದ್ಗುಣಗಳೇ ಕಂಡು ಬರುತ್ತವೆ. ಈ ಪ್ರಕಾರ ಕೆಲವು ಸ್ತ್ರೀಯರಿಗೆ ರಾಜ್ಯ ವೈಭವವು ಪ್ರಾಪ್ತವಾಗುವದು ನೋಡಿ, ಕೆಲವು ಸ್ತ್ರೀವಿದ್ವೇಷಿಗಳು ಏರ್ಪಡಿಸಿದ ಸಿದ್ಧಾಂತಗಳು ಪ್ರತ್ಯಕ್ಷ ಪ್ರಮಾಣವಾದ ಅಬದ್ಧಗಳೆಂದು ಖಂಡಿತಗಳಾಗಿರುವುವು. ಹೀಗೆ ರಾಜ್ಯವಂನ್ನಾಳಿದ ಸ್ತ್ರೀಯರು, ತಮ್ಮ ಸ್ತ್ರೀಜಾತಿಗೇನೆ ಅನಂತ ಉಪಕಾರಗಳನ್ನು ಮಾಡಿರುವರು. ಸ್ತ್ರೀನಿಂದಕರ ಬಾಯಿಯನ್ನು ಮುಚ್ಚಿಸುವುದಕ್ಕೆ, ಇಂಥ ಮಹಾ ಸಾಧನಗಳನ್ನೊದಗಿಸಿಕೊಡುತ್ತಿರುವ ದಯಾಮಯನಾದ ಪರಮೇಶ್ವರನನ್ನು ಸ್ತ್ರೀಯರೆಲ್ಲರೂ ಸಾವಿರ ಬಾಯಿಗಳಿಂದ ಕೊಂಡಾಡ ಬೇಕಾಗಿರುವುದು."

೨೦. ಕೆಲವರು ಮೇಲಿನ ಸಿದ್ಧಾಂತದಮೇಲೆ ಒಂದು ಆಕ್ಷೇಪಣೆಯನ್ನು ತರಬಹುದು. ಅದೇನಂದರೆ ಸ್ತ್ರೀಯರು ರಾಜ್ಯಭಾರವನ್ನು ಮಾಡಿದರೂ, ರಾಜ್ಯದಲ್ಲಿ ಅಧಿಕಾರಿಗಳೆಲ್ಲರೂ ಪುರುಷರಾಗಿರುವುದರಿಂದ, ರಾಜ್ಯದಲ್ಲಿನ ಉನ್ನತಸ್ಥಿತಿಯೆಲ್ಲವೂ ಪುರುಷರಿಂದ ಮಾಡಲ್ಪಡುವುದೇ ಹೊರತು, ರಾಜ್ಯವನ್ನು ಪಡೆದ ಸ್ತ್ರೀಯರಿಂದ ಮಾಡಲಾಯಿತೆಂದು ಹೇಳಕೂಡದು." ಈ ಆಕ್ಷೇಪಣೆ

ನೋಡಲು, ಮೊದಲು ನಿಜವೆಂದೇ ತೋರುವುದು ಆದರೆ ಸ್ವಲ್ಪ ಸೂಕ್ಷ್ಮವಿಚಾರಮಾಡಿ ನೋಡಿದಲ್ಲಿ ಅದರ ಅಸತ್ಯವು ಸ್ಪಷ್ಟವಾಗುವುದು. ಈ ಆಕ್ಷೇಪಣೆ ನಿಜವೆಂದು ಗ್ರಹಿಸಿದ ಪಕ್ಷಕ್ಕೆ ರಾಜರ ರಾಜ್ಯಭಾರದಲ್ಲಿ ಜರುಗಿದ ಲೋಕೋಪಕಾರಕ್ಕೆ ರಾಜರನ್ನು ಭೂಷಿಸುವುದಕ್ಕೆ ಕಾರಣವೇ ಇರದು. ಅಶೋಕಮಹಾರಾಜ, ಭೋಜ, ವಿಕ್ರಮಾರ್ಕಾದಿ ಚಕ್ರವರ್ತಿಗಳೂ, ಅಕ್ಬರ್ ಬಾದ್‌ಷಹಾ ಮೊದಲಾದ ಪ್ರಜಾಪೂಜ್ಯರಾದ ರಾಜರ ರಾಜ್ಯದಲ್ಲಿಕೂಡ ಮಂತ್ರಿಗಳೂ, ಅಧಿಕಾರಿಗಳೂ ಇದ್ದರು. ಆದರೆ ಅವರ ಕೀರ್ತಿಗೆ ಭಂಗ ಉಂಟಾಗುವುದೇ ಏನು! ಅವರ ರಾಜ್ಯದಲ್ಲಿ ಜರುಗಿದ ಸತ್ಕೃತ್ಯಗಳ ಶ್ರೇಯಸ್ಸೆಲ್ಲವೂ ಅವರ ಉದ್ಯೋಗಸ್ಥರದೇನೋ? ರಾಮ ಯುಧಿಷ್ಠಿರರು ಯಾವಾಗಲೂ ಸ್ವಂತವಾಗಿ ರೈತರಿಂದ ಕಂದಾಯ ವಸೂಲು ಮಾಡಲಿಲ್ಲವೆಂದು, ಎಲ್ಲರೂ ಅವರ ಯಶೋವಿಶೇಷಗಳನ್ನು ಇಂದಿನಿಂದ ಉಪೇಕ್ಷಿಸಬೇಕೇನು? ಹೀಗೆ ಸ್ತ್ರೀಯರ ಕೀರ್ತಿಯನ್ನು ಮಲಿನಮಾಡಬೇಕೆಂದು ಪ್ರತಿಕಕ್ಷಿಗಳು ಹೇಳುವ ಯುಕ್ತಿ ಸರಿ ಎಂದು ಹೇಳುವಪಕ್ಷದಲ್ಲಿ, ಸಕಲ ಪುರುಷಪುಂಗವರ ಕೀರ್ತಿಗೆ ನಾಶವುಂಟಾಗುತ್ತದೆ. ಆದುದರಿಂದ ಇದು ಕುತ್ಸಿತವಾದ, ಇಲ್ಲವೇ, ವಿತಂಡವಾದವೆಂದು ಹೇಳಬೇಕಾಗಿರುವುದು. ಹೀಗೆ ವಾದಿಸುವವರಿಗೆ ರಾಜ್ಯಭಾರಮಾಡುವ ವಿಷಯವು ತಿಳಿಯದೆಂದು ಹೇಳಬೇಕು. ರಾಜ್ಯದಲ್ಲಿನ ಪ್ರತಿಸಂಗತಿಯನ್ನೂ ಸ್ವಂತವಾಗಿ ಮಾಡುವುದು ರಾಜರಕಾರ್ಯವಲ್ಲ. ಹಾಗೆಮಾಡುವುದು ಅಸಂಭವವೇ ಸರಿ. ರಾಜರು ಮಂತ್ರಿಗಳ ಕಣ್ಣಿನಿಂದ ಸಕಲ ರಾಜ್ಯ

ಕಾರ್ಯವನ್ನು ನೋಡುತ್ತಿರಬೇಕು. ಆದ್ದರಿಂದ ಯೋಗ್ಯ ರಾದ ಮಂತ್ರಿಗಳನ್ನೇರ್ಪಡಿಸುವುದೂ, ತಕ್ಕ ಉದ್ಯೋಗಸ್ಥರ ಗುಣಗಳನ್ನೂ ದಕ್ಷತೆಯನ್ನೂ ತಿಳಿದು, ಅವರನ್ನು ಪ್ರೋತ್ಸಾಹಪಡಿಸಿ, ಅವರಿಂದ ಯೋಗ್ಯವಾದ ಕಾರ್ಯಗಳನ್ನು ಮಾಡಿಸಿಕೊಳ್ಳುವುದೇ ಕ್ರಮವಾದ ರಾಜ್ಯಭಾರವಾಡುವಿಕೆ. ಬುದ್ಧಿವಂತರಾಗಿಯೂ, ರಾಜಕಾರ್ಯಧುರಂಧರರಾಗಿಯೂ, ಪ್ರಜಾಹಿತದಕ್ಷರಾಗಿಯೂ, ಇರುವ ಸೇವಕರನ್ನು ಪರೀಕ್ಷಿಸಿ ಅಂತವರನ್ನೇ ಮಂತ್ರಿಗಳನ್ನಾಗಿಯೂ, ದೊಡ್ಡದೊಡ್ಡ ಅಧಿಕಾರಿಗಳನ್ನಾಗಿಯೂ ನೇಮಿಸಿ, ಅಯೋಗ್ಯರನ್ನು ತೆಗೆದುಹಾಕುವುದೇ ರಾಜಲಕ್ಷಣ. ಹೀಗೆ ಮಾಡುವ ರಾಜನು ತಾನೇ ಸ್ವಂತವಾಗಿ ರಾಜ್ಯದ ಕೆಲಸಗಳನ್ನು ಮಾಡುವ ಆವಶ್ಯಕವಿಲ್ಲ. ಸುಸೇವಕರ ಒಳ್ಳೇ ಆಲೋಚನೆಯನ್ನು ತಿಳಿಯುವಂಥಾ ಬುದ್ಧಿ ಅವನಿಗಿದ್ದರೆ ಸಾಕು. ಅವನು ನಿಯಮಿಸಿದ ಸೇವಕ ಸಮೂಹವು ರಾಜ್ಯಹಿತಕ್ಕೋಸ್ಕರವಾಗಿ ಮಾಡಿದ ಸತ್ಕೃತ್ಯಗಳ ಯಶಸ್ಸೆಲ್ಲವೂ ಅವನದೇಸರಿ, ರಾಜ್ಯಭಾರವಾಡಿದ ಸ್ತ್ರೀಯರ ವಿಷಯದಲ್ಲಿಯೂ ಹಾಗೆಯೇ ಹೇಳಬಹುದು. ರಾಜ್ಯದಲ್ಲಿರುವ ಒಳ್ಳೇ ಅಧಿಕಾರಿಗಳು ಪುರುಷರಾದಾಗ್ಯೂ, ಅವರವರ ಯೋಗ್ಯತಾನುಸಾರ ಅಧಿಕಾರವನ್ನು ಕೊಡುವುದರಲ್ಲಿ ತೋರಿಸಿದ ವಿಚಕ್ಷಣೆಯು ರಾಣಿಯವರದೇ. ಅನಂತರ ಅವಳ ರಾಜ್ಯದಲ್ಲಿ ಉಂಟಾದ ದೇಶೋನ್ನತಿಯಿಂದ ಬರುವ ಕೀರ್ತಿಗೆ ಅವಳೇ ಪಾತ್ರಳು. ಈ ಸಂಗತಿ ಲಕ್ಷ್ಮೀಬಾಯಿಯ ಚರಿತ್ರೆಯಿಂದ ಸ್ಪಷ್ಟವಾಗುವುದು. ಅವಳ ರಾಜ್ಯ

ದಲ್ಲಿ ಪ್ರಜೆಗಳಿಗೆ ಏಕೆ ಸೌಖ್ಯ ಉಂಟಾಗಿತ್ತು ? ಈ ಪ್ರಶ್ನೆಗೆ ನಮ್ಮ ಪ್ರತಿಪಕ್ಷದವರು, ಮೆಕಾಲೆ ಮುಂತಾದ ಪುರುಷರ ಯತ್ನದಿಂದ ಸುಖವುಂಟಾಯಿತೆ ಹೊರತು ರಾಣಿಯುವರ ಪ್ರಯತ್ನದಿಂದುಂಟಾಗಲಿಲ್ಲವೆಂದು ಹೇಳಬಹುದು. ಆದರೆ ಈ ಪುರುಷರು ರಾಣಿಯುವರ ಮಾವನವರು ರಾಜ್ಯಭಾರ ಮಾಡಿದಾಗ ಏಕೆ ಇಲ್ಲದೇ ಹೋದರು ? ಎಂದು ಕೇಳೋಣ ! ಅದಕ್ಕೆ ಅವನು ಇಂಥ ಒಳ್ಳೇ ಅಧಿಕಾರಿಯನ್ನು ನೇಮಿಸದೆ ಅಯೋಗ್ಯನಾದ ಅಧಿಕಾರಿಯನ್ನು ಏರ್ಪಡಿಸಿಕೊಂಡಿದ್ದನೆಂದು ಹೇಳಬಹುದು. ಹಾಗಾದರೆ ಇವರು ಯೋಗ್ಯರಾದ ಸೇವಕರು, ಇವರು ಅಯೋಗ್ಯರು ಎಂಬ ಜ್ಞಾನವು ರಾಣಿಯುವರ ಮಾವನವರಿಗೆ ಇಲ್ಲದೆ ಹೋಯಿತಲ್ಲವೇ ? ಇದೇ ಒಳ್ಳೆ ಸಿಂಹಾಸನಾಧಿಪತಿಗೂ, ಕೆಟ್ಟ ಸಿಂಹಾಸನಾಧಿಪತಿಗೂ ಇರುವ ಭೇದವು. ಆದ್ದರಿಂದ ರಾಜಕಾರ್ಯದಲ್ಲಿ ಸ್ತ್ರೀಯರು ಪುರುಷರ ಸಮಾನರಾಗಿ, ಇಜ್ಗಿತಜ್ಞತೆ, ಪ್ರಜ್ಞಾ ಸಾಮರ್ಥ್ಯಗಳನ್ನು ತೋರಿಸಿದ್ದಾರೆಂದುದೃಢಪಡಿಸುತ್ತೇವೆ.

೨೧. ಈ ಸಿದ್ಧಾಂತವನ್ನೇ ಸ್ಥಿರಪಡಿಸುವುದಕ್ಕೆ ನಮ್ಮ ಮೈಸೂರು ಸಂಸ್ಥಾನದ ರೀಜೆಂಟರಾಗಿದ್ದು ವಿಶ್ರಾಂತಿಯನ್ನು ಹೊಂದಿರುವ “ ವಾಣೀವಿಲಾಸ ಸನ್ನಿಧಾನದ ಮಹಾರಾಣಿ ಕೆಂಪನಂಜಮ್ಮಣ್ಣಿ, ಸಿ. ಐ. (C. I.) ಮಹಾಮಾತೃಶ್ರೀ ” ಯವರೇ ಇದಕ್ಕೆ ದೃಷ್ಟಾಂತವಾಗಿರುವರು.

ಸನ್ ೧೮೯೪ನೇ ಇಸವಿ ಡಿಸೆಂಬರ್ ಅಂತ್ಯಭಾಗದಲ್ಲಿ ನಮ್ಮ ಆಳಿದ ಮಹಾಸ್ವಾಮಿಗಳಾದ ಶ್ರೀಮನ್ಮಹಾರಾಜಾ ಚಾಮರಾಜೇಂದ್ರ ಒಡೆಯರ್ ಬಹದರ್ ಜಿ. ಸಿ. ಎಸ್. ಐ. ಯವರು ಪತ್ನೀ, ಪುತ್ರ ಪರಿವಾರಸಮೇತರಾಗಿ, ಕಲ್ಕತ್ತೆಗೆ ದಯಮಾಡಿಸಿ, ಅಲ್ಲಿ ಅಕಾಲಮೃತ್ಯುವಿನಿಂದ ಸ್ವರ್ಗಸ್ಥರಾದರಷ್ಟೆ. ಅದರಿಂದ ಮಹ ದುಃಖಸಾಗರದಲ್ಲಿ ಮುಳುಗಿದ್ದ, ಚಿಕ್ಕಪ್ರಾಯದ ಅವರ ಧರ್ಮಪತ್ನಿಯಾದ ಮಹಾರಾಣಿಯವರು ವಿಧಿವಶಾತ್ ತಮ್ಮ ಸಣ್ಣ ಮಕ್ಕಳನ್ನೂ, ಪ್ರಜೆಗಳನ್ನೂ ಸಂರಕ್ಷಿಸುವ ಭಾರವು ತಮ್ಮಮೇಲೆ ಬಿತ್ತೆಂದು ಚಿಂತಿಸಿ, ಆಗ ಧೈರ್ಯವನ್ನವಲಂಬಿಸಿ, ಬಾಲಕರಾದ ಶ್ರೀ ಕೃಷ್ಣರಾಜ ಒಡೆಯರನ್ನೂ, ಶ್ರೀ ಕಂಠೀರವ ನರಸಿಂಹರಾಜರನ್ನೂ ವೈಸ್ರಾಯವರ ಕೈಲಿಟ್ಟು, "ಬ್ರಿಟಿಷ್ ಸಾರ್ವಭೌಮರ ಕೃಪಾಕಟಾಕ್ಷದಿಂದ ಮತ್ತು ಸಹಾಯದಿಂದ ತಮ್ಮ ಮಕ್ಕಳೂ, ಸಂಸ್ಥಾನವೂ ಯಾವಾಗ್ಯೂ ಕಾಪಾಡಲ್ಪಡತಕ್ಕವೆಂದು" ಒಪ್ಪಿಸಿದರು. ತರುವಾಯ ವೈಸ್ರಾಯರ ಅನುಮತಿಮೇರೆಗೆ, ಏಳು ವರುಷಕಾಲ ಮೈಸೂರು ರಾಜ್ಯಭಾರವನ್ನೇ ರೀಜಂಟ್, ಅಂದರೆ, ರಾಜ ಪ್ರತಿನಿಧಿಯಾಗಿ ವಹಿಸಿಕೊಂಡು ರಾಜ್ಯ ಧುರಂಧರರಾದ ಸರ್. ಕೆ. ಶೇಷಾದ್ರಿಯ್ಯರವರನ್ನೂ, ಪ್ರಜ್ಞಾಶಿರೋಮಣಿಗಳಾದ ಜಹಗೀರ್‌ದಾರ್ ಪಿ. ಎನ್. ಕೃಷ್ಣಮೂರ್ತಿ, ಕೆ. ಸಿ. ಐ. ಇ. ಯವರನ್ನೂ ಅಮಾತ್ಯವರ್ಯರನ್ನಾಗಿ ನೇಮಿಸಿಕೊಂಡು, ಶ್ರೇಷ್ಠವಾದ ಕಾನೂನುಗಳನ್ನು ಏರ್ಪಡಿಸಿ, ರಾಜ್ಯವನ್ನು ಧರ್ಮದಿಂದ

ಪರಿಪಾಲಿಸಿದರು. ಜ್ಯೇಷ್ಠಪುತ್ರರಾದ ಶ್ರೀಮನ್ ಮಹಾ ರಾಜಾ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದೂರ್ ಜಿ. ಸಿ. ಎಸ್. ಐ. ಯವರು ಪ್ರಬುದ್ಧರಾಗಲು, ರಾಜ್ಯಭಾ ರವನ್ನು ಅವರಿಗೆ ವಹಿಸಿ, ತಾವು ವಿಶ್ರಾಂತಿಯನ್ನು ಪಡೆದು ಭಗವದ್ಭಾಗವತರ ಪೂಜೆಯಲ್ಲಿಯೂ ದಾನಧರ್ಮಾದಿ ಪ ರೋಪಕಾರಗಳಲ್ಲಿಯೂ ನಿರತರಾಗಿರುವರು.

ಈ ಮಹಾರಾಣಿಯವರ ಪ್ರಜ್ಞಾಶಕ್ತಿಗೂ, ಔದಾ ರ್ಯಾದಿ ಸದ್ಗುಣಗಳಿಗೂ ಮೆಚ್ಚಿ, ಶ್ರೀಮನ್ಮಹಾರಾಣಿ ವಿ ಕ್ಟೋರಿಯಾ ಚಕ್ರವರ್ತಿನಿಯವರು ಇವರಿಗೆ (Crown of India) ಕ್ರೌನ್ ಆಫ್ ಇಂಡಿಯಾ "ಅಂದರೆ ಇಂಡಿ ಯಾದೇಶದ ಕಿರೀಟ" ವೆಂಬ ಅಮೋಘವಾದ ಬಿರುದನ್ನು ದಯಪಾಲಿಸಿದ್ದಲ್ಲದೆ, ಗೌರವಾರ್ಥವಾಗಿ ಹತ್ತೊಂಭತ್ತು ತೋಪುಗಳ ಮರ್ಯಾದೆ ಬ್ರಿಟಿಷ್ ಫೌಜುಗಳಿಂದ ನಡಿಸಲ್ಪ ಡತಕ್ಕುದೆಂದು ವಿಧಾಯಿಸಿ ಸನ್ಮಾನಿಸಿದರು. ಮತ್ತು ಈ ಮಹಾರಾಣಿಯು ತಮ್ಮ ಪ್ರಜೆಗಳನ್ನು ತಮ್ಮ ಮಕ್ಕ ಳಂತೆ ಕಾಪಾಡಿಕೊಂಡು ಬಂದದ್ದರಿಂದ ಸರ್ವರೂ ಈಕೆ ಯನ್ನು "ಮಹಾಮಾತೋಶ್ರೀ" ಎಂದು ಕರೆಯುತ್ತಿ ರುವರು. ಇವರ ಭೂತದಯೆ, ದೇಶಾಭಿಮಾನ ಮೊದಲಾದ ಸದ್ಗುಣಗಳನ್ನು, ಇವರು ಸ್ಥಾಪಿಸಿರುವ ಸ್ತ್ರೀವಿದ್ಯಾ ಶಾಲೆಗಳೂ, ವೈದ್ಯಶಾಲೆಗಳೂ, ಏರ್ಪಡಿಸಿದ ನೀರಾವರಿ ಮೊದಲಾದ ಜನೋಪಕಾರ ಕಾರ್ಯಗಳು ಸದಾ ಉದ್ಘೋಷಿ ಸುತ್ತಿರುವವು—ಇವರಕಾಲದ ರಾಜ್ಯಭಾರದ ವಿತರಣೆ, ರಾಜ್ಯಾದಾಯವು ಇಮ್ಮಡಿಯಾಗುವಹಾಗೆ ಮಾಡಿದ ರೀತಿ

ಮೊದಲಾದುವುಗಳನ್ನು ಇಲ್ಲಿ ವಿವರಿಸಲು ಅವಕಾಶವಿಲ್ಲ. ಅವು ಪ್ರತ್ಯೇಕವಾಗಿ ವಿಸ್ತರಿಸಲ್ಪಡತಕ್ಕವುಗಳಾಗಿವೆ. ಮುಖ್ಯವಾಗಿ ಮೇಲ್ಕಂಡ ಸಿದ್ಧಾಂತಕ್ಕೆ ಈ ಮಹಾಮಾತೋಶ್ರೀಯು ಇಂಡಿಯಾ ಸ್ತ್ರೀರತ್ನಗಳಲ್ಲಿ ಪ್ರತ್ಯಕ್ಷಶಿರೋಮಣಿಯಾಗಿ ಪ್ರಕಾಶಿಸುತ್ತಿರುವದರಿಂದ ಇಲ್ಲಿ ಉದಹರಿಸಲಾಯಿತು.

ಶ್ರೀ

# ಭಾರತ ಸಾಧ್ವೀಮಣಿಮಂಜರಿ.

ಆಪದಾಮಪಹರ್ತಾರಂ, ದಾತಾರಂ ಸರ್ವಸಂಪದಾಂ ।
ಲೋಕಾಭಿರಾಮಂ ಶ್ರೀರಾಮಂ ಭೂಯೋಭೂಯೋನಮಾಮ್ಯಹಂ ॥

## ಪ್ರಥಮ ಭಾಗ.

೧.

### ಮೈಸೂರು ಸಂಸ್ಥಾನದ ಮಹಾರಾಣಿ ಲಕ್ಷ್ಮಮ್ಮಣ್ಣಿ.

ಮೈಸೂರು ದೇಶದ ಚರಿತ್ರೆಯಲ್ಲಿ ಈ ಮಹಾರಾಣಿಯು ತುಂಬಾ ಪ್ರಸಿದ್ಧಿಯನ್ನು ಪಡೆದಿರುವಳು. ಸನ್ 1894ನೆ ಇಸವಿ ಡಿಸೆಂಬರು ಮಾಹೆಯಲ್ಲಿ ಸ್ವರ್ಗಸ್ಥರಾದ ಮೈಸೂರು ಮಹಾರಾಜ ಶ್ರೀ ಚಾಮರಾಜೇಂದ್ರ ಒಡೆಯರ್ಬಹದರವರಿಗೆ ಇವರು ಮುತ್ತಜ್ಜಿಯಾಗಬೇಕು. ಈಕೆಯು ತುಂಬಾ ಧೈರ್ಯ, ಸ್ಥೈರ್ಯ, ಸಾಹಸಾದಿ ಗುಣಗಳುಳ್ಳವಳಾಗಿ ಇದ್ದಳು. ಹೈದರನ ಮಗನಾದ ಟಿಪ್ಪೂಸುಲ್ತಾನನು ಮೈಸೂರು ರಾಜ್ಯವನ್ನು ಬಲಾತ್ಕಾರವಾಗಿ ವಶಮಾಡಿಕೊಂಡ ಸಮಯದಲ್ಲಿ, ಈಕೆಯ ಧೈರ್ಯ ಚಾತುರ್ಯಾದಿ ಗುಣಗಳು ಹೊರಪಟ್ಟವು. ತನ್ನ ಚಾತುರ್ಯ ಸಾಹಸಗಳಿಂದ ರಾಜ್ಯವನ್ನು ಪುನಃ ಸಂಪಾದಿಸಿಕೊಂಡಳು. ಆದ್ದ

ರಿಂದ ಈಕೆಯ ಚರಿತ್ರೆಯು ಅತ್ಯಂತ ಶ್ರೋತವ್ಯವಾದುದು. ಈಕೆಯು ಕತ್ತಿ ಗೋಪಾಲರಾಜರ ಔರಸಪುತ್ರಿಯು. ಹೈದರನು ತಿರುಚನಾಪಳ್ಳಿ ಯುದ್ಧದಲ್ಲಿ ಪ್ರಸಿದ್ಧಪಡೆದ ಶೂರನು. ಈತನು ಮೈಸೂರು ಸರ್ವಾಧಿಕಾರಿಯಾದ ನಂಜರಾಜಯ್ಯನವರಲ್ಲಿ ಒಬ್ಬ ಸೇನಾನಾಯಕನಾಗಿದ್ದನು. ತಿರುಚನಾಪಳ್ಳಿಯಮೇಲೆ ಮಹಮ್ಮದಲ್ಲಿಯ ಸಂಗಡ ದಂಡೆತ್ತಿ ಹೊರಟಿದ್ದನು. ಲಕ್ಷ್ಮಮ್ಮಣ್ಣಿಯ ಜನನಕಾಲವು ಸರ್ 1742 ಎಂದು ತಿಳಿಯಬರುತ್ತದೆ. ಆಕೆಯ ವಿವಾಹವು 1759ನೆ ವರುಷದಲ್ಲಿ ಇಮ್ಮಡಿ ಕೃಷ್ಣರಾಜ ಒಡೆಯರಿಗೆ ನಡೆಯಿತು. ಆಕೆಯು ಆ ರಾಜನಿಗೆ ಮೂರನೇ ರಾಣಿಯಾಗಿದ್ದಳು. ಆ ರಾಜನ ಸರ್ವಾಧಿಕಾರಿಯಾದ ನಂಜರಾಜಯ್ಯನೆಂಬ ಸರದಾರನು ಪೂರ್ವದ ಮೈಸೂರು ರಾಜನ ಮಾವನು. ಅಳಿಯನಿಗೆ ರಾಜ್ಯತಂತ್ರವನ್ನು ನಡೆಸುವಷ್ಟು ಶಕ್ತಿ ಇಲ್ಲದ್ದರಿಂದ ನಂಜರಾಜನು ತಾನೇ ರಾಜ್ಯವನ್ನು ನಡೆಸುತಿದ್ದನು. ಹೀಗಿರಲು ನಂಜರಾಜಯ್ಯನ ಆಜ್ಞಾವರ್ತಿಯಾದ ಹೈದರನು, ತಾನೇ ಆ ರಾಜ್ಯಕ್ಕೆ ದೊರೆಯಾಗಬೇಕೆಂಬ ಅಭಿಪ್ರಾಯದಿಂದ, ಸದರಿ ಸರ್ವಾಧಿಕಾರಿ ನಂಜರಾಜನನ್ನು 1759 ರಲ್ಲಿ ಮೂಲೆಯಲ್ಲಿ ಕುಳ್ಳಿರಿಸಿ, ತಾನೇ ಅಧಿಕಾರಾರೂಢನಾಗಲು ಯತ್ನಿಸಿದನು. ದೊಡ್ಡ ಕೃಷ್ಣರಾಜ ಒಡೆಯರ ಪತ್ನಿಯಾದ ಮಹಾರಾಣಿಗೆ ಹೈದರನನ್ನು ಸರ್ವಾಧಿಕಾರಿಯಾಗಿ ಮಾಡಲು ಇಷ್ಟವಿರಲಿಲ್ಲ. ಅದಕ್ಕೆ ಆಕೆಯು ಹೈದರನ ಹತ್ತಿರಿದ್ದ ಖಂಡೇರಾಯನ ಸಂಗಡ ಆಲೋಚನೆ ಮಾಡಿದಳು. ಆಕೆಯು ಇಮ್ಮಡಿ ಕೃಷ್ಣರಾಜ ಒಡೆಯನನ್ನು ವಶ್ಯಮಾಡಿಕೊಂಡಳು. ಈ

ಕೃಷ್ಣರಾಜನ ಮೂರನೇ ಭಾರ್ಯೆಯೇ ಪ್ರಸ್ತುತ ಕಥಾ ನಾಯಿಕೆಯು. ಈತನು ಸಿಂಹಾಸನಕ್ಕೆ ಮುಖ್ಯ ವಾರಸು ದಾರನಾದಮೇಲೆ,ಆತನ ದತ್ತುತಾಯಿಯಾದ ದೇವಾಜಮ್ಮ ಣ್ಣಿಯವರು ತನ್ನ ಕುಮಾರನ ಹೆಸರಿನಲ್ಲಿ ತಾನೇ ರಾಜ್ಯ ವನ್ನು ನಡೆಸುವುದಕ್ಕೆ ಯತ್ನಮಾಡಿದಳು. ಆದರೆ ಮಹಾ ಯೋಧನಾದ ಹೈದರನು ಈ ಸಂಗತಿ ಯೆಲ್ಲವನ್ನೂ ತಿಳಿ ದು, ಅದಕ್ಕೆ ಕಾರಣನಾದ ಖಂಡೇರಾಯನನ್ನು ಬಂಧಿಸಿ ಪಂಜರದಲ್ಲಿ ಇಟ್ಟನು. ದಿನ ದಿನಕ್ಕೆ ಹೈದರನ ಅಧಿಕಾ ರವು ಅಧಿಕವಾಗುತ್ತಿರಲಾಗಿ, 1761ನೆ ಸಂವತ್ಸರದಲ್ಲಿ ಆ ತನು ಸರ್ವಾಧಿಕಾರಿಯಾಗಿ, ಕೃಷ್ಣರಾಜ ಒಡೆಯನನ್ನು ಒಂದು ಚದುರಂಗದ ರಾಜನಹಾಗೆ ಮಾಡಲು ಯತ್ನಿಸಿ ದನು. ಇಮ್ಮಡಿ ಕೃಷ್ಣರಾಜನು 1766ನೆ ಸಂವತ್ಸರ ದಲ್ಲಿ ಮೃತಿಹೊಂದಿದನು. ಅವನಿಗೆ ಮೃತ್ಯು ಸಮಯದಲ್ಲಿ ನಂಜರಾಜ, ಚಾಮರಾಜರೆಂಬ ಇಬ್ಬರು ಕುಮಾರರು ಇದ್ದರು. ಅವರು ರಾಜ್ಯಪದವಿಗೆ ಅರ್ಹರಾಗಿದ್ದರೂ, ನಾ ಮಮಾತ್ರ ರಾಜರನ್ನಾಗಿ ಮಾಡಿ, ಹೈದರನು ಎಷ್ಟುಮಾ ತ್ರವೂ ಅವರ ಅಧಿಕಾರವನ್ನು ಅವರಿಗೆ ಕೊಡದೆ, ತಾನೇ ರಾಜ್ಯಭಾರವನ್ನು ಮಾಡುತಿದ್ದನು. ನಂಜರಾಜನು ಮ ರಾಟೆ ಸರದಾರನಾದ ತ್ರಿಯಂಬಕರಾಯನ ಸಂಗಡ ಗು ಪ್ತವಾಗಿ ರಾಜ್ಯವನ್ನು ಕುರಿತು ಆಲೋಚನೆ ಮಾಡುವ ನೆಂಬ ಸಂಗತಿಯನ್ನು ಕೇಳಿ, ಅವನನ್ನು 1770ನೇ ಸಂವ ತ್ಸರದಲ್ಲಿ ಕೊಂದುಹಾಕಿಸಿದನು. ಚಾಮರಾಜನೂ ಹೈದ ರನ ಬಾಧೆಯಿಂದಲೇ 1776ನೇ ಸಂವತ್ಸರದಲ್ಲಿ ಸ್ವರ್ಗಸ್ಥ ನಾದನು. ಈ ಪ್ರಕಾರ ಸಿಂಹಾಸನಾಧಿಪತಿಗಳಾಗುವ

ದಕ್ಕೆ ತಕ್ಕ ಇಬ್ಬರು ರಾಜಕುಮಾರರೂ ಮೃತ್ಯುಮುಖವನ್ನು ಸೇರಿದ್ದರಿಂದ, ತನಗೆ ಎದುರು ಬರುವವರು ಯಾರೂ ಇಲ್ಲವೆಂದು ಹೈದರನು ಪರಮಾನಂದಭರಿತನಾಗಿದ್ದನು.

ಅದುವರೆಗೆ ಅಂತಃಪುರದಲ್ಲಿ ನಿರ್ಬಂಧದಲ್ಲಿದ್ದ ಲಕ್ಷ್ಮಮ್ಮಣ್ಣಿಗೆ, ಒಂದೇಸಾರಿ ಅಪಾರವಾದ ಸಮುದ್ರವು ವುಕ್ಕಿಬಂದಂತಾದುದು. ಪ್ರಿಯಪತಿಯೂ, ಪ್ರಾಣಸಮಾನರಾದ ಆ ಕುಮಾರರೂ, ಹೈದರನ ಬಾಧೆಯಿಂದ ಈ ಲೋಕವನ್ನು ಬಿಟ್ಟರೆಂತಲೂ, ದುಷ್ಟನಾದ ಹೈದರನ ಕೈಲಿ ತಾನು ಸಿಕ್ಕಿರುವೆನೆಂಬ ಯೋಚನೆಯಿಂದಲೂ, ಇವಳು ಕೃಶವಾಗುತ್ತ ಬಂದಳು. ಹೀಗೆ ಅಪಾರವಾದ ದುಃಖಸಾಗರದಲ್ಲಿ ಮುಳುಗಿ ಕೆಲವು ತಿಂಗಳುವರೆಗೂ ಇತರ ವಿಷಯಗಳೇನೂ ತೋರದೆ ಸುಮ್ಮನಿದ್ದಳು. ಹೀಗಿರಲಾಗಿ, ಪ್ರಾಚೀನವಾದ ಹಿಂದೂರಾಜ್ಯವು ಅನ್ಯಾಯವಾಗಿ ನಾಶವಾಗುತ್ತದೆಯೆಂದೂ, ತಾನು ಸುಮ್ಮನಿದ್ದ ಪಕ್ಷದಲ್ಲಿ ತುರುಕರು ರಾಜ್ಯವೆಲ್ಲವನ್ನೂ ಆಕ್ರಮಿಸುವರೆಂದೂ, ಆಕೆಗೆ ಒಂದು ಘನತರವಾದ ವಿಚಾರವು ಉಂಟಾಯಿತು. ರಾಣಿ ಲಕ್ಷ್ಮಮ್ಮಣ್ಣಿಯು ಒಬ್ಬ ಅಬಲೆಯಾದರೂ, ಇವಳಲ್ಲಿ ಸ್ವಾಭಿಮಾನವೂ, ತೇಜವೂ ಬಹಳವಾಗಿದ್ದವು. ಮೈಸೂರು ಹಿಂದೂಸಿಂಹಾಸನವು ನಷ್ಟವಾಗಿ ಯವನ ರಾಜ್ಯವು ಸ್ಥಾಪಿಸಲ್ಪಡುವುದೆಂಬ ಯೋಚನೆಯು ಮನಸ್ಸಿಗೆ ಬರಲು, ಅದುವರೆಗೂ ಅಡಗಿದ್ದ ಸ್ವಾಭಿಮಾನಪ್ರಕಾಶವು ಅವಳಲ್ಲಿ ಆಕಸ್ಮಿಕವಾಗಿ ಉದಯಿಸಿತು. ಅವಳು ಅಷ್ಟು ದುಃಖಗಳೆಲ್ಲವನ್ನೂ ಬಹಳ ಧೈರ್ಯದಿಂದ ಅಡಗಿಸಿಕೊಂಡು, ಹಿಂದೂರಾಜ್ಯ ರಕ್ಷಣೋಪಾ

ಯುವನ್ನು ಯೋಚನೆ ಮಾಡತೊಡಗಿದಳು. ಆಕೆಯು ಅದಕ್ಕೆ ಮುಂಚಿತವಾಗಿ ಯಾವಾಗಲೂ ಅಂತಃಪುರದಲ್ಲಿದ್ದಳಲ್ಲದೆ ರಾಜ್ಯಭಾರದ ತಂಟೆಗೆ ಹೋದವಳಲ್ಲ. ಆದ್ದರಿಂದ ಸಮಯಾನುಕೂಲವಾದ ರಾಜ್ಯಕಾರ್ಯಗಳೇನೂ ಆಕೆಗೆ ತಿಳಿಯಲು ಸಂಭವವಿರಲಿಲ್ಲ. ಆದರೆ ಸಂಕಟವು ಪ್ರಾಪ್ತವಾದೊಡನೆಯೇ ಧೀರರಾದ ಮನುಷ್ಯರಬುದ್ಧಿಯು ಹೇಗೆಪ್ರಜ್ವಲಿಸುತ್ತದೆ ಎಂಬುವದನ್ನು ಇವಳ ಚರಿತ್ರೆಯಿಂದ ತಿಳಿಯಬಹುದು. ರಾಜ್ಯಕ್ಕೆ ಬಾಲಕನು ಇಲ್ಲವೆಂದು ತೋಚಿದ ಒಡನೆಯೇ ತನ್ನ ಸಹೋದರಿಯ ಕುಮಾರನಾದ ನರಸರಾಜನನ್ನಾಗಲಿ, ತನ್ನ ಸೋದರಳಿಯನಾದ ಸಿದ್ಧರಾಜನನ್ನಾಗಲಿ, ತಾನು ದತ್ತುಪುತ್ರನನ್ನಾಗಿ ಮಾಡಿಕೊಳ್ಳ ಬೇಕೆಂದು ಯೋಚಿಸಿ, ಈ ಸಂಗತಿಯನ್ನು ಹೈದರನಿಗೆ ತಿಳಿಸಿದಳು. ಮಹಾರಾಣಿ ಲಕ್ಷ್ಮಮ್ಮಣ್ಣಿಯು ಗುಣವತಿಯಾಗಿಯೂ, ಚಾತುರ್ಯವತಿಯಾಗಿಯೂ, ತೇಜಸ್ವಿಯಾಗಿಯೂ, ಇರುವಳೆಂದು ಅದುವರೆಗೆ ಎಲ್ಲರಿಗೂ ತಿಳಿದಿದ್ದದ್ದರಿಂದ, ಹೈದರನು ಸರ್ವಸತ್ತಾಧೀಶನಾಗಿದ್ದರೂ, ಆಕೆಯೊಡನೆ ಹೋರಾಡುವುದಕ್ಕೆ ಸಂಶಯಪಡುತಿದ್ದನು. ಆದ್ದರಿಂದ “ ನೀವು ದತ್ತುವಿಧಾನ ಮಾಡಿಕೊಳ್ಳಕೂಡದು ” ಎಂದು ರಾಣಿಯಲ್ಲಿ ಹೇಳುವುದಕ್ಕೆ ಅವನಿಗೆ ಸಾಧ್ಯವಾಗಲಿಲ್ಲ. ಆದ್ದರಿಂದ ಅವನು ಬಹಳ ಯೋಚಿಸಿ, ರಾಣಿಗೆ ಹೀಗೆಂದು ವರ್ತಮಾನವನ್ನು ಹೇಳಿ ಕಳುಹಿಸಿದನು.—“ ನಿಮಗೆ ದತ್ತುಬೇಕಾಗಿದ್ದ ಪಕ್ಷದಲ್ಲಿ, ರಾಜ್ಯವನ್ನಾಳುವುದಕ್ಕೆ ಸಮರ್ಥನಾದ ಬಾಲಕನನ್ನು ನಾನೇ ಪರೀಕ್ಷಿಸಿ, ತಮಗೆ ತೋರಿಸು

ತ್ತೇನೆ ” ಎಂದು ಹೇಳಿ, ಅವನು ಅನೇಕ ಬಾಲಕರನ್ನು ಕರೆಯಿಸಿ, ಅವರೆಲ್ಲರನ್ನೂ ಒಂದು ಕೋಣೆಯಲ್ಲಿ ಇರಿಸಿದನು. ಅವರ ಸಮೀಪದಲ್ಲಿ ವಿಧವಿಧವಾದ ಭೋಜ್ಯ ಪದಾರ್ಥಗಳನ್ನೂ, ಆಟದ ವಸ್ತುಗಳನ್ನೂ, ಅನೇಕವಿಧ ಆಯುಧಗಳನ್ನೂ ಇರಿಸಿ “ನಿಮಗೆ ಇಷ್ಟವಾದ ಪದಾರ್ಥಗಳನ್ನು ತೆಗೆದುಕೊಳ್ಳಿ ”ರೆಂದು, ಆ ಬಾಲಕರಿಗೆ ಹೇಳಿದನು. ಆಮೇಲೆ ಅವರೆಲ್ಲರಲ್ಲಿಯೂ ಅರಿ ಕುಠಾರದ ದೇವರಾಜ ಪುತ್ರನಾದ ಚಾಮರಾಜನೆಂಬ ಚಿಕ್ಕ ಹುಡುಗನು ಒಂದು ಖಡ್ಗವನ್ನೂ, ಒಂದು ದರ್ಪಣವನ್ನೂ ತೆಗೆದುಕೊಂಡನಂತೆ! ಅದರಮೇಲೆ ಆ ಚಿಕ್ಕ ಹುಡುಗನನ್ನು ಲಕ್ಷ್ಮಮ್ಮಣ್ಣಿಯವರು ದತ್ತುಮಾಡಿಕೊಂಡರು. ಮೂರು ಸಂವತ್ಸರ ಪ್ರಾಯವುಳ್ಳ ಆ ಬಾಲಕನನ್ನು ನಾಮಮಾತ್ರಕ್ಕೆ ರಾಜನನ್ನಾಗಿ ಮಾಡಿ, ಹೈದರನು ರಾಜ್ಯಭಾರವನ್ನೆಲ್ಲಾ ತಾನೇ ಮಾಡುತಿದ್ದನು. “ ಮಹಾರಾಣಿ ಲಕ್ಷ್ಮಮ್ಮಣ್ಣಿಗೆ ಈ ಕಪಟವೆಲ್ಲವೂ ತಿಳಿದಿದ್ದರೂ ಹೈದರನ ಜೊತೆಯಲ್ಲಿ ಹೋರಾಡುವುದಕ್ಕೆ ಅವಕಾಶವಿಲ್ಲದೆ ಇತ್ತು. ಆದ್ದರಿಂದ ಹೈದರನಲ್ಲಿ ಬಹಿರಂಗವಾಗಿ ವಿರೋಧವನ್ನು ಬೆಳೆಸುವುದು ದುಸ್ತರವೆಂದು ಎಣಿಸಿ, ಆ ಚತುರ ರಾಣಿಯು ಗುಪ್ತವಾಗಿ ಪರರಾಜರೊಡನೆ ಸಂಧಿಮಾಡಿಕೊಂಡು, ಹೈದರನನ್ನು ಪದಚ್ಯುತನನ್ನಾಗಿ ಮಾಡಬೇಕೆಂದು ನೆನಸಿದಳು. ಅದಕ್ಕಾಗಿ ಆಕೆಯು, ಚೆನ್ನಪಟ್ಟಣದ (ಮದ್ರಾಸ್) ಗೌರ್ನರಾಗಿದ್ದ ಪಿಗಟ್ ದೊರೆ (Lord Pigot) ಯೊಂದಿಗೆ ಗುಪ್ತವಾಗಿ ಪತ್ರ ವ್ಯವಹಾರವನ್ನು ಜರುಗಿಸಲು ಯತ್ನಮಾಡಿದಳು. ಮೈಸೂರು ರಾಜ್ಯವನ್ನು ಮುಸಲ್ಮಾನರ ಕೈಯಿಂದ ದಕ್ಕಿ

ಸಿಕೊಳ್ಳುವ ನಿಮಿತ್ತ, ಇಂಗ್ಲಿಷಿನವರ ಸಹಾಯವನ್ನು ಕೋರುವುದಕ್ಕಾಗಿ, ಆಕೆಯು ತಿರುಮಲಾಚಾರ್ ಉರುಫ್ ಪ್ರಧಾನ ತಿರುಮಲರಾವು, ಎಂಬ ವಕೀಲನನ್ನು ಚೆನ್ನಪಟ್ಟಣಕ್ಕೆ ಕಳುಹಿಸಿದಳು. ಯಾವಾಗಲೂ ಅಂತಃಪುರದಲ್ಲಿದ್ದ ಒಬ್ಬ ರಾಜ ಯುವತಿಯು, ಹೈದರನ ಅನ್ಯಾಯಕ್ಕೆ ಸೈರಿಸದೆ, ಅವನ ಬಂದೀಖಾನೆಯಲ್ಲಿಯೇ ಇದ್ದು, ಅವನಿಗೂ ತಿಳಿಯದೆ, ಅವನನ್ನೇ ಹೊರಡಿಸುವುದಕ್ಕೆ, ಇಂಗ್ಲಿಷಿನವರ ಸಹಾಯವನ್ನು ಸಂಪಾದಿಸಿದಳೆಂಬ ಸಂಗತಿಯು ಭವಿಷ್ಯತ್ಕಾಲದಲ್ಲಿ ಹುಟ್ಟುವ ಚರಿತ್ರಕಾರರಿಗೆ ಅತ್ಯಂತಾನಂದಾಶ್ಚರ್ಯಗಳನ್ನು ಹುಟ್ಟಿಸದೆ ಇರದು. ಹೀಗೆ ಮಹಾಸಂಕಟ ಸಮಯದಲ್ಲಿ ರಾಣಿಯು ಬರೆದ ಪತ್ರಗಳೇ ಇವಳಿಗೆ ಉಂಟಾಗಿದ್ದ ರಾಜಕಾರ್ಯಧುರಂಧರತ್ವವನ್ನು ಹೊರಪಡಿಸುತ್ತವೆ. ಅವಳು ಮೊದಲು ಪತ್ರದಲ್ಲಿ ತಿರುಮಲರಾಯರಿಗೆ ಹೀಗೆ ಬರದಳು. “ನೀವು ಎಷ್ಟುಮಾತ್ರವೂ ಆಲಸ್ಯಮಾಡದೆ ಒಡನೆಯೇ ಹೊರಟುಬಂದು, ಚೆನ್ನಪಟ್ಟಣಕ್ಕೆ ಹೋಗಿ, ಅಲ್ಲಿ ಲಾರ್ಡ್ ಪಿಗಟ್ (Lord Pigot) ದೊರೆಯನ್ನು ಕಂಡು, ಪುನಃ ನಮ್ಮ ರಾಜ್ಯವನ್ನು ಸಂಪಾದಿಸುವುದಕ್ಕೆ ಉಚಿತವಾದ ಮಾತುಗಳಿಂದ ಅವನ ಸಂಗಡ ಚರ್ಚಿಸುವದು. ಅವರ ಸೈನ್ಯದ ಖರ್ಚಿಗಾಗಿ ಒಂದು ಕೋಟಿ ರೂಪಾಯಿಗಳನ್ನೂ, ದರ್ಬಾರು ಖರ್ಚಿಗಾಗಿ ಮೂರು ಲಕ್ಷ ರೂಪಾಯಿಗಳನ್ನೂ ಕೊಡುವುದಕ್ಕೆ ನಾವು ಸಿದ್ಧವಾಗಿದೇವೆ. ಲಾರ್ಡ್ ಪಿಗಟ್ (Lord Pigot) ದೊರೆಯುವರಿಗೆ ನಾವು ಪರಸ್ಪರವಾಗಿ ಬರೆದ ಕಾಗದದಲ್ಲಿ ನೀವು ನಮ್ಮಕಡೆಯ

ಸರ್ವಪ್ರೊಪ್ರೈಟರರೆಂದೂ, ಸಮಯಾನುಸಾರವಾಗಿ ನಮ್ಮ ಗೋಸ್ಕರ ಇಂಗ್ಲಿಷರಲ್ಲಿ ಸಂಧಿಮಾಡುವುದಕ್ಕೆ ಸ್ವತಂತ್ರವಿರುವುದೆಂದೂ ಬರೆದಿರುವೆವು. ನೀವು ಯಾವಪ್ರಕಾರವಾದರೂ ಪ್ರಯತ್ನಮಾಡಿ ರಾಜ್ಯವನ್ನು ಪುನಃ ಸಂಪಾದಿಸಿದ ನಂತರ, ರಾಜ್ಯದ ಆದಾಯದಲ್ಲಿ ನೂರಕ್ಕೆ ಹತ್ತರಪ್ರಕಾರ ನಿಮಿಗೆ ಬಹುಮತಿಯನ್ನು ಕೊಟ್ಟು ನಿಮ್ಮ ಜೀವಿತಕಾಲವೆಲ್ಲವೂ ನಿಮ್ಮನ್ನು ಬಹಳವಾಗಿ ಗೌರವಿಸುವೆವು. ಇದೂ ಅಲ್ಲದೆ, ನಿಮಗೆ ವಂಶಪರಂಪರೆಯಾಗಿ ಸಂಸ್ಥಾನದ ದಿವಾನಗಿರಿಯನ್ನು ಕೊಡುವೆವು."

ಈ ಪತ್ರಿಕಾ ಪ್ರಕಾರವಾಗಿ ತಿರುಮಲರಾಯನು ಚನ್ನಪಟ್ಟಣಕ್ಕೆ ಹೋಗಿ ಲಾರ್ಡ್ ಪಿಗಟ್ (Lord Pigot) ದೊರೆಯೊಡನೆ ಸ್ನೇಹಮಾಡುತ್ತ ಇದ್ದನು. ಆದರೆ, ಇಷ್ಟರಲ್ಲಿಯೇ ಪಿಗಟ್ ದೊರೆಯಮೇಲೆ ಯಾವುದೋ ಒಂದು ಕಾರಣದಿಂದ ಕಂಪನಿಯವರಿಗೆ ಕೋಪ ಉಂಟಾದ್ದರಿಂದ, ತಿರುಮಲರಾವು ಮಾಡುವ ಕೆಲಸಕ್ಕೆ ವಿಘ್ನವುಂಟಾಗಿ, ಅವನು ತಂಜಾವೂರಿನಲ್ಲಿ ಕೆಲವು ದಿನಗಳವರೆಗೂ ಸುಮ್ಮನೆ ಇರುವವನಾದನು. ಅಷ್ಟರಲ್ಲೇ ಇಲ್ಲಿ ಹೈದರನು ಮತ್ತಷ್ಟು ಕ್ರೂರತನವನ್ನು ತೋರಿಸತೊಡಗಿದನು. ಅವನು ತನ್ನ ಪ್ರಭಾವದಿಂದ ಹಿಂದುಸ್ಥಾನದಲ್ಲಿರುವ ಬಹು ಪ್ರದೇಶವನ್ನು ವಶಮಾಡಿಕೊಂಡು, ಚೆನ್ನಪಟ್ಟಣದಮೇಲೆ ದಂಡೆತ್ತಲು ಪ್ರಯತ್ನಪಡುತ್ತಿದ್ದನು. ಚೆನ್ನಪಟ್ಟಣದ ಗವರ್ನರಾದ ಲಾರ್ಡ್ ಮಕಾರ್ಟ್ನೀ (Lord Macartney) ಎಂಬುವನು ಕೂಡ, ಹೈದರನ ಪ್ರತಾಪಾಧಿಕ್ಯವನ್ನು ಸೈರಿಸಕೂಡದೆಂದೂ, ಅವನನ್ನು

ಹೇಗಾದರೂ ಕೊಲ್ಲಬೇಕೆಂದೂ ತಿಳಿದನು. ಮೈಸೂರು ರಾಣಿಯು ಸ್ವರಾಜ್ಯಾಭಿಲಾಷೆಯುಳ್ಳವಳೆಂದೂ, ಕಾರ್ಯನಿರ್ವಾಹತೆಯಲ್ಲಿ ದಕ್ಷಳಾಗಿರುವಳೆಂದೂ ಲಾರ್ಡ್‌ಮಕಾರ್ಟ್ನೀ (Lord Macartney) ಕೇಳಿದ್ದನು. ಹೈದರನಂಥ ಬಲವಂತನ ಸಂಗಡ ಸ್ವತಂತ್ರವಾಗಿ ಹೋರಾಡುವುದು ಕಷ್ಟವಾದ್ದರಿಂದ ಲಕ್ಷ್ಮಮ್ಮಣ್ಣಿಯವರನ್ನು ಸೇರಿಸಿಕೊಂಡು ಅವಳಸಂಗಡಕೂಡಿ ಹೈದರನನ್ನು ಗುಪ್ತವಾಗಿ ಕೊಲ್ಲಬೇಕೆಂದು ಅವನು ಆಲೋಚಿಸಿದನು. ಹೀಗೆ ನಿಶ್ಚಯಿಸಿ ಲಾರ್ಡ್ ಮಾಕರ್ಟ್ನೀಯವರು ತಂಜಾವೂರ್ ಸಂಸ್ಥಾನಕ್ಕೆ ರೆಸಿಡೆಂಟರಾಗಿದ್ದ ಸುಲಿವನ್ (John Sullivan) ರವರನ್ನು ಆ ಕೆಲಸಕ್ಕೆ ನಿಯಮಿಸಿದರು. ಆತನು ರಾಣಿಯ ಪ್ರಧಾನಿಯಾದ ತಿರುಮಲರಾವು, ಆತನ ತಮ್ಮ ನಾರಾಯಣರಾವು, ಇವರಸಂಗಡ 1782ನೇ ವರುಷ ಅಕ್ಟೋಬರು ತಿಂಗಳು 28ನೇ ತಾರೀಖಿನಲ್ಲಿ ಸಂಧಿಮಾಡಿಕೊಂಡನು. 1782ನೇ ಸಂವತ್ಸರದ ನವಂಬರು ತಿಂಗಳು 27ನೇ ತಾರೀಖಿನಲ್ಲಿ ಮದರಾಸ್ ಗವರ್ನರವರು ಅದಕ್ಕೆ ಸಮ್ಮತಿಸಿದರು. ಇಂಗ್ಲಿಷಿನವರ ಸಹಾಯವಿಲ್ಲದೆ ತನ್ನ ರಾಜ್ಯವು ದೊರಕುವುದು ದುರ್ಲಭವೆಂದು ಲಕ್ಷ್ಮಮ್ಮಣ್ಣಿಯವರೂ ಆ ಸಂಧಿಗೆ ಸಮ್ಮತಿಸಿ, ಅದನ್ನು ಬಲಪಡಿಸಿದರು. ಒಡನೆಯೇ ಇಂಗ್ಲಿಷಿನವರು ಯುದ್ಧಕ್ಕೆ ಬೇಕಾದ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಂಡು ತಂಜಾವೂರು ರಾಜನನ್ನು ಕಾಪಾಡಿದಹಾಗೆಯೇ ಮೈಸೂರು ಮಹಾರಾಣಿಯವರನ್ನೂ ಸಂರಕ್ಷಣೆಮಾಡಲು ನಿಶ್ಚಯಿಸಿದರು. ಇಂಥಾ ಉಪಕಾರವನ್ನು ಮಾಡಿದ್ದಕ್ಕೆ ಕಂಪೆನಿಯವರಿಗೆ ಪ್ರತ್ಯುಪಕಾರವಾಗಿ ಸಂ

ವತ್ಸರಕ್ಕೆ 25 ಲಕ್ಷರೂಪಾಯಿ ಕಪ್ಪವನ್ನೂ, 15 ಲಕ್ಷರೂಪಾಯಿ ಹುಟ್ಟುವಳಿಯಾಗುವ ದೇಶವನ್ನೂ ಕೊಡುತ್ತೇನೆಂದು ರಾಣಿಯು ಬರೆದಳು. ಹೈದರನ ಮೇಲೆ ದಂಡೆತ್ತಿ ಇಂಗ್ಲಿಷಿನವರ ಸೈನ್ಯವು ಸಮೀಪಕ್ಕೆ ಬರುತ್ತಲೇ ಶ್ರೀರಂಗಪಟ್ಟಣದಲ್ಲಿದ್ದ ರಾಣಿಯಪಕ್ಷದವರೆಲ್ಲರೂ ಹೈದರನಸೈನ್ಯದಮೇಲೆ ತಿರುಗಿಬೀಳಬೇಕೆಂಬದಾಗಿಯೂ, ಇವರಿಗೆ ಗ್ರಾಮದಲ್ಲಿರುವ ಫ್ರಾಂಸೀಸಿನವರು ಸಹಾಯವಾಗಿರಬೇಕೆಂತಲೂ, ಹೀಗೆ ಒಳಗಿನಿಂದಲೂ, ಹೊರಗಿನಿಂದಲೂ ಹೈದರನ ಸೈನ್ಯವನ್ನು ಮುತ್ತಿಗೆ ಹಾಕಬೇಕೆಂತಲೂ ರಾಣಿಯು ಮೊದಲು ಏರ್ಪಾಡು ಮಾಡಿದಳು. ತೋಶೀಖಾನೆಗೆ ಅಧಿಕಾರಿಯಾದ ಶಾಮೈಯ್ಯನೆಂಬೊಬ್ಬ ಕದೀಂ ಸರದಾರನು ರಾಣಿಗೆ ಯಾವಾಗಲೂ ಗುಪ್ತವಾಗಿ ಬಹಳ ಅನುಕೂಲನಾಗಿದ್ದನು. ಶ್ರೀರಂಗಪಟ್ಟಣದಲ್ಲಿ ಜರುಗುವ ಕೆಲಸಗಳಿಗೆಲ್ಲಕ್ಕೂ ರಾಣಿಯು ಆತನನ್ನೇ ನಂಬಿನಿಯಮಿಸಿದ್ದಳು. 1782ನೇ ವರುಷದ ನವಂಬರ್ ತಿಂಗಳಿನಲ್ಲಿ ರಾಣಿಯು ಇದರ ವಿಷಯವಾಗಿ ತಿರುಮಲರಾಯರಿಗೆ ಹೀಗೆ ಬರೆದಳು. “ ಶಾಮಯ್ಯನೂ ಮತ್ತು ಕೆಲವು ಸರದಾರರೂ ನಮಗೆ ಅನುಕೂಲರಾಗಿದ್ದಾರೆ. ಆದ್ದರಿಂದ ಇಂಗ್ಲಿಷಿನವರ ಸೈನ್ಯವು ಬಂದಕೂಡಲೇ ನಾವು ವಿಶೇಷ ಪ್ರಯಾಸವಿಲ್ಲದೆಯೇ ಖಜಾನೆಯನ್ನೂ, ಕೋಟೆಯನ್ನೂ ವಶಮಾಡಿಕೊಳ್ಳಬಹುದು. ಆದ್ದರಿಂದ ನೀವು ಗೆಜ್ಜಲಹಟ್ಟಿ ಕಾವೇರೀಪುರದ ಮಾರ್ಗವಾಗಿ ಇಂಗ್ಲಿಷಿನವರ ಸೈನ್ಯವನ್ನು ಅತಿತ್ವರೆಯಾಗಿ ಕಳುಹಿಸುವುದು.” ಈ ರೀತಿ ರಾಣಿಯು ಬರೆದ ಬಳಿಕ ಈ ಸಂಗತಿಯೆಲ್ಲವನ್ನೂ ಒಬ್ಬ ಸೇ

ವಕನು ಸ್ವಾಮಿದ್ರೋಹಿಯಾಗಿ, ಹೈದರನ ಮಗನಿಗೆ ತಿಳಿಯಪಡಿಸಿದನು. ಹೈದರನು 1782ನೇ ಡಿಶಂಬರು 7ರಲ್ಲಿ ಆರ್ಕಾಡು ಬಳಿ ಮೃತನಾದನು.

ಟಿಪ್ಪೂ ಲಕ್ಷ್ಮಮ್ಮಣ್ಣಿ ಮಾಡಿದ ಪಿತೂರಿಸಂಗತಿಯನ್ನು ಕೇಳಿ, ಬಹಳ ಕೋಪವುಳ್ಳವನಾಗಿ, 1783ನೇ ಸಂವತ್ಸರದಲ್ಲಿ ರಾಣಿಗೆ ಅನುಕೂಲರಾದವರೆಲ್ಲರನ್ನೂ ಬಹಳ ಬಾಧೆಪಡಿಸಿ, ಕಾರಾಗೃಹ ಬದ್ಧರನ್ನಾಗಿ ಮಾಡಿದನು. ಅವರಲ್ಲಿ ಅನೇಕರನ್ನು ಯಮಸದನಕ್ಕೆ ಕಳುಹಿಸಿದನು. ಹೀಗೆ ತನ್ನ ಪ್ರಯತ್ನಕ್ಕೆ ವಿಘ್ನವು ಬಂತೆಂದು ಲಕ್ಷ್ಮಮ್ಮಣ್ಣಿಯವರು ತಿಳಿದು, ಹಿಂದಿನ ಪ್ರಯತ್ನಗಳನ್ನು ಬಿಡದೆ ಅಂತರಂಗದಲ್ಲಿಯೇ ಕಂಪೆನಿಯವರಿಂದ ಉತ್ತರ ಪ್ರತ್ಯುತ್ತರಗಳನ್ನು ನಡೆಸುತ್ತಾ ಟಿಪ್ಪುವಿನ ನಾಶಪ್ರಯತ್ನವನ್ನು ನಡೆಸುತ್ತಲೇ ಇದ್ದಳು. ಆಕೆಯು ಅಬಲೆಯಾಗಿದ್ದರೂ, ತನ್ನ ಪ್ರಯತ್ನಗಳಿಗೆ ಅನೇಕವಿಘ್ನಗಳು ಅಡ್ಡಬರುತ್ತಿದ್ದರೂ ಧೈರ್ಯವನ್ನು ಬಿಡಲಿಲ್ಲ. ಹಾಗಿರುವುದು ಸಾಮಾನ್ಯವಾದುದಲ್ಲ. ಪುರುಷರಿಗಾದರೂ ಇಂಥಾ ಧೈರ್ಯವಿರುವುದು ಕಷ್ಟವು. ಆ ಸಮಯದಲ್ಲಿ "ಟಿಪ್ಪೂ" ಎಂದರೆ ಇಂಗ್ಲೀಷಿನವರೂ ಕೂಡ ಅವನನ್ನು "ಮೈಸೂರು ಹೆಬ್ಬುಲಿ" ಯೆಂದು ಹೇಳಿಕೊಳ್ಳುತ್ತಲಿದ್ದರು. ಅಂಥಾ ದುಷ್ಕಾಲದಲ್ಲಿಯೂ ಆ ವೃದ್ಧರಾಣಿಯು ಟಿಪ್ಪುವನ್ನು ನಶಿಸುವಂತೆ ಮಾಡಿ, ಮೈಸೂರನ್ನು ಮರಳಿ ಸಂಪಾದಿಸಬೇಕೆಂಬ ಧೈರ್ಯವನ್ನೂ, ಇಚ್ಛೆಯನ್ನೂ, ಸ್ವದೇಶಾಭಿಮಾನವನ್ನೂ ಬಿಡದೆ ಇದ್ದಳು. ಆಹಾ ! ಇಂಥ ಧೈರ್ಯವು ದುರ್ಲಭವಲ್ಲವೆ ?

1790ನೇ ವರುಷದಲ್ಲಿ ಆಕೆಯು ಜನರಲ್ ಮೇಡೋಸ್ ದೊರೆಯುವರಿಗೆ (General Meadows) ಬರೆದ ಪತ್ರಿಕೆಯು ಅತ್ಯುತ್ಸಾಹ ಪರಿಪೂರ್ಣವಾಗಿರುವುದು. ಆ ಸೇನಾಧಿಪತಿಯು ಬರೆದ ಪ್ರತ್ಯುತ್ತರವು ಅಷ್ಟು ಉತ್ಸಾಹಪ್ರದವಾಗಿರಲಿಲ್ಲ. ಜನರಲ್ ಮೆಡೋಸ್ ದೊರೆಯುವರು 1790ನೇ ಸಂವತ್ಸರದಲ್ಲಿ ರಾಣಿಯುವರಿಗೆ ಬರೆದ ಒಂದು ಪತ್ರದಲ್ಲಿ ಹೀಗೆ ಬರೆದರಂತೆ:—"ಟಿಪ್ಪು ಯಾವಾಗ ನಶಿಸುವನೋ, ದೇಶವು ಯಾವಾಗ ಲಭಿಸುವುದೋ ಆ ಪರಮೇಶ್ವರನಿಗೆ ತಿಳಿಯುವುದು. (ಅಂದರೆ ಈ ಸಂಗತಿ ಈಗ ನಡೆಯಲಾರದೆಂದು ಕಾಣಿಸುವುದು.) ವಿಜಯವು ಪ್ರಾಪ್ತಿಸುವುದು ಪರಮೇಶ್ವರಾಧೀನವೇ; ನಮಗೆ ಆ ಪರಮೇಶ್ವರನು ಯಶಸ್ಸಾಮರ್ಥ್ಯವನ್ನು ಕೊಟ್ಟ ಪಕ್ಷದಲ್ಲಿ, ನಾವು ಅತ್ಯಾನಂದದಿಂದ ಯೋಗ್ಯವೆಂದು ಕೋರಿದ್ದೇ ಆದರೆ ಮೈಸೂರು ರಾಜ್ಯವನ್ನು ತಮಗೆ ಸಮರ್ಪಿಸುವರಾಗುವೆವು. ರಾಜ್ಯವನ್ನು ಯಾರು ಯಾರು ಯಾವರೀತಿಯಿಂದ ಹಂಚಿಕೊಳ್ಳಬೇಕು ಎಂಬ ಸಂಗತಿಯನ್ನು ಕುರಿತು ಈಗ ನಾವು ಯಾವುದನ್ನೂ ಹೇಳುವುದಕ್ಕಾಗುವುದಿಲ್ಲ. ಮರಾಟೆಯುವರೂ, ನೈಜಾಮನೂ ನಮಗೆ ಸ್ನೇಹಿತರಾದ್ದರಿಂದ ಅವರ ಆಲೋಚನೆಪ್ರಕಾರ ಜರುಗುವುದು. ಸಂಪೂರ್ಣ ಯುದ್ಧವ್ಯಯಗಳನ್ನೂ, ಗೆದ್ದತರುವಾಯ ಸೈನಿಕರಿಗೆ ಬಹುಮಾನಗಳನ್ನೂ ಕೊಡುತ್ತೇವೆಂದು ತಾವು ಬರೆದಿರುವಿರಿ. ಇದು ಬಹು ಒಳ್ಳೇಕೆಲಸವು." ಸಂಪೂರ್ಣ ಸಹಾಯಮಾಡುವರೆಂಬ ಇಂಗ್ಲಿಷಿನವರ ಕಡೆಯಿಂದ ಇಂಥಾಸಂದಿಗ್ಧವಾದ ಪ್ರತ್ಯುತ್ತರ ಬಂದಾಗ, ರಾಣಿಯುವರಿಗೆ

ಎಷ್ಟು ಮನೋವ್ಯಥೆಯುಂಟಾಗಿತ್ತೋ ಓದುವವರೇ ಯೋಚಿಸಬಹುದು. ಆದರೂ ಧೈರ್ಯದ ಅಪರಾವತಾರಳಾದ ಮಹಾರಾಣಿಯು ವಿಗತಪ್ರಯತ್ನವುಳ್ಳವಳಾಗಲಿಲ್ಲ. ಚಿಕ್ಕಂದಿನಿಂದಲೂ ರಾಣಿವಾಸದಲ್ಲಿದ್ದು ಯಾವುದನ್ನೂ ತಿಳಿಯದ ಈ ರಾಜಸ್ತ್ರೀಯು ಶತ್ರುವಿನಕೈಲಿಸಿಕ್ಕಿದ್ದರೂ, ಅವನನ್ನು ನಾಶಮಾಡುವುದಕ್ಕಾಗಿ ಮಾಡುವಪ್ರಯತ್ನಗಳನ್ನೂ, ಅದಕ್ಕೆ ಉಂಟಾಗುವ ತೊಂದರೆಗಳನ್ನೂ, 'ಶಾಂತಿಮಾಡುವೆವು' ಎಂದು ಕಂಪೆನಿಯವರು ಹೇಳುವಜವಾಬನ್ನೂ ಓದುವುದಕ್ಕೆ ಎಷ್ಟೋವಿಚಾರವಾಗಿರುವುದೆಂದು ಹೇಳಲು ಸಂದೇಹವಿಲ್ಲ. ರಾಣಿ ಲಕ್ಷ್ಮಮ್ಮಣ್ಣಿಯವರಿಗುಂಟಾದ ಸ್ವಕಾರ್ಯಗಳಿಗಾಗಿ ಸಂತತ ಪ್ರಯತ್ನೇಚ್ಛೆಯೂ, "ಸತ್ಯಮೇವಜಯತೇ" ಎಂಬ ವಾಕ್ಯದಿಂದ ಆಕೆಗೆ ಉಂಟಾಗಿದ್ದ ದೃಢವಿಶ್ವಾಸಗಳೂ, ಮತ್ತು ಅನೇಕ ಸದ್ಗುಣಗಳೂ, ಆಕೆಯು ತಿರುಮಲರಾವಿಗೂ, ಲಾರ್ಡ್ ಮಾರ್ನ್ನಿಂಗ್ ಟನ್ ದೊರೆಯವರಿಗೂ ಸಂಕಟಸಮಯದಲ್ಲಿ ಬರೆದ ಉತ್ತರಗಳಿಂದ ಸ್ಪಷ್ಟವಾಗುವುವು. ಆ ಉತ್ತರಗಳು ಅಧಿಕವಾಗಿ ಹೃದಯದ್ರಾವಿಕಗಳಾಗಿಯೂ, ಕರುಣಾರಸಪೂರ್ಣವಾದದ್ದಾಗಿಯೂ ಇದ್ದದರಿಂದ ಅದರಲ್ಲಿ ಸ್ವಲ್ಪವನ್ನೆತ್ತಿ ಇಲ್ಲಿ ಬರೆಯುವೆವು. ಆಕೆಯು ತನ್ನ ಪರತಂತ್ರತೆಗೂ, ದೀನಸ್ಥಿತಿಗೂ ವ್ಯಸನಪಟ್ಟು ತಿರುಮಲರಾವಿಗೆ ಹೀಗೆ ಬರೆದಳು. "ನಮ್ಮ ದೀನಾವಸ್ಥೆಯನ್ನು ಕುರಿತು ನಾವು ಅನೇಕ ಸಾರಿ ನಿಮಗೆ ಇದುವರೆಗೇ ತಿಳಿಸಿದ್ದೇವೆ. ನೀವು ಮೈಸೂರನ್ನು ಬಿಟ್ಟು ಈಗ್ಯೆ 24 ವರುಷಗಳಾದವು. ನಾವು ಪ್ರತಿದಿನದಲ್ಲಿಯೂ ಈ ಟಿಪ್ಪು ಉಂಟುಮಾಡುವ ಅ

ನೇಕವಿಧವಾದ ಬಾಧೆಗಳನ್ನು ಅನುಭವಿಸುತ್ತಲೇ ಇರುವೆವು. ಅವನು ನಮ್ಮಗಳಿಗೆ ದಿನದಿನಕ್ಕೂ ಅಧಿಕ ದುಃಖವನ್ನುಂಟುಮಾಡುತ್ತಾನೆ. ಸ್ಫೋಟಕ ವಿಷ ವಿಟ್ಟು ಚಾಮರಾಜ ಒಡೆಯರನ್ನು ಗುಪ್ತವಾಗಿ ಕೊಂದನು. ನಮ್ಮನ್ನು ರಾಜಮಂದಿರದಲ್ಲಿ ಇರಲಿಸದೆ ಅಲ್ಲಿಂದ ಹೊರತಿಸಿದನು. ನಾವು ಅಲ್ಲಿಂದ ಬಂದಾಗ ಅಲ್ಲಿದ್ದ ಕಾವಲಿನವರು ನಮ್ಮನ್ನು ಪರೀಕ್ಷೆಮಾಡಿ ಅಗೌರವ ಪಡಿಸಿದರು. ಅವರು ನಮ್ಮ ಮೈಮೇಲಿದ್ದ ನಗಗಳೆಲ್ಲವನ್ನೂ ತೆಗದುಕೊಂಡು, ನಮಗೆ ಉಟ್ಟುಕೊಳ್ಳುವುದಕ್ಕೆ ಹಳೇವಸ್ತ್ರವನ್ನು ಕೊಟ್ಟರು. ನಮಗೆ ಕಂಠೀ ರವ ಅರಸಿನವರ ಹಳೇಮನೆಯ ಒಂದು ಭಾಗದಲ್ಲಿರುವುದಕ್ಕೆ ಸ್ಥಳವನ್ನು ಕೊಟ್ಟರು. ನಮ್ಮ ಸುತ್ತಲೂ ಪಹರೆಯಿಟ್ಟಿರುವರು. ನಮ್ಮ ದಾಸೀಜನಗಳಪೈಕಿ ನಮಗೆ ಹನ್ನೆರಡುಜನರನ್ನುಮಾತ್ರ ಕೊಟ್ಟು, ಮಿಕ್ಕವರಲ್ಲಿ ಕೆಲವರನ್ನು ಮಹಮ್ಮದೀಯಮತಸ್ಥರನ್ನಾಗಿಮಾಡಿ, ಅವರಿಗೆ ಅತಿನಿಕೃಷ್ಟಗಳಾದ ಕೆಲಸಗಳನ್ನು ಹೇಳಿದರು. ಇನ್ನು ಕೆಲವರನ್ನು ಅತಿದೂಷ್ಯವಾದ ವೃತ್ತಿಯನ್ನು ಅವಲಂಬನೆ ಮಾಡಿಸಿದರು. ಟಿಪ್ಪುವು ತ್ವರೆಯುಲ್ಲಿಯೇ ನಮ್ಮನ್ನು ಕೊಲ್ಲುವೆನೆಂದು ಪ್ರತಿಜ್ಞೆಮಾಡಿರುವನಂತೆ ! ಅವನು ನಮ್ಮ ಪ್ರಾಣಗಳನ್ನು ಯಾವಾಗತೆಗಿಯುವನೋ ತಿಳಿಯದು. ನಮಗೆ ಒಳ್ಳೇದನ್ನು ಮಾಡಬೇಕೆಂದೆಣಿಸಿ ನೀವು ಅನೇಕವಿಧವಾದ ಸಂಕಟಗಳನ್ನು ಅನುಭವಿಸಿದಿರಿ. ನಮಗೋಸ್ಕರವಾಗಿ ನೀವು ಇಂಗ್ಲಿಷಿನವರ ಸಂಗಡ ಸ್ನೇಹಬೆಳಸುವದಕ್ಕಾಗಿ ಜಾನ್‌ಸಲ್ಲಿವನ್ (John Sullivan) ರವರೊಡನೆಯೂ,

ಇತರ ಇಂಗ್ಲಿಷ್ ಸರದಾರರೊಡನೆಯೂ ಪ್ರಸಂಗವನ್ನು ಮಾಡಿ, ಅವರು ನಮಗೆ ಸಹಾಯಕರಾಗುವಹಾಗೆ ಮಾಡಿದಿರಿ. ಇದೂ ಅಲ್ಲದೆ ನಮಗೋಸ್ಕರವಾಗಿ ನಿಮ್ಮ ಮಿತ್ರರನ್ನೂ, ಬಂಧುಗಳನ್ನೂ ನರವ್ಯಾಘ್ರಕ್ಕೆ ಸಮರ್ಪಿಸಿಬಿಟ್ಟಿರಿ. ಹೀಗೆ ನಿಮಗೆ ಸಂಭವಿಸಿದ ಕಷ್ಟಗಳನ್ನು ನೆನಸಿಕೊಂಡರೆ ಗುಂಡಿಗೆಯು ಅದುರಿ ಹೋಗುತ್ತದೆ. ಇಷ್ಟು ನಷ್ಟವಾದರೂ ನಮ್ಮ ಪ್ರಯತ್ನಗಳು ಕೊನೆಸಾಗಿ ನಮ್ಮ ರಾಜ್ಯಕ್ಕೆ ಸ್ವತಂತ್ರವು ಉಂಟಾಗದೆ ಹೋದದ್ದು ಬಹಳ ಸಂತಾಪಕರವಾಗಿರುತ್ತದೆ. ಇನ್ನು ತ್ವರೆಯಲ್ಲಿಯೇ ನಮ್ಮ ನಾಶವಾಗುವುದೆಂಬುವುದಕ್ಕೆ ಸಂಶಯವಿಲ್ಲ. ಟಿಪ್ಪುವಿನ ಹತ್ತಿರಕ್ಕೆ ಒಬ್ಬ ಫ್ರೆಂಚ್ ದೊರೆಯು ಬಂದಿರುವನು. ನಮ್ಮನ್ನು (ರಾಣಿಯನ್ನು) ಕೊಲ್ಲದಿದ್ದರೆ ಟಿಪ್ಪುವಿಗೆ ತ್ವರೆಯಲ್ಲಿಯೇ ನಾಶಬರುವುದೆಂದು ಅವನು ಬೋಧಿಸಿದನಂತೆ. ಅದರಮೇಲೆ ನನ್ನನ್ನು ಶೀಘ್ರವಾಗಿ ಕೊಲ್ಲಲು ನಿಶ್ಚಯಿಸಿದರಂತೆ. ಟಿಪ್ಪುವಿಗೂ, ಫ್ರೆಂಚರವನಿಗೂ ನಡೆದ ಸಂಧಿಯ ನಕಲನ್ನು ಇದರ ಜೊತೆಯಲ್ಲಿಯೇ ಕಳುಹಿಸಿರುವೆನು. ನೀವು ಅದನ್ನು ಇಂಗ್ಲಿಷ್ ಗವರ್ನರ್ ಜನರಲ್ ಲಾರ್ಡ್ ಮಾರ್ನಿಂಗ್ ಟನ್ ರವರಿಗೆ ತೋರಿಸುವುದು. ಫ್ರೆಂಚಿನವರು ಇಲ್ಲಿಗೆ ಪ್ರವೇಶಮಾಡುವುದಕ್ಕೆ ಮುಂಚೆಯೇ ಇಂಗ್ಲಿಷಿನವರು ತಮ್ಮ ಸೈನ್ಯವನ್ನು ಇಲ್ಲಿಗೆ ಕಳುಹಿಸಿ, ಈ ಯವನನನ್ನು ಹೊರಡಿಸದೇಹೋದರೆ, ಕಂಪೆನಿಯವರ ರಾಜ್ಯಕ್ಕೆ ಹೆಚ್ಚುಭಯ ಉಂಟಾಗಬಹುದು. ಇದುವರೆಗೂ ಎರಡು ಮೂರುಸಲ ನಡೆದಹಾಗೆ ಪುನಃ ಇಂಗ್ಲಿಷಿನವರು ಉದಾಸೀನ ಮಾಡಿದಪಕ್ಷದಲ್ಲಿ, ಫ್ರೆಂಚರು ಟಿಪ್ಪುವಿನ ಸಂಗಡ

ಸೇರಿ, ಭಯಂಕರವಾದ ಅಗ್ನಿಯು ಪ್ರಚಂಡಮಾರುತವ ನ್ನು ಕೂಡಿದ ಹಾಗೆ ಸಕಲದೇಶಗಳನ್ನೂ ಹಾಳುಮಾಡಿ ಪ್ರಜಾಸಂಹಾರವನ್ನು ಮಾಡುವರು. ಇಂಗ್ಲಿಷ್ ಗವರ್ನ ರವರಿಗೆ ನಮ್ಮ ವಿಜ್ಞಾಪನೆಯನ್ನು ಕುರಿತು, ನಮ್ಮ ಪ್ರಾಣರಕ್ಷಣೆಯನ್ನು ಕುರಿತೂ ಅನುತಾಪವಿಲ್ಲದಿದ್ದ ರೂ, ಕಂಪೆನಿಯವರು ಅವರ ರಾಜ್ಯವನ್ನು ರಕ್ಷಿಸಿಕೊ ಳ್ಳುವುದಕ್ಕಾದರೂ ಸೈನ್ಯವನ್ನು ಅತಿ ತ್ವರೆಯಿಂದ ಇಲ್ಲಿಗೆ ಕಳುಹಿಸಬೇಕೆಂದು ನೀವು ಅವರಿಗೆ ಹೇಳುವುದು. ಅಷ್ಟೆ ರವರಿಗೂ ನಾವು ಹೇಗಾದರೂ ಪ್ರಾಣಗಳನ್ನು ಕಾಪಾಡಿ ಕೊಳ್ಳುವೆವು. ರಾಜ್ಯವು ನಮಗೆ ಲಭಿಸಿದಪಕ್ಷದಲ್ಲಿ ಇಂಗಲೀ ಷರಿಗೆ ಒಂದು ಕೋಟಿ ರೂಪಾಯಿ ಕೊಡುವೆವು. ಅವರು ಸಲ್ಲಿವನ್ (John Sullivan) ದೊರೆಯವರ ಸಂಗಡಮಾಡಿ ದ ಕರಾರುಮಾತನ್ನು ಸಲ್ಲಿಸುವೆವು. ಸಲ್ಲಿವನ್ ಮೊದಲಾದ ಸರದಾರರಿಗೆಲ್ಲಾ ಅಗ್ರಹಾರಗಳನ್ನು ಕೊಡುವೆವು. ಈ ಯುವನನು ಅತಿ ಕ್ರೂರನಾದ್ದರಿಂದ ಪ್ರಜೆಗಳಿಗೆ ಅತ್ಯಂತ ಬಾಧೆಯುಂಟಾಗುತ್ತಿದೆ. ಅದರಿಂದ ಸೇನೆಯಲ್ಲಿರುವ ಸೈನಿ ಕರೆಲ್ಲರೂ ಅವನಿಗೆ ವಿರುದ್ಧವನ್ನು ತೋರಿಸುತ್ತಲಿದ್ದಾರೆ. ಇಂಥ ಸಮಯದಲ್ಲಿ ಇಂಗ್ಲಿಷ್ ಸೈನ್ಯಕ್ಕೆ ಇಲ್ಲಿನವರು ಅ ಧಿಕ ಸಹಾಯವನ್ನು ಮಾಡುವರು. ಇಲ್ಲಿ ಯಿರುವವರೆಲ್ಲ ರೂ ಅವನ ನಾಶವನ್ನೇ ಕೋರುತ್ತಿರುವರು. ಇಂಗ್ಲಿಷ್ ಸೈನ್ಯವು ಯಾವಾಗಬಂದರೂ ಅವರ ಅನ್ನಪಾನಾದಿಗಳಿಗೆ ಸಾಮಗ್ರಿಗಳು ಬೇಕಾದಷ್ಟು ಏನೂ ಆತಂಕವಿಲ್ಲದೆ ದೊ ರಕುವುವು. ಆದ್ದರಿಂದ ನೀವು ನಿಮ್ಮ ಸಾಮರ್ಥ್ಯವನ್ನೆ ಲ್ಲಾ ವೆಚ್ಚಮಾಡಿ ಯುದ್ಧಪ್ರಯತ್ನವನ್ನು ಮಾಡಿದರೆ

ಶ್ರೀರಂಗನಾಥನು ತಪ್ಪದೆ ನಿಮಗೆ ಸಹಾಯಮಾಡುವನೆಂದು ನಂಬುವೆವು. ”

ಆ ಕಾಲದಲ್ಲಿ ಮೈಸೂರಿನಲ್ಲಿದ್ದ ರಾಜಕೀಯಸ್ಥಿತಿಗಳೆಲ್ಲವೂ ಈ ಉತ್ತರಗಳಿಂದ ಕಣ್ಣಿಗೆ ಎದುರಾಗಿಟ್ಟಂತೆ ಕಾಣಬರುತ್ತಿರುವುವು. ಅಂಥ ಭಯಂಕರಸಮಯದಲ್ಲಿ ನರವ್ಯಾಘ್ರನಾದ ಟಿಪ್ಪುವಿಗೆ ವಿರುದ್ಧವಾಗಿ ಪ್ರಯತ್ನಮಾಡುವುದಕ್ಕೆ ಎಷ್ಟು ದುಸ್ತರವಾಗಿದ್ದಿರುವುದೋ ಓದುವವರೇ ಈ ಉತ್ತರದಿಂದ ತಿಳಿಯಬಲ್ಲರು. ಇಂಥ ಮಹಾಸಂಕಟಸಮಯದಲ್ಲಿ ಲಕ್ಷ್ಮಮ್ಮಣ್ಣಿಯು ಎಷ್ಟುಮಾತ್ರವೂ ವ್ಯಸನಪಡದೆ ನಿಸ್ತರಂಗವಾದ ಸಮುದ್ರದಹಾಗೆ, ಶಾಂತಿಯನ್ನು ಅವಲಂಬಿಸಿಯೂ, ಅಚಲಪರ್ವತದಹಾಗೆ ಧೈರ್ಯವನ್ನು ಸ್ವೀಕರಿಸಿಯೂ ಇದ್ದುದನ್ನು ನೋಡಿ, ಎಂಥಾ ಧೀರನೂ ಗದ್ಗದಕಂಠನುಳ್ಳವನಾಗದೆ ಇರನು. ಸ್ತ್ರೀಯರ ಅಚಲಧೈರ್ಯವು ಅತ್ಯುತ್ಕೃಷ್ಟವಾದ್ದೆಂಬುದು ಈ ಉದಾಹರಣೆಯಿಂದ ತಿಳಿಯಬರುವುದು.

ತರುವಾಯ ಪೂನಾಪೇಷ್ವೆಯವರೂ, ಹೈದರಾಬಾದು ನೈಜಾಮರೂ, ಇಂಗ್ಲಿಷಿನವರೂ ಕೂಡಿ, 1799ನೇವರುಷದಲ್ಲಿ ಟಿಪ್ಪುವಿನಸಂಗಡ ಮಾಡಿದಯುದ್ಧವು ಚರಿತ್ರೆಯನ್ನು ಓದಿದವರಿಗೆಲ್ಲಾ ತಿಳಿದೇಇರುವುದು. ಆದ್ದರಿಂದ ಇಲ್ಲಿ ಆ ಯುದ್ಧದಸಂಗತಿಯನ್ನು ವರ್ಣಿಸಬೇಕಾಗಿಲ್ಲ. ಶ್ರೀರಂಗಪಟ್ಟಣದಲ್ಲಿ ನಡೆದ ಘೋರಯುದ್ಧದಲ್ಲಿ ಟಿಪ್ಪುವು ಮೇ ತಿಂಗಳು ನಾಲ್ಕನೇತಾರೀಖಿನಲ್ಲಿ ಮೃತಿಹೊಂದಿದನಾದ್ದರಿಂದ, ಮೈಸೂರು ಸಿಂಹಾಸನವು ಬಂಧಮುಕ್ತವಾಯಿತು.

ಆ ಯುದ್ಧದಲ್ಲಿ ಲಕ್ಷ್ಮಮ್ಮಣ್ಣಿಯು ಇಂಗ್ಲಿಷಿನವರಿಗೆ ಅಧಿಕವಾಗಿ ಸಹಾಯಮಾಡಿದ್ದರಿಂದ ಆಕೆಯಲ್ಲಿ ಅವರಿಗೆ ಅಧಿಕ ಗೌರವವು ಉಂಟಾಯಿತು. ಯುದ್ಧ ಸಮಾಪ್ತಿಯಾಗುತ್ತಲೇ ಜನರಲ್ ಹ್ಯಾರಿಸ್ (General Haris)ದೊರೆಯವರು ಆಕೆಯನ್ನು ಬಹಳಕೊಂಡಾಡಿ, ಮೈಸೂರು ರಾಜ್ಯದಲ್ಲಿ ಆಕೆಯು ಹೇಳಿದಪ್ರಕಾರ ಏರ್ಪಾಡುಗಳನ್ನು ಮಾಡಿದರು. ರಾಣಿ ಲಕ್ಷ್ಮಮ್ಮಣ್ಣಿಯು ಬುದ್ಧಿಗೆ ಸರಿಯಾದ ವಯೋವೃದ್ಧನೂ, ವಿಚಾರಜ್ಞನೂ ಆದ ಪೂರ್ಣಯ್ಯನು ಮಂತ್ರಿಯಾಗಿ ನಿಯಮಿಸಲ್ಪಟ್ಟನು ಆಕೆಯ ಆಲೋಚನೆಯ ಪ್ರಕಾರವೇ ಮೈಸೂರು ರಾಜ್ಯವು ಶ್ರೀರಂಗಪಟ್ಟಣದಲ್ಲಿ ಸನ್ 1794 ರಲ್ಲಿ ಹುಟ್ಟಿ ನೆಲಮಾಳಿಗೆಯಲ್ಲಿ ಗುಪ್ತವಾಗಿ ಬೆಳೆಯುತ್ತಿದ್ದ ಆಕೆಯ ದತ್ತು ಪುತ್ರನ ಮಗನಾದ ಮುಮ್ಮಡಿಕೃಷ್ಣರಾಜ ಒಡೆಯರಿಗೆ ಕೊಡಲ್ಪಟ್ಟಿತು. ಇಂಥ ಪ್ರಾಚೀನರಾಜ್ಯವನ್ನು ತನ್ನ ಸ್ವಬುದ್ಧಿಯಿಂದ ಪುನಃ ಸ್ಥಾಪಿಸಿದ ಈ ಸ್ವಾಭಿಮಾನವಿಭೂಷಿತಳಾದ ಸ್ತ್ರೀಯು ಕೃತಕೃತ್ಯಳಾದಳು. ತಿರುಮಲರಾಯನಿಗೆ ದಿವಾನಗಿರಿಯನ್ನು ಕೊಡಬೇಕೆಂಬುದು ಈಕೆಯ ಸ್ಥಿರಸಂಕಲ್ಪವಾಗಿತ್ತು. ಆದರೆ ಆಕೆಯ ಇಚ್ಛೆಗಳಲ್ಲಿ ಅದು ಒಂದು ಮಾತ್ರ ಕೊನೆಸಾಗಲಿಲ್ಲ. ರಾಜ್ಯತಂತ್ರಗಳನ್ನೆಲ್ಲಾ ಪುರಾತನಕಾಲದಿಂದ ಮುತ್ಸದ್ದಿಯಾಗಿದ್ದ ಪೂರ್ಣಯ್ಯನೇ ನಡೆಸುತ್ತಿದ್ದನು.

ರಾಜ್ಯದಲ್ಲಿನ ವ್ಯವಹಾರಗಳೆಲ್ಲವೂ ಯಥಾಪ್ರಕಾರವಾಗಿ ನಡೆಯಲಾರಂಭಿಸಿದಮೇಲೆ, ರಾಣಿಯುವರು ಪರಮಾ

ರ್ಥವಿಚಾರದಲ್ಲಿ ಕಾಲವನ್ನು ಕಳೆಯಲು ನಿಶ್ಚಯಿಸಿದರು. ಪರಮೇಶ್ವರನಲ್ಲಿ ಆಕೆಗೆ ಅಧಿಕವಾದವಿಶ್ವಾಸವೂ, ಭಕ್ತಿಯೂ ಉಂಟಾದ್ದರಿಂದಲೇ ಆಕೆಯು ಮಹತ್ತರವಾದ ಸಂಕಟಗಳನ್ನು ಅನುಭವಿಸಿ ಸೌಖ್ಯಪರ್ವತಶಿಖರಕ್ಕೆ ಪ್ರವೇಶಿಸಿದವಳಾದಳು. ಅದರಿಂದಲೇ, ಆಕೆಯು ಭಕ್ತಿರಸಪರಿಪೂರ್ಣತೆಯಿಂದ ದಯಾಳುತ್ವವನ್ನು ಹೊಂದಿ, ದೀನದಯಾಳುವಾದ ಪರಮೇಶ್ವರನನ್ನು ಧ್ಯಾನಿಸುತ್ತಿದ್ದಳು. ಈ ಪ್ರಕಾರ ಕೆಲವು ದಿನಗಳನ್ನು ಭಕ್ತಿಯಿಂದಕಳೆದು, ಆ ಅದ್ವಿತೀಯಸ್ತ್ರೀಯು ಸುಮಾರು 1810ನೇ ಇಸವಿಯಲ್ಲಿ ಸ್ವರ್ಗವನ್ನೈದಿದಳು. ಈಕೆಯು ಭರ್ತೃಮರಣಾನಂತರ 44 ವರುಷಗಳು ಜೀವಿಸಿದ್ದಳು. ಇಷ್ಟುಕಾಲದಲ್ಲಿ ಆಕೆಗೆ ಅನೇಕ ಕಷ್ಟಗಳು ಪ್ರಾಪ್ತವಾದರೂ ಅವೆಲ್ಲವನ್ನೂ ಆಕೆಯು ತನ್ನ ಬುದ್ಧಿಬಲದಿಂದಲೂ, ಧೈರ್ಯದಿಂದಲೂ ನಿವಾರಣೆಮಾಡಿಕೊಂಡು ಕೊನೆಗೆ ಸ್ವಾತಂತ್ರ್ಯಸುಖವನ್ನು ಅನುಭವಿಸಿದಳು. ಮೈಸೂರು ದೇಶದ ಇತಿಹಾಸವನ್ನು ಬರೆದ ಕರ್ನಲ್ ವಿಲ್ಕ್ಸ್ ಎಂಬುವನು ಲಕ್ಷ್ಮಮ್ಮಣ್ಣಿಯನ್ನು ಕುರಿತು 1803ನೇ ಇಸವಿಯಲ್ಲಿ ಹೀಗೆ ಬರೆದಿರುವನು. " ಈ ವೃದ್ಧರಾಣಿಯು ಲೋಕಪೂಜ್ಯಳಾಗಿಯೂ, ಬಹುವಿಚಾರಶೀಲಳಾಗಿಯೂ ಇರುವಳು. ಆಕೆಯ ಚರಿತ್ರೆಯೂ, ಅನುಭವವೂ, ಅನುಭವದಿಂದ ಆಕೆಗೆ ತೋರಿದ ಸದ್ವಿಚಾರವೂ ಅತ್ಯಂತ ಪ್ರಶಂಸನೀಯವಾಗಿ ಆಕೆ ಬುದ್ಧಿಬಲಗಳಿಗೆ ದೀಪದಂತೆ ಪ್ರಕಾಶವಾಗಿರುವುವು. " ಸ್ವರ್ಗಸ್ಥಳಾಗುವವರೆಗೂ ಆಕೆಯು ಇಂದ್ರಿಯಪಟುತ್ವವು ಕೆಡ

ದೆ ಇತ್ತಂತೆ. ಆಪತ್ಕಾಲದಲ್ಲಿ ಧೈರ್ಯವನ್ನು ಅವಲಂಬಿಸಿದ ಹಾಗೆಯೇ, ಈ ಮಹಾಸಾಧ್ವೀಮಣಿಯು ಅಧಿಕಾರದಲ್ಲಿರುವಾಗಲೂ ಶಾಂತಿಯನ್ನೂ, ಭೂತದಯೆಯನ್ನೂ ಅವಲಂಬಿಸಿದ್ದಳು. ಸೇವಕರನ್ನು ದಯಾದೃಷ್ಟಿಯಿಂದ ನೋಡುವುದು ಆಕೆಗೆ ಮುಖ್ಯಕರ್ತವ್ಯವೆನಿಸಿತ್ತು. ಬಡವರಿಗೆ ಈಕೆಯು ಮಾಡಿದ ಅಪರಿಮಿತಸಹಾಯದಿಂದ ಲೋಕದವರು ಈಕೆಯನ್ನು ಮೈಸೂರು ಪ್ರಾಂತ್ಯದಲ್ಲಿ ಈಗಲೂ ಮಾತೃಶ್ರೀ ಲಕ್ಷ್ಮಮ್ಮಣ್ಣಿಯವರೆಂದು ಕರೆಯುವರು. ಆಹಾ! ಇಂಥ ಸ್ತ್ರೀರತ್ನಗಳಲ್ಲವೆ ಭರತಖಂಡಕ್ಕೆ ಲಲಾಮಭೂತೆಯರಾಗುವರು!

ಶ್ರೀ.

# ಭಾರತ ಸಾಧ್ವೀ ಮಣಿಮಂಜರಿ.

## ಇಂದೂರು ಸಂಸ್ಥಾನದ ಮಹಾರಾಣಿ ಅಹಲ್ಯಾಬಾಯಿ

— —o— — —

ರಾಮಾಯ ರಾಮಭದ್ರಾಯ ರಾಮಚಂದ್ರಾಯ ವೇಧಸೇ ।
ರಘುನಾಥಾಯ ನಾಥಾಯ ಸೀತಾಯಾಃ ಪತಯೇ ನಮಃ ॥

—o—

ಈ ಅದ್ವಿತೀಯಳಾದ ಸಾಧ್ವೀಮಣಿಯ ಚರಿತ್ರೆಯು ಮನೋರಂಜಕವಾದರೂ, ಹೃದಯ ದ್ರಾವಕವುಳ್ಳಂಥಾದ್ದಾಗಿಯೂ; ಅನುಕಂಪನೀಯವಾದರೂ, ಅನುಕರಣವಾದದ್ದಾಗಿಯೂ, ವೀರರಸ ರಹಿತವಾದರೂ, ಶಾಂತಿರಸ ಪರಿಪ್ಲುತವಾಗಿಯೂ ಇರುವ ಮೂರು ಅಂಕಗಳ ನಾಟಕವೆಂದು ಹೇಳಬಹುದು. ಈ ನಾಟಕದಲ್ಲಿ ಕೆಲವು ಭಾಗವು ದುಃಖರೂಪವಾದ ಅಂಧಕಾರದೊಡನೆ ವ್ಯಾಪ್ತವಾಗಿದ್ದರೂ, ಅಹಲ್ಯಾಬಾಯಿಯ ಸದ್ಗುಣಗಳೆಂಬ ಚಂದ್ರ ಕಿರಣಗಳಿಂದ ಪ್ರಕಾಶಿತವಾದ್ದರಿಂದ, ರಮ್ಯವಾಗಿ ಇರುತ್ತದೆ. ಈ ಮೂರಂಕಗಳು ಯಾವುವೆಂದರೆ—(೧) ಅಹಲ್ಯಾಬಾಯಿಯ ಜನನ ಮತ್ತು ಬಾಲ್ಯ. (೨) ಆಕೆಯ ಸಂಸಾರ ಸುಖ. (೩) ಆಕೆಯ ವೈಧವ್ಯವೂ ಮತ್ತು ರಾಜ್ಯವಾಳುವಿಕೆಯೂ, ಈ ಮೂರು ಅಂಕಗಳಲ್ಲಿರುವ ಸಂಗತಿಗಳನ್ನು ಬೇರೆಬೇರೆಯಾಗಿ ವಿಚಾರಮಾಡೋಣ.

— — —o— — —

# ಪ್ರಥಮಾಂಕ

## ಜನನ ಮತ್ತು ಬಾಲ್ಯವು.

೧. ಬೊಂಬಾಯಿ ಪ್ರಾಂತದ ಅಹಮದ್ ನಗರವೆಂಬ ತಾಲ್ಲೂಕಿನೊಳಗೆ ಪಾಥರವಡೀ ಎಂಬ ಚಿಕ್ಕ ಗ್ರಾಮ ವುಂಟು ಈ ಗ್ರಾಮದಲ್ಲಿ ಪೂರ್ವದೊಳಗೆ ಆನಂದರಾವ್ ಸಿಂಧಿಯ ನೆಂಬ ಒಬ್ಬ ಮರಾಟೆಯ ಗೃಹಸ್ಥನಿದ್ದನು. ಇವನು ಆ ಗ್ರಾಮದಲ್ಲಿ ದೊಡ್ಡ ಮನುಷ್ಯನೆಂದು ಹೆಸರು ಪಡೆದಿದ್ದನು. ಇವನು ಧನವಂತನಲ್ಲದಿದ್ದುದರಿಂದ, ವ್ಯವಸಾಯ ಮಾಡಿಕೊಂಡು ಜೀವನ ಮಾಡುತ್ತಿದ್ದನು. ಇವನ ಹೆಂಡತಿಯು ಸ್ವಭಾವದಲ್ಲಿ ಇವನನ್ನೇ ಹೋಲಿದ್ದಳು. ಸತ್ವಗುಣಪ್ರಧಾನರಾದ ಈ ದಂಪತಿಗಳಿಗೆ, ೧೭೩೫ನೆಯ ಸಂವತ್ಸರದಲ್ಲಿ ಒಂದು ಕನ್ಯಾ ರತ್ನವು ಹುಟ್ಟಿತು. ಈ ಹುಡುಗಿಗೆ ಇವರು ಅಹಲ್ಯೆ ಎಂದು ಹೆಸರಿಟ್ಟರು. ಇವಳೇ ಚರಿತ್ರನಾಯಿಕೆಯಾದ ಅಹಲ್ಯಾಬಾಯಿ. ಇವಳು ಆಮೇಲೆ ತೋರಿಸಿದ ಅಸಮಾನ ಸದ್ಗುಣಗಳನ್ನು ಕಂಡು, ಇವಳು ಸಾಮಾನ್ಯ ಸ್ತ್ರೀಯಲ್ಲವೆಂತಲೂ, ಅವತಾರ ಮೂರ್ತಿಯೆಂತಲೂ, ಮಹಾರಾಷ್ಟ್ರ ಗ್ರಂಥಕರ್ತರನೇಕರು ದೇವಿ ಅಹಲ್ಯಾಬಾಯಿಯೆಂದು ನಿಶ್ಚಯಿಸಿದ್ದಾರೆ. ಇವಳು ಜಗದಂಬೆಯ ಒಂದು ಅವತಾರವೆಂದು ಹೀಗೆ ಒಂದು ಕಥೆ ಹೇಳುವರು.

೨. ಬಹಳ ದಿವಸಗಳವರೆಗೂ ಆನಂದರಾವಿಗೆ ಸಂತಾನವಿಲ್ಲದಿತ್ತಂತೆ. ಆಗ, ಒಂದು ದಿನ ಅವನ ಹೆಂಡತಿಯು ಚಿಂತಾಕ್ರಾಂತಳಾಗಿರಲು, ಅವರ ಮನೆಗೆ ಒಬ್ಬ ಬೈರಾಗಿಯು ಬಂದ

ನಂತೆ. ಅವಳು ಚಿಂತಾಕುಲಿತಳಾಗಿರುವ ಕಾರಣವನ್ನು ವಿಚಾರಿಸಿ, ನೀವು ಕೊಲ್ಲಾಪುರಕ್ಕೆ ಹೋಗಿ, ಅಲ್ಲಿ ಜಗದಂಬೆಯನ್ನು ಸೇವಿಸಿದ ಪಕ್ಷದಲ್ಲಿ ಸಂತಾನವುಂಟಾಗುವುದು, ಎಂದು ಹೇಳಿ ಹೊರಟುಹೋದನಂತೆ. ಆಂಧ್ರದೇಶದಲ್ಲಿ ಬೆಜವಾಡದ "ಕನಕದುರ್ಗಿಯೆಂಬ" ದೇವತೆಯು ಹೇಗೆ ಪ್ರಖ್ಯಾತಿಯನ್ನು ಪಡೆದಿರುವಳೋ, ಹಾಗೆಯೇ ಮಹಾರಾಷ್ಟ್ರ ದೇಶದಲ್ಲಿ ಕೊಲ್ಲಾಪುರದ "ಜಗದಂಬೆಯು" ಬಹು ಪ್ರಖ್ಯಾತಿಯುಳ್ಳವಳಾಗಿರುವಳು. ಬ್ಲೈರಾಗಿ ಹೇಳಿದ ಪ್ರಕಾರ ಆನಂದರಾವ್ರೂ, ಆವನ ಪತ್ನಿಯೂ ಕೊಲ್ಲಾಪುರಕ್ಕೆ ಹೋಗಿ, ಅಲ್ಲಿಯ ಜಗದಂಬೆಯನ್ನು ಒಂದು ವರುಷದ ವರೆಗೂ ಪೂಜಿಸುತ್ತಿದ್ದರು. ವರುಷದ ಕೊನೆಯಲ್ಲಿ ಜಗದಂಬೆ ಆನಂದರಾವಿಗೆ ಸ್ವಪ್ನದಲ್ಲಿ ಕಾಣಿಸಿಕೊಂಡು, "ನೀನು ಸಂವತ್ಸರದಿಂದಲೂ ದೃಢಭಕ್ತಿಯಿಂದ ಮಾಡಿದ ಪೂಜೆಗೆ ಸಂತುಷ್ಟಳಾದೆನು. ಇನ್ನು ನೀನು ನಿನ್ನ ಗ್ರಾಮಕ್ಕೆ ಹೋಗಬಹುದು. ನಿನ್ನ ಕೋರಿಕೆ ನೆರವೇರುವುದಕ್ಕೆ ನಾನೇ ನಿನ್ನ ಹೊಟ್ಟೆಯಲ್ಲಿ ಜನಿಸುವೆನು." ಎಂದು ಹೇಳಿದಳಂತೆ. ಆನಂದರಾವಿಗೆ ಇಂಥ ಸ್ವಪ್ನವಾದೊಡನೆಯೇ ಆವನ ಹೆಂಡತಿಗೂ ಕೂಡ ಇಂಥ ಸ್ವಪ್ನವೇ ಉಂಟಾಯಿತಂತೆ. ತರುವಾಯ ಸ್ವಲ್ಪ ದಿನಗಳಲ್ಲಿಯೇ ಆವರಿಗೆ ಜಗದಂಬೆಯ ಅಂಶದಿಂದ ಅಹಲ್ಯಾಬಾಯಿ ಹುಟ್ಟಿದಳಂತೆ. ಹೀಗೆ ಅಹಲ್ಯಾಬಾಯಿ ದೇವತಾಂಶ ಭೂತಗಳೆಂದು ಸ್ಥಾಪಿಸುವುದಕ್ಕೆ, ಅನೇಕ ಕಥೆಗಳನ್ನು ಹೇಳುವರು.

೩. **ಈಸಂಗತಿಗಳೆಲ್ಲಾ** ನಿಜವಲ್ಲದಿದ್ದರೂ, ಇದರಿಂದ ಅಹ **ಲ್ಯಾಬಾಯಿಯು** ದೇವತೆಗಳಿಗೆ ಶೋಭಿಸುವ ಸದ್ಗುಣ ಸಂಪನ್ನ

ಳಾದ್ದರಿಂದ, ಲೋಕದವರಿಗೆ ಆಕೆಯಲ್ಲಿ ಅಮಿತ ಪೂಜ್ಯಭಾವವು ಉಂಟಾಗಿತ್ತೆಂದು ತಿಳಿಯಬಹುದು. ಅಹಲ್ಯೆಗೆ ಐದು ಸಂವತ್ಸರವಾದ ತರುವಾಯ, ಆಕೆಯಲ್ಲಿ ಸದ್ಗುಣಗಳ ಅಂಕುರವು ಕಾಣಿಸಲು ಪ್ರಾರಂಭವಾಯಿತು. ತನ್ನ ಜತೆಯಲ್ಲಿ ಆಡುವುದಕ್ಕೆ ಬರುವ ಅಕ್ಕಪಕ್ಕದ ಮಕ್ಕಳನ್ನು ಬಹಳವಾಗಿ ಪ್ರೀತಿಸುತ್ತಿದ್ದಳು. ಅವಳಿಗೆ ತಿನ್ನುವುದಕ್ಕೆ ಯಾರಾದರೂ ಯಾವ ಪದಾರ್ಥವನ್ನು ಕೊಟ್ಟರೂ, ಅದರ ಒಂದು ಭಾಗವನ್ನು ತನ್ನ ಗೆಳತಿಯರಿಗೆ ಕೊಟ್ಟ ಹೊರತು, ತಾನು ಭುಂಜಿಸುತ್ತಿರಲಿಲ್ಲ. ಯಾವ ಪದಾರ್ಥವನ್ನಾದರೂ ಈಶ್ವರನ ಹಾಗೆ ಭಾವಿಸಿ, ಅದನ್ನು ಪೂಜಿಸುವುದು ಆಕೆಗೆ ಪ್ರಿಯವಾದ ಆಟಗಳಲ್ಲಿ ಒಂದಾಗಿತ್ತು. ಮತ್ತು ಚಿಕ್ಕ ವಯಸ್ಸಿನಿಂದಲೂ, ಈಕೆಗೆ ಸತ್ಯದಲ್ಲಿ ವಿಶೇಷ ಭಕ್ತಿ ಇತ್ತು. ಈಕೆಯು ಯಾವಾಗಲೂ ಅಸತ್ಯವಾಡಿದವಳಲ್ಲ. ಯಾರಾದರೂ ಅಸತ್ಯವನ್ನು ಹೇಳಿದ ಪಕ್ಷದಲ್ಲಿ ಅಹಲ್ಯಾಬಾಯಿ ಅವರ ಸಂಗಡ ಮಾತನಾಡುವುದನ್ನೇ ಬಿಟ್ಟು ಬಿಡುತ್ತಿದ್ದಳು.

೪. ಆ ಗ್ರಾಮದಲ್ಲಿ ಒಂದು ಚಿಕ್ಕ ಮಠವಿತ್ತು. ಆ ಮಠವು ಈಗಿನ ಪಾಠಶಾಲೆಗಳಂತಲ್ಲದೆ, ನಮ್ಮ ದೇಶದಲ್ಲಿ ಜೀವನಕ್ಕೋಸ್ಕರ ಕೆಲವರು ಬಡಬ್ರಾಹ್ಮಣರು ಚಿಕ್ಕ ಚಿಕ್ಕ ಕುಗ್ರಾಮಗಳಲ್ಲಿ ಇಟ್ಟುಕೊಂಡಿರುವ ಕೂಲೀ ಮಠಗಳ ಹಾಗೆ ಇತ್ತು. ಆದರೆ, ಪಾಪಭೀತನಾಗಿಯೂ, ಸ್ವಕರ್ಮನಿಷ್ಠೆಯುಳ್ಳವನಾಗಿಯೂ, ಈಶ್ವರ ಭಕ್ತಿಯುಳ್ಳವನಾಗಿಯೂ ಇರುವ ಒಬ್ಬ ಬಡಬ್ರಾಹ್ಮಣನು ಆ ಮಠದಲ್ಲಿ ಗುರುವಾಗಿ ಇದ್ದನು. ಇವನಿಗೆ ಹುಡುಗರಿಂದ ಅಮಾವಾಸ್ಯೆ, ಪೌರ್ಣ

ಮಿಗಳಿಗೆ ಬರುವ ದುಡ್ಡು ವಿನಾ, ಮತ್ತೆ ಬೇರೆ ಯಾವುದೂ ದೊರೆಯುವಿದ್ದರೂ, ಪೇಷ್ವೆಯ ಸಂಸ್ಥಾನದಿಂದ ತಿಂಗಳಿಗೆ ಐದುರೂಪಾಯಿಗಳ ವೇತನವು ದೊರೆಯುತ್ತಿತ್ತು.

೫. ಈಗುರುವಿಗೂ, ಅಹಲ್ಯೆಯ ತಂದೆಯಾದ ಆನಂದರಾಯ ನಿಗೂಅತ್ಯಂತ ಸ್ನೇಹವುಂಟಾಯಿತು. ಈಗುರುವಿಗೆ ಸಂತಾನವಿಲ್ಲದ್ದರಿಂದ, ಅವನು ತನ್ನ ಸ್ನೇಹಿತನ ಮಗಳಾದ ಅಹಲ್ಯೆಯನ್ನು ತನ್ನ ಮಗಳಂತೆ ನೋಡಿಕೊಂಡಿದ್ದನು. ಅಹಲ್ಯೆ ಈ ಗುರುವಿನ ಹತ್ತಿರವೇ ಯಾವಾಗಲೂ ಬೆಳೆಯುತ್ತಿದ್ದಳು. ಈಕೆಗೆ ಅವನು ತನ್ನ ಶಿಷ್ಯರ ಸಂಗಡ ಓದುಬರಹಗಳನ್ನು ಕಲಿಸಿದನು. ಅನೇಕ ಗ್ರಂಥಗಳಲ್ಲಿರುವ ಸದ್ಬೋಧೆಗಳನ್ನು ತಿಳಿಸಿದನು. ಇವನು ಹೇಳುವ ಭಾರತ ಭಾಗವತಾದಿ ಗ್ರಂಥಗಳಲ್ಲಿನ ಕಥೆಗಳೆಲ್ಲವನ್ನೂ ಅಹಲ್ಯೆಯು ಸಾವಧಾನ ದಿಂದ ಕೇಳುತ್ತಿದ್ದಳು. ಸೀತಾದೇವಿಯ ವನವಾಸವನ್ನೂ, ದ್ರೌಪದೀ ದೇವಿಯ ಅಜ್ಞಾತವಾಸವನ್ನೂ, ದಮಯಂತೀ ದೇವಿಯ ಕಷ್ಟವನ್ನೂ, ಸಾವಿತ್ರೀ ದೇವಿಯ ವಿಪತ್ತುಗಳನ್ನೂ, ಅವರ ಪಾತಿವ್ರತ್ಯವೇ ಮೊದಲಾದ ವೃತ್ತಾಂತಗಳನ್ನೂ, ಬಹು ಪ್ರೇಮವಾಗಿ ಕೇಳುತ್ತಿದ್ದಳು. ಇಂಥ ಕಥೆಗಳನ್ನು ಪುನಃ ಪುನಃ ಹೇಳಬೇಕೆಂದು ಗುರುವನ್ನು ಬೇಡುತ್ತಿದ್ದಳು. ಚಿಕ್ಕ ತನದಿಂದಲೂ ವಿದ್ಯೆ ಕಲಿತು ಇಂತಹ ಸಾಧ್ವೀಮಣಿಗಳ ಕಷ್ಟಗಳನ್ನು ಕೇಳಿದವಳಾದ್ದರಿಂದಲೇ ತರುವಾಯ ತನಗೆ ಪ್ರಾಪ್ತವಾದಂಥ ಆಪತ್ತುಗಳೆಲ್ಲವನ್ನೂ, ಧೈರ್ಯದಿಂದ ಸಹಿಸುವುದಕ್ಕೆ ಸಮರ್ಥಳಾದಳೆಂದು ಹೇಳಲು ಸಂದೇಹವಿಲ್ಲ.

೬. ಚಿಕ್ಕತನದಿಂದ ಈಕೆ ಕಲಿತ ವಿದ್ಯಾ ಪ್ರಭಾವದಿಂದ

ಲೇನೇ ತರುವಾಯ ಉಂಟಾದ ಕಷ್ಟ ಸಮಯಗಳಲ್ಲಿಯೂ ಕೂಡ ಸದ್ಗ್ರಂಥಗಳನ್ನು ಓದಿಕೊಂಡು, ತನ್ನ ಕಾರ್ಯಗಳನ್ನು ಮಾಡುವುದಕ್ಕೆ ಸಮರ್ಥಳಾದಳು. ಇದರಿಂದ ಎರಡು ಸಂಗತಿಗಳು ಸ್ಪಷ್ಟವಾಗುತ್ತವೆ. (ಒಂದನೆಯದು) ಅಹಲ್ಯಾಬಾಯಿಯ ಕಾಲದಲ್ಲಿಯೂ ಸ್ತ್ರೀವಿದ್ಯೆ ಇತ್ತು. (ಎರಡನೆಯದು) ಸ್ತ್ರೀಯರಿಗೆ ವಿದ್ಯೆ ಕಲಿಸಿದ್ದೇ ಆದರೆ, ಅವರಿಗೆ ಯಾವಾಗ್ಯೂ ಆ ವಿದ್ಯೆಯು ಲಾಭಪ್ರದವಾಗುವುದೇ ಹೊರತು, ನಷ್ಟಪ್ರದವಾಗಲಾರದು.

೭. ಹೀಗೆ ಪ್ರವರ್ಧಮಾನಳಾದ ಅಹಲ್ಯೆಯು ಒಂಭತ್ತು ವರುಷ ವಯಸ್ಸುಳ್ಳವಳಾಗಲು, ಆಕೆಗೆ ಮದುವೆ ಮಾಡುವುದಕ್ಕೋಸ್ಕರ, ಆಕೆಯ ತಂದೆಯು ವರನನ್ನು ಹುಡುಕಲು ಪ್ರಾರಂಭಿಸಿದನು. ಆನಂದರಾವು ಬಡವನಾದ್ದರಿಂದ ಅತನ ಮಗಳಿಗೆ ಒಳ್ಳೇ ಸಂಬಂಧವು ದೊರಕದೆ ಹೋಯಿತು. ಆದರೂ ಅದೃಷ್ಟವಶದಿಂದ, ಕೊನೆಗೆ ಒಂದು ದೊಡ್ಡ ಸಂಬಂಧವು ದೊರೆಯಿತು.

೮. ಅದು ಹೇಗೆಂದರೆ:—

ಆ ಸಮಯದಲ್ಲಿ ಬಾಲಾಜೀ ಬಾಜೀರಾವು ಪೂನಾಪಟ್ಟಣದಲ್ಲಿ ಪೇಷ್ವೆಯಾಗಿದ್ದನು. ಇವನ ತಮ್ಮ ರಘುನಾಥರಾವು ಮಲ್ಹಾರಿ ರಾವು ಹೋಳ್ಕರ ಸರದಾರನನ್ನೂ, ಅವನ ಮಗ ಖಂಡೇರಾವ ರಘುನಾಥನನ್ನೂ ಹಿಂದೆ ಕರೆದುಕೊಂಡು, ಉತ್ತರ ಹಿಂದೂಸ್ಥಾನಕ್ಕೆ ದಂಡೆತ್ತಿ ಹೋಗಿ, ಶತ್ರುಗಳನ್ನು ಜಯಿಸಿ, ಹಿಂತಿರುಗಿ ಪೂನಾಪಟ್ಟಣಕ್ಕೆ ಬರುವಾಗ, ಪಾಥರ

ವಡೀ ಎಂಬ ಗ್ರಾಮದಲ್ಲಿ ಒಂದು ದೊಡ್ಡ ಆಂಜನೇಯ ದೇವ ಸ್ಥಾನ ಸಿಕ್ಕಿತು. ಪೇಷ್ವೆಯು ಆ ಗ್ರಾಮಕ್ಕೆ ಬಂದಾಗ ಲೆಲ್ಲಾ ಆ ಗುಡಿಯಲ್ಲಿಯೇ ಇಳಿಯುತ್ತಿದ್ದನು. ಆದ್ದರಿಂದ ಈಗಲೂ ಕೂಡ ರಘುನಾಥರಾವು ಇಲ್ಲಿಯೇ ಇಳಿದನು. ಆದಿನ, ಮಠದ ಉಪಾಧ್ಯಾಯನು ಹುಡುಗರಿಗೆಲ್ಲಾ ರಜವನ್ನು ಕೊಟ್ಟು, ತಾನು ರಘುನಾಥರಾಯನ ಸಮೀಪಕ್ಕೆ ಹೋಗಿ ಮಾತನಾಡುತಿದ್ದನು. ಒಂದು ನಿಮಿಷವೂ ಈ ಗುರುವನ್ನು ಬಿಟ್ಟಿರದ ಅಹಲ್ಯೆಯು ಆಗ ಉಪಾಧ್ಯಾಯರ ಹತ್ತಿರ ಬಂದು, ಕೂತುಕೊಂಡಳು. ಶೃಂಗಾರ ಪ್ರಬಂಧಗಳಿಂದ ಕೂಡಿ ವರ್ಣಿಸಿದ ಸ್ತ್ರೀಯರ ಹಾಗೆ ಅಹಲ್ಯೆ ಚಂದ್ರಮುಖಿಯಲ್ಲದೆ ಹೋದರೂ, ಆಕೆಯ ಮುಖದ ಮೇಲೆ ಸ್ವಾಭಾವಿಕವಾಗಿ ರಾಜ ಚಿಹ್ನೆಗಳಿದ್ದುದರಿಂದ, ಆಕೆಯು ನೋಡುವವರಿಗೆ ಬಹು ರಮ್ಯವಾಗಿಯೇ ಇರುತಿದ್ದಳು. ಆಗಲುಪಾಧ್ಯಾಯನು ಈಕೆ ಯ ವೃತ್ತಾಂತವನ್ನೆಲ್ಲ ಕೇಳಿ, ಈಕೆಯ ಸುಗುಣ ಸಂಪದ ವನ್ನು ಬಹಳವಾಗಿ ಕೊಂಡಾಡಿದನು. ಅಷ್ಟರಲ್ಲಿಯೇ ಖಂಡೇರಾವಿಗೆ ಈಕೆಯು ಯೋಗ್ಯಳಾದ ಭಾರ್ಯೆಯೆಂದು ನಿಶ್ಚಯಿಸಿ, ರಘುನಾಥರಾಯನು ಖಂಡೇ ರಾಯನ ತಂದೆ ಯಾದ ಮಲ್ಹಾರ ರಾಯನ ಸಮ್ಮತಿಯನ್ನು ಕೇಳಿ, ಅವನ ಸಮ್ಮತಿಯನ್ನು ತೆಗೆದುಕೊಂಡು, ಆನಂದರಾಯನಂ ಕರೆಸಿ, ಮುಹೂರ್ತವನ್ನು ನಿಶ್ಚಯಿಸಿ, ಶುಭಮುಹೂರ್ತದೊಳಗೆ ಅಹ ಲ್ಯಾಖಂಡೇರಾಯರಿಬ್ಬರಿಗೂ ವಿವಾಹವನ್ನು ಮಾಡಿದನು. ಹೀಗೆ ಬಡವನ ಮಗಳಾದ ಅಹಲ್ಯೆಯು ಒಬ್ಬ ಮಂಡಲಾಧೀ ಶ್ವರನಹೆಂಡತಿಯಾದಳು. ಆದ್ದರಿಂದ ಇನ್ನು ನಾವು ಈಕೆ

ಯನ್ನು ಅಹಲ್ಯೆ ಎಂಬ ಸಾಮಾನ್ಯ ಹೆಸರಿನಿಂದ ಕರೆಯದೆ "ಅಹಲ್ಯಾಬಾಯಿ", ಎಂಬ ಹೆಸರಿನಿಂದಲೇ ಕರೆಯೋಣ. ಹೀಗೆ ಅಹಲ್ಯಾಬಾಯಿಯ ಚರಿತ್ರ ನಾಟಕದಲ್ಲಿ ಪ್ರಥಮಾಂಕವು ಸಮಾಪ್ತಿಯಾಯಿತು. ಆದರೆ, ಎರಡನೇ ಅಂಕದೊಳಕ್ಕೆ ಹೋಗುವುದಕ್ಕೆ ಮುಂಚೆ ಅಹಲ್ಯಾಬಾಯಿಯ ಭರ್ತನಾದ ಖಂಡೇರಾಯನ ವಂಶವನ್ನು ಕುರಿತು ಕೊಂಚ ಬರೆಯಲು ಅಪ್ರಸಂಗವಾಗಲಾರದೆಂದು ಇಲ್ಲಿ ಸಂಗ್ರಹವಾಗಿ ಬರೆಯುವೆವು.

೯. ಪೂನಾಪಟ್ಟಣದ ಸಮೀಪದಲ್ಲಿ "ಹೋಳ" ಎಂಬ ಚಿಕ್ಕ ಹಳ್ಳಿ ಇತ್ತು. ಅಲ್ಲಿ "ಖಂಡೋಜಿ" ಎಂಬ ಗೊಲ್ಲರವನು ವಾಸ ಮಾಡಿಕೊಂಡಿದ್ದನು. ಅವನಿಗೆ ಮಲ್ಹಾರಿ ಎಂಬ ಮಗನು ಹುಟ್ಟಿದನು. ಆಮಗನು ಚಿಕ್ಕತನದಲ್ಲಿರುವಾಗಲೇ ಖಂಡೋಜಿಯು ಮೃತಿ ಹೊಂದಿದನು. ತಂದೆ ಮೃತಿ ಹೊಂದಿದ ನಂತರ ಮಲ್ಹಾರಿಯು ತನ್ನ ಸೋದರಮಾವನ ಮನೆಯಲ್ಲಿಯೇ ಬೆಳೆಯುತ್ತಿದ್ದನು. ಅಲ್ಲಿ ಈತನು ಮಾವನ ಹಸುಗಳನ್ನು ಮೇಯಿಸುತ್ತಿದ್ದನು. ಚಿಕ್ಕತನದಿಂದ ಅನೇಕ ವೇಳೆಗಳಲ್ಲಿ ಮಲ್ಹಾರಿಯ ಸಾಹಸವೂ, ಶೌರ್ಯವೂ, ಆಜ್ಞಾಧಾರಕತ್ವವೂ, ಕಂಡು ಬಂದುವು. ಆಗ ಅವನು ತನ್ನ ಸೋದರಳಿಯನನ್ನು ಹಸುಗಳನ್ನು ಕಾಯಬೇಡವೆಂದು ಹೇಳಿ, ಅವನಿಗೆ ಬಾದಾಡೆ ಸೈನ್ಯಾಧಿಪತಿಯ ಸೈನ್ಯದಲ್ಲಿ ಒಂದು ಚಿಕ್ಕ ಜವಾನ ಕೆಲಸವನ್ನು ಸಂಪಾದಿಸಿ ಕೊಟ್ಟನು. ಆಗಿನಿಂದ ಮಲ್ಹಾರಿಯ ಶೌರ್ಯವು ಕಂಡುಬರುತ್ತಿತ್ತು. ಎಷ್ಟುಶೌರ್ಯ ಉಂಟಾಗಿದ್ದರೂ, ಈ ಗುಣವನ್ನು ತೋರಿಸುವುದಕ್ಕೆ ಯೋಗ್ಯ

ವಾದ ಪ್ರಸಂಗವು ಇಲ್ಲದೆ ಹೋದರೆ ಈ ಗುಣಗಳು ಪ್ರಸಿದ್ಧಿಗೆ ಬರಲಾರವು.

೧೦. ಮಲ್ಹಾರಿಯು ಸೈನ್ಯದಲ್ಲಿ ಪ್ರವೇಶ ಮಾಡಿದಾಗ ಪೂನಾ ಪೇಷ್ವೆಗೂ, ಡಿಲ್ಲಿ ಬಾದುಷಹನಿಗೂ ಯುದ್ಧವು ಜರುಗುತ್ತಿತ್ತು. ಇವನು ಕೊಂಚವಾಗಿ ಶೌರ್ಯವನ್ನು ತೋರಿಸಿದ್ದರಿಂದಲೇ ಸಿಲೇದಾರನ ಅಧಿಕಾರವನ್ನು ಕೊಟ್ಟು, ಮಲ್ಹಾರಿಯನನ್ನು ಯುದ್ಧಕ್ಕೆ ಕಳುಹಿಸಿದರು. ಆ ಯುದ್ಧದಲ್ಲಿ ಮಲ್ಹಾರಿರಾಯನು ತನ್ನ ಶೌರ್ಯವನ್ನೂ, ಚಾತುರ್ಯವನ್ನೂ, ಯುದ್ಧಕೌಶಲ್ಯವನ್ನೂ ತೋರಿಸಿದ್ದರಿಂದ, ೫೧ ಕುದುರೇ ಸವಾರರ ಮೇಲೆ ವಿಚಾರಣೆಯ ಅಧಿಕಾರವು ದೊರಕಿತು. ತರುವಾಯ ಇವನು ಮಾಳವ ಪ್ರಾಂತದಲ್ಲಿ "ದಾಯು ಬಹಾದರ"ನೆಂಬ ಡಿಲ್ಲೀಶ್ವರನ ಸೈನ್ಯಾಧಿಪತಿಯನ್ನು ಗೆದ್ದನು. ಇದಕ್ಕೆ ಮೆಚ್ಚಿ ಬಾಜೀರಾವು ಪೇಷ್ವೆಯವರು ಇವನಿಗೆ ಮಾಳವಪ್ರಾಂತವನ್ನು ಕೊಟ್ಟು, "ಸುಬೇದಾರ್ ಮಲ್ಹಾರಿರಾವ್ ಹೋಳ್ಕರ್" ಎಂಬ ಬಿರುದನ್ನು ಕೊಟ್ಟರು. ಹೀಗೆ ಹೋಳೆಂಬ ಕುಗ್ರಾಮದಲ್ಲಿ ಹುಟ್ಟಿದ ಮಲ್ಹಾರಿಗೊಲ್ಲನು, ತನ್ನ ಶೌರ್ಯ ಧೈರ್ಯಗಳಿಂದ ಇಂದೂರು ಸಂಸ್ಥಾನಕ್ಕೆ ರಾಜನಾಗಿ ಮಲ್ಹಾರಿರಾವ್ ಹೋಳ್ಕರ್ ಎಂಬ ಬಿರುದನ್ನು ಸಂಪಾದಿಸಿಕೊಂಡನು. ತನ್ನ ರನ್ಮ ಭೂಮಿಯಾದ ಹೋಳೆಂಬುವ ಗ್ರಾಮವನ್ನು ಅಜರಾಮರವಾಗಿ ಮಾಡಿದನು. ಇವನ ಹೆಂಡತಿಯ ಹೆಸರು ಗೌತಮಾಬಾಯಿ, ಇವನಿಗೆ "ಖಂಡೇರಾವ್" ಎಂಬ ಕುಮಾರನು ಹುಟ್ಟಿದನು. ಇವನೇ ಅಹಲ್ಯಾಬಾಯಿಯ ಪತಿಯು. ಇವನು

ಚಿಕ್ಕ ತನದಿಂದಲೂ ಪ್ರಬಲನಾಗಿ ತಂದೆಯಹಾಗೆ ಶೌರ್ಯ, ಧೈರ್ಯ, ಸಾಹಸಗಳುಂಟಾದವನೆಂದು ಪ್ರಖ್ಯಾತನಾದನು.

## ದ್ವಿತೀಯ ಅಂಕ.

### ಅಹಲ್ಯಾಬಾಯಿಯವರ ಸಂಸಾರವು.

೧೧. ಸ್ವೈಕತಮಯವಾಗಿ ಪ್ರಕಾಂಡ ಮಾರ್ತಾಂಡ ಕಿರಣಗಳಿಂದ ತಪ್ತವಾಗಿ, ಭಯಂಕರವಾಗಿ ಇರುವ ನಿರ್ಜನ ಪ್ರದೇಶದಲ್ಲಿ, ನಡುವೆ ಬಿಸಿಲು ಸುಡುತ್ತಿರುವ ಮಧ್ಯಾಹ್ನದ ಸಮಯದಲ್ಲಿ, ಪ್ರಯಾಣಮಾಡುವಂಥ ಮಾರ್ಗಸ್ಥನಿಗೆ ದಾರಿಯಲ್ಲಿ ವಿಸ್ತೀರ್ಣವಾದ ಹೊಂಗೇಮರದ ನೆರಳೂ, ತಣ್ಣಗೆ ಇರುವ ಜಲಪ್ರದೇಶವೂ ಕಾಣಿಸಿದ್ದಾದರೆ ಎಷ್ಟು ಆನಂದವಾಗುವುದೊ ಅಷ್ಟು ಆನಂದವನ್ನು ದುಃಖ ಪರಂಪರೆಯಿಂದ ವ್ಯಾಪ್ತವಾಗಿ, ಈ ಚರಿತ್ರಾತ್ಮಕವಾದ ನಾಟಕವನ್ನು ಓದುವವರಿಗೆ ಸಂಸಾರ ಸುಖವೆಂಬ ಎರಡನೇ ಅಂಕವು ಕೊಡದೆ ಇರದು. ಅಹಲ್ಯಾಬಾಯಿಯವರಿಗೆ ವಿವಾಹ ಮಾಡಾಗಿನಿಂದಲೂ, ಆಕೆಯು ವಿಶೇಷವಾಗಿ ಅತ್ತೆಯ ಮನೆಯಲ್ಲಿಯೇ ಇದ್ದಳು. ಸ್ವಾಭಾವಿಕ ಚತುರತೆಯುಳ್ಳವಳಾದ ಕಾರಣ, ಅತ್ತೆಯಮನೆಯನ್ನು ಪ್ರವೇಶಿಸಿದೊಡನೆಯೇ ರಾಜಯುವತಿಯರಿಗೆ ಶೋಭಿಸುವ ಸದ್ಗುಣಗಳೆಲ್ಲವನ್ನೂ ಕಲಿತುಕೊಂಡಳು. ಇನ್ನು, ಮನೆಯಲ್ಲಿಯೂ, ಬಂಧುಗಳಲ್ಲಿಯೂ ಈಕೆ ಹೇಗೆ ವರ್ತಿಸುತ್ತಿದ್ದಳೋ ನೋಡೇಣ.

೧೨. ಮೊದಲಿನಿಂದಲೂ ಈಕೆಯ ಮಾವ ಮಲ್ಹಾರರಾವು ಈಕೆಯನ್ನು ಬಹಳವಾಗಿ ಪ್ರೀತಿಸುತ್ತಿದ್ದನು. ಈಕೆಯು ಆತ

ಸಿಗೆ ಸೇವೆಮಾಡಿ ಆತನ ಆಜ್ಞೆಯನ್ನು ತಪ್ಪದೆ ಕೇಳುತ್ತ, ದಿನ, ದಿನವೂ ಆತನ ಕೃಪೆಯನ್ನು ಪಡೆದಳು. ಅದನ್ನು ನೋಡಿ ಮನೆಯಲ್ಲಿರುವವರಿಗಿಂತಲೂ ಈಕೆಯನ್ನು ಮಾವನು ಅಧಿಕ ವಾಗಿ ಪ್ರೀತಿಸುತ್ತಿದ್ದನು. ಈಕೆಯು ಮನೆಗೆ ಬಂದಾಗಿನಿಂ ದಲೂ ಅನೇಕ ಯುದ್ಧಗಳಲ್ಲಿ ಜಯವು ಸಂಪ್ರಾಪ್ತವಾದ್ದರಿಂದ ಮಲ್ಹಾರಿರಾವು ತನ್ನ ಸೊಸೆಯನ್ನು ಜಯಶ್ರೀಯ ಅವತಾರವೆಂದು ಎಣಿಸುತಿದ್ದನು. ಯಾವ ಯುದ್ಧಕ್ಕೆ ಹೊರಟರೂ ಅಹಲ್ಯಾಬಾಯಿಯ ಆಜ್ಞೆಯನ್ನು ತೆಗೆದುಕೊಂಡು, ಆಕೆಯು ವಿಜಯ ದೊರಕುವುದೆಂದು ಹೇಳಿದ್ದಾದರೆ ಯುದ್ಧಗಳಿಗೆ ಹೋಗುವನು. ಹೀಗೆ ವಿನಯಾದಿ ಸದ್ಗುಣಗಳಿಂದ ಅಹಲ್ಯಾಬಾಯಿಯು ಮಾವನವರ ಪೂರ್ಣ ಕೃಪೆಯನ್ನು ಹೊಂದಿದಳು.

೧೩. ಈಕೆಯ ಅತ್ತೆಯಾದ ಗೌತಮಾಬಾಯಿಯು ಗೃಹ ಕೃತ್ಯಗಳಲ್ಲಿ ಬಹು ತಿಳಿವಳಿಕೆಯುಂಟಾಗಿದ್ದರೂ ಬಹಳ ಕೋಪವುಳ್ಳವಳು. ವಿವಾಹವಾಗುತ್ತಲೇ ಸೂಕ್ಷ್ಮ ಬುದ್ಧಿಯುಳ್ಳ ಅಹಲ್ಯೆಯು, ಅತ್ತೆಯ ಕೋಪಸ್ವಭಾವವನ್ನು ತಿಳಿದು ಕೊಂಡು, ಆಕೆಗೆ ಕೋಪವು ಬಾರದಹಾಗೆ ವರ್ತಿಸುತ್ತಿದ್ದಳು. ಯಾವುದನ್ನು ಕುರಿತಾಗಲಿ ಅತ್ತೆಯವರಿಗೆ ಎದುರುಮಾತನಾಡು ತ್ತಿರಲಿಲ್ಲ. ಯಾವಾಗಲೂ ಅತ್ತೆಯವರ ಇಷ್ಟಪ್ರಕಾರನ ಡೆದುಕೊಳ್ಳುತ್ತಲೂ, ಅತ್ತೆಯವರ ಸದ್ಗುಣಗಳನ್ನು ಗ್ರಹಿ ಸುತ್ತಲೂ, ಆಕೆಯಿಂದ ಯಾವಾಗಲೂ ಆಶೀರ್ವಾದವನ್ನೇ ಪಡೆ ಯುತ್ತಲೂ ಇದ್ದಳು. ಇಂಥ ಚಿಕ್ಕವಯಸ್ಸಿನಲ್ಲಿ ಹೀಗೆ ವರ್ತಿ ಸುವಾಕೆಯು, ಎಂಥ ವಿದ್ಯಾಬುದ್ಧಿಗಳುಳ್ಳವಳೋ ಎಂಬುದನು ವಾಚಕರೇ ಯೋಚಿಸಬಹುದು.

೧೪. ಗೌತಮಾಬಾಯಿಗೆ ಇಬ್ಬರು ಹೆಣ್ಣುಮಕ್ಕಳಿದ್ದರು. ಅವರಿಬ್ಬರೂ ಖಂಡೇರಾಯನಿಗಿಂತ ದೊಡ್ಡವರೇ. ಖಂಡೇರಾಯರ ದೊಡ್ಡ ಅಕ್ಕನ ಹೆಸರು ಹರಕ್‌ಬಾಯಿ. ಚಿಕ್ಕ ಅಕ್ಕನ ಹೆಸರು ಔದಾಬಾಯಿ. ಇವರನ್ನು ಅಹಲ್ಯಾಬಾಯಿ ತನ್ನ ಸ್ವಂತ ಅಕ್ಕಂದಿರಹಾಗೆ ನೋಡುತಿದ್ದಳು. ಇದರಿಂದ, ಅವರೂ ಆ ನಾದಿನಿಯಮೇಲೆ ಅತ್ಯಂತಾನುರಾಗದಿಂದ ಇದ್ದರು. ಖಂಡೇರಾಯರಮದುವೆ ಆಗುವುದಕ್ಕೆ ಮುಂಚೆಯೇ ಇವರಿಗೆ ವಿವಾಹವಾಗಿದ್ದದ್ದರಿಂದ, ಅಹಲ್ಯೆ ಬಂದ ತರುವಾಯ, ಇವರು ಬಹುಶಃ ಅತ್ತೇಮನೆಯಲ್ಲಿಯೇ ಇರುತ್ತಿದ್ದರು. ಆದರೂ ಅಹಲ್ಯಾಬಾಯಿ ಅವರನ್ನು ಆಗಾಗ್ಗೆ ಕರೆಸಿಕೊಂಡು, ಬಹಳ ದಿವಸಗಳ ವರೆಗೂ ತನ್ನ ಹತ್ತಿರ ಇರಿಸಿಕೊಂಡು, ಅವರಿಗೆ ತಾನುಕಲಿತ ವಿದ್ಯೆಯನ್ನು ಕಲಿಸಿದಳು. ತಾನು ಕೇಳಿರುವ ಕಥೆಗಳೆಲ್ಲವನ್ನೂ ಅವರಿಗೆ ಹೇಳಿದಳು. ಹೀಗೆ ಇವರು ಮೂವರೂ ನಿಷ್ಕಪಟವಾದ ಪ್ರೇಮದಿಂದ, ಅಕ್ಕತಂಗಿಯರಹಾಗೆ ವರ್ತಿಸುತ್ತಿದ್ದರು. ಅಹಲ್ಯಾಬಾಯಿಗೆ ಸೇವೆ ಮಾಡುವದಕ್ಕಾಗಿ ಅನೇಕ ದಾಸದಾಸಿಯರಿದ್ದರೂ, ಅವರನ್ನು ಯಾವಾಗಲೂ ಬಾಧೆಪಡಿಸಿದವಳಲ್ಲ. ಅವರನ್ನು ಎಂದಾದರೂ ಜೈದು ಅರಿಯಳು. ಎಲ್ಲರನ್ನೂ ಬಹುದಯೆಯಿಂದ ನೋಡುತ್ತಿದ್ದಳು. ತನಗೆ ಅತ್ತೆಮಾವಂದಿರು ಕೊಟ್ಟ ದ್ರವ್ಯವನ್ನು ತನ್ನ ಸೇವಕರ ಆಶೆತೀರಿಸುವುದಕ್ಕೋಸ್ಕರ ಖರ್ಚುಮಾಡುತಿದ್ದಳು. ಬಡವರ ಸಂತೋಷವನ್ನು ನೋಡಿ, ತಾನೂ ಸಂತೋಷ ಪಡುತ್ತಿದ್ದಳು. ಈ ಸದ್ಗುಣಗಳಿಂದಲೇ ತರುವಾಯ ಅಹಲ್ಯಾಬಾಯಿಯು ವಿಶೇಷ ಕೀರ್ತಿಯನ್ನು ಪಡೆದಳು.

೧೫. ದೇವರಮೇಲೆ ಅಹಲ್ಯಾಬಾಯಿಗೆ ಅತ್ಯಂತ ಪ್ರೀತಿಯುಂಟಾಗಿತ್ತು. ಚಿಕ್ಕತನದಲ್ಲಿದ್ದ ಈ ಸದ್ಗುಣಗಳು ಆಕೆಯನ್ನು ಐಶ್ವರ್ಯಕಾಲದಲ್ಲಿಯೂ ಬಿಟ್ಟಿರಲಿಲ್ಲ. ಅತ್ತೆಮಾವಂದಿರು ಮಾಡುವ ಪೂಜೆಗಳಿಗಿಂತಲೂ, ಧಿಕವಾಗಿ ಪೂಜೆಗಳನ್ನೂ ಜಪಗಳನ್ನೂ ಮಾಡುತ್ತಿದ್ದಳು. ಈ ಅತಿರೇಕವಾದ ಭಕ್ತಿಗಾಗಿ ಈಕೆಯನ್ನು ಮನೆಯವರೆಲ್ಲರೂ ಪರಿಹಾಸ್ಯಮಾಡುತ್ತಿದ್ದರಂತೆ.

೧೬. ವಿವಾಹವಾದ ತರುವಾಯ ಐದುವರುಷಗಳಿಗೆ ಪುಷ್ಪವತಿಯಾದಳು. ಅದುವರೆಗೂ ಹಿಂದೂ ಆಚಾರದ ಮೇರೆಗೆ ದಂಪತಿಗಳಿಗೆ ಸಂಭಾಷಣೆ ಇಲ್ಲದೆ ಇದ್ದದ್ದರಿಂದ, ಅಹಲ್ಯಾಬಾಯಿ ಗಂಡನಲ್ಲಿ ತನಗಿರುವ ಅನುರಾಗವನ್ನು ತೋರಿಸಲಿಕ್ಕೆ ಅವಕಾಶವಿರಲಿಲ್ಲ. ಆದರೆ ತಾಯಿತಂದೆಗಳಿಂದ ತನ್ನ ಹೆಂಡತಿಯ ಲೌಕಿಕ ಸದ್ಗುಣಗಳನ್ನು ಕೇಳುತ್ತಿದ್ದವನಾದ್ದರಿಂದ ಖಂಡೇರಾವಿಗೆ ತನ್ನ ಪತ್ನಿಯಲ್ಲಿ ಅದುವರಗೇನೇ ಅತ್ಯಂತಾನುರಾಗವುಂಟಾಗಿತ್ತು. ಇನ್ನು ದಂಪತಿಗಳಿಬ್ಬರೂ ಏಕವಾದ ತರುವಾಯ ಅಹಲ್ಯಾಬಾಯಿ ತನ್ನ ಪತಿಯಲ್ಲಿ ಹೇಗೆ ನಡೆದು ಕೊಳ್ಳುತ್ತಿದ್ದಳೋ ನೋಡೋಣ.

೧೭. ಚಿಕ್ಕತನದಲ್ಲಿ ಆಕೆಯು ಗುರುವಿನ ಸಮೀಪದಲ್ಲಿ ಕೇಳಿದ್ದ ಸೀತಾ, ದ್ರೌಪದಿ, ದಮಯಂತಿ ಮೊದಲಾದ ಸಾಧ್ವೀಮಣಿಗಳ ಚರಿತ್ರೆಯನ್ನು ಮನಸ್ಸಿನಲ್ಲಿ ದೃಢವಾಗಿ ಇಟ್ಟುಕೊಂಡು, ಆ ಸಾಧ್ವೀಮಣಿಗಳಹಾಗೆಯೇ ತಾನೂ ಪತಿಸೇವೆಯನ್ನು ಮಾಡಬೇಕೆಂದು ನಿಶ್ಚಯಿಸಿ, ಆಪ್ರಕಾರವೇ ಮಾಡುತ್ತಿದ್ದಳು. ಪತಿಯೇ ಪರದೈವವೆಂದು ನಂಬಿ, ಆತನಸೇವೆಯಲ್ಲಿಯೂ, ಆತನಆಜ್ಞೆಯನ್ನು ಶಿರಸಾವಹಿಸುವುದರಲ್ಲಿಯೂ, ಆತನನ್ನು ಸ

ದಾ ಸಂತೋಷಪಡಿಸುವುದರಲ್ಲಿಯೂ, ಮನೋವಾಕ್ಕಾಯಗ ಳಿಂದ ತತ್ಪರಳಾಗಿದ್ದಳು. ಪತಿಯು ನಿದ್ರಿಸಿದಮೇಲೆ ತಾನು ಮಲಗಿಕೊಳ್ಳುವುದು, ಆತನಿಗಿಂತ ಮೊದಲು ಏಳುವುದೇ ಮೊ ದಲಾದ ಧರ್ಮಗಳನ್ನು ತಪ್ಪದೆ ಮಾಡುತ್ತಿದ್ದಳು. ಪ್ರತಿದಿ ನವೂ ಖಂಡೇರಾಯನು ಪ್ರಾತಃಕಾಲದಲ್ಲಿ ಬೇಟೆಯಾಡಲು ಹೋಗಿ ಮಧ್ಯಾಹ್ನಕ್ಕೆ ಬರುತ್ತಿದ್ದನು. ಅದುವರೆಗೂ ಅಹಲ್ಯಾ ಬಾಯಿ ಯಾರು ಎಷ್ಟು ವಿಧವಾಗಿ ಹೇಳಿದರೂ ಭೋಜನ ಮಾ ಡಿದವಳೇ ಅಲ್ಲ. ಖಂಡೇರಾವು ಮನೆಯಲ್ಲಿ ಇಲ್ಲದಿರುವಾಗ ಲೂ, ಗ್ರಾಮಾಂತರಗಳಿಗೆ ಹೋದಾಗಲೂ, ಸ್ತ್ರೀಯರು ಮಾಡಬೇ ಕಾದ ನಿಯಮಗಳನ್ನು ಪಾಲಿಸುತ್ತಿದ್ದಳಂತೆ. ಇಂತಹ ಅಕೃ ತ್ರಿಮ ಪ್ರೇಮವುಳ್ಳ ಭಾರ್ಯೆಯನ್ನು ಖಂಡೇರಾವು ಅತ್ಯಂತಾದರ ಬುದ್ಧಿಯಿಂದಲೂ, ಅನುಪಮೇಯ ಪ್ರೇಮದಿಂದಲೂ, ನೋಡು ತ್ತಿದ್ದನೆಂದು ಬೇರೆ ಬರೆಯಬೇಕಾಗಿಲ್ಲ.

೧೮. ಈ ಸುಶೀಲಗಳುಳ್ಳ ದಂಪತಿಗಳು ಪರಸ್ಪರ ಅಧಿಕಾನು ರಾಗದಿಂದ ದಿನಗಳನ್ನು ಕಳೆಯುತ್ತಲಿರುತಿದ್ದರು.

ಎರಡುವರುಷಗಳ ನಂತರ ಇವರಿಗೆ ಮಾಲೀರಾವು ಎಂಬ ಕುಮಾರನು ಹುಟ್ಟಿದನು. ತರುವಾಯ ಮೂರುವರುಷಕ್ಕೊಂ ದು ಕನ್ಯಾರತ್ನವು ಹುಟ್ಟಿತು. ಈಕೆಯ ಹೆಸರು ಮಂಜಾ ಬಾಯಿ. ಈಕೆಯು ಸಾಧಾರಣ ರೂಪವತಿಯಾದರೂ ತಾ ಯಿಯಹಾಗೆ ಸಂಪನ್ನೆಯಾಗಿದ್ದಳು. ಹೀಗೆ ಅತ್ತೇ ಮಾವಂ ದಿರ ಸಂಪೂರ್ಣಕಟಾಕ್ಷವೂ, ಸೇವಕ ಜನಗಳಭಕ್ತಿಯೂ, ಕ ನ್ಯಾಪುತ್ರರ ಬಾಲಲೀಲೆಗಳೂ, ಅಪರಿಮಿತವಾದ ಐಶ್ವರ್ಯವೂ, ಮೊದಲಾದ ಸುಖಸಾಧನೆಗಳು ಒಟ್ಟಾಗಿ ತನ್ನನ್ನು ಸೇರಲು

ಅಹಲ್ಯಾಬಾಯಿ ಕೆಲವು ಸಂವತ್ಸರಗಳು ಸೌಖ್ಯಸಮುದ್ರದಲ್ಲಿ ಮುಳುಗಿದಳು. ಓದುವರಿರಾ! ಚರಿತ್ರನಾಟಕದ ಸೌಖ್ಯಪೂರಿತವಾದ ಎರಡನೇಅಂಕವು ಸಮಾಪ್ತಿಯಾಗಿದೆ. ಇನ್ನು ಮೂರನೇ ಅಂಕದ ಕಡೆಗೆ ಲೇಖಿನಿಯನ್ನು ತಿರಿಗಿಸೋಣ.

## ತೃತೀಯಅಂಕ

ಅಹಲ್ಯಾಬಾಯಿಯ ಸ್ತ್ರೀಧರ್ಮವೂ, ಆಕೆಯ ರಾಜ್ಯಭಾರ ಮಾಡುವುದೂ.

೧೯. ಇದುವರೆಗೂ ಮನೋರಂಜಕವಾದ ವರ್ಣನೆಗಳನು ಕೇಳಿದ ವಾಚಕರೇ! ದುಃಖ ಪರಂಪರೆಗಳೊಡನೆ ವ್ಯಾಪ್ತವಾಗಿರುವ ವರ್ಣನೆಗಳನ್ನು ಮುಂದೆ ಕೇಳಲು ಧೈರ್ಯವನ್ನು ಅವಲಂಬಿಸಿ ಸಿದ್ಧರಾಗಿರಿ. ಈ ಮೂರನೇ ಅಂಕದಲ್ಲಿ ಅಹಲ್ಯಾಬಾಯಿಯು ಕಷ್ಟಗಳನೇಕಗಳು ವರ್ಣಿಸಲ್ಪಟ್ಟಿದ್ದರೂ, ಯಾವ ಸತ್ಕಾರ್ಯಗಳಿಂದ ಆಕೆಯ ಕೀರ್ತಿಯು ಅಜರಾಮರವಾಯಿತೋ, ಅಂತಹ ಕೃತ್ಯಗಳು ಕೂಡ ವರ್ಣಿಸಲ್ಪಡುವುವು ಆದುದರಿಂದ ಈ ಅಂಕವು ಶುಭಾ ಶುಭ ವರ್ಣನೆಗಳಿಂದ ತುಂಬಿ ಇರುವುದು.

೨೦. ಮೇಲೆ ಬರೆದ ಪ್ರಕಾರ ಅಹಲ್ಯಾಬಾಯಿಯು ಪರಮ ಸೌಖ್ಯವನ್ನು ಅನುಭವಿಸುತ್ತಿರುವಾಗ, ಎಲ್ಲಾ ಐಹಿಕ ಸುಖಗಳೂ ಹೇಗೆ ಕ್ಷಣಭಂಗುರವಾಗುವುವೋ, ಹಾಗೆ ಇವಳ ಸೌಖ್ಯಗಳೆಲ್ಲವೂ ಕ್ಷಣಿಕವಾದುವುಗಳಾಗಿರುತ್ತವೆ.

ಆಕೆಯ ಸೌಖ್ಯವು ಕ್ಷಣಭಂಗುರವಾಯಿತು. ಅಂಥ ಸೌಖ್ಯದಲ್ಲಿ ಅಕೆಯು ಬಹು ದಿನಗಳು ಇದ್ದ ಪಕ್ಷದಲ್ಲಿ ಆಕೆಯ

ಕೀರ್ತಿಯು ಪ್ರಕಾಶಿಸಲಾರದೆಂದು ತಿಳಿದು, ಈಶ್ವರನು ಆಕೆಯ ಮೇಲೆ ಕಷ್ಟಗಳನ್ನು ಕಳುಹಿಸಿದನು.

೨೧. ಆಕೆಯ ಮಾವನಾದ ಮಲ್ಹಾರಿರಾವಿಗೆ ತುರುಕರ ಸಂಗಡ ಯುದ್ಧವು ಸಂಭವಿಸಿದ್ದರಿಂದ, ಸಮರ ಪ್ರಿಯನಾದ ಖಂಡೇರಾವು ಅತ್ಯಂತ ಉತ್ಸಾಹದಿಂದ ತಂದೆಯ ಕೂಡ ಯುದ್ಧಕ್ಕೆ ಹೋದನು. ಅವನು ಶತ್ರುಗಳನ್ನು ಹಿಡಿಯಲು ಪ್ರಯತ್ನಿಸುವುದರೊಳಗಾಗಿ, ಶತ್ರುಸೈನ್ಯದಿಂದ ಒಂದು ಗುಂಡು ಆಕಸ್ಮಿಕವಾಗಿ ಬಂದು, ಅವನಮಸ್ತಕಕ್ಕೆ ತಗಲಿದ್ದರಿಂದ ಅವನು ಮೃತಿಪೊಂದಿದನು.

೨೨. ಹೀಗೆ ಅವಳ ಸೌಭಾಗ್ಯವು ನಷ್ಟವಾಯಿತೆಂದು ತಿಳಿದಾಗಆ ಪತಿವ್ರತಾತಿಲಕಳಾದ ಅಹಲ್ಯಾಬಾಯಿಯು ಸೌಭಾಗ್ಯಹೀನಳಾಗಿ ಇರುವುದೂ, ಪ್ರಾಣಸಮಾನನಾದ ಪತಿಯನ್ನು ಬಿಟ್ಟಿರುವುದೂ, ಇಷ್ಟವಿಲ್ಲದೆ, ಸಹ ಗಮನಕ್ಕೆ ಸಿದ್ಧಳಾದಳು. ಪುತ್ರನ ಮರಣವೆಂಬ ಅಗ್ನಿಯು ಇದುವರೆಗ ತನ್ನ ಹೃದಯದಲ್ಲಿ ಸುಡುತ್ತಿರಲು, ಮಲ್ಹಾರಿರಾವು, ಅಹಲ್ಯಾಬಾಯಿ ಸಹಗಮನಕ್ಕೆ ಸಿದ್ಧಳಾಗಿರುವಳೆಂಬ ಮಾತನ್ನು ಕೇಳಿದೊಡನೆಯೇ, ಅತ್ಯಂತ ದುಃಖಿತನಾಗಿ ಇವಳ ಸಮೀಪಕ್ಕೆ ಬಂದು ಹೀಗೆಂದನು. "ಅಮ್ಮಾ! ನನ್ನಮೇಲೆ ದಯೆಯಿಲ್ಲದೆ ಖಂಡುವು (ಖಂಡೇರಾಯನು) ನನ್ನನ್ನು ಬಿಟ್ಟು ಹೋದನು. ಇನ್ನು ನೀನೂ ನನ್ನನ್ನು ಬಿಟ್ಟು ಹೋಗಲು ನಿಶ್ಚಯಿಸಿರುವೆಯಾ! ಈ ಮುದುಕನ ಮೇಲೆ ನಿನಗೂ ಕರುಣವೆ ಇಲ್ಲವೆ? "ಅಹಲ್ಯೆ" ಸತ್ತುಹೋದಳೆಂತಲೂ, ನೀನೇ ಕುಮಾರನಾದ 'ಖಂಡು' ಎಂತಲೂ ಅಂದುಕೊಳ್ಳುವೆನು.

ಇಂಥ ನಿಷ್ಠುರತೆಯನ್ನು ವಹಿಸಿ, ನನ್ನನ್ನೂ, ಮಕ್ಕಳನ್ನೂ ಬಿಟ್ಟು ಹೋಗಬಹುದೇ?" ಹೀಗೆ ಅನೇಕ ವಿಧಗಳಿಂದ ಕೇಳಿ ಕೊಂಡು, ಅವಳಿಗೆ ಅನೇಕ ವಿಧವಾಗಿ ಸಮಾಧಾನಹೇಳಿ ಆಕೆಯು ಸಹಗಮನವನ್ನು ಮಾಡದ ಹಾಗೆ ಮಾಡಿದನು. ಆಗ ಅಹಲ್ಯಾಬಾಯಿ ಲೋಕೋಪಕಾರವನ್ನು ಮಾಡುತ್ತಾ, ವೈಧವ್ಯದಲ್ಲಿಯೇ ಕಾಲವನ್ನು ಕಳೆಯಲು ನಿಶ್ಚಯಿಸಿದಳು.

೨೩. ಹಿಂದೂ ಸ್ತ್ರೀಯರಿಗೆ ವೈಧವ್ಯದಂಥಾ ನರಕವು ಬೇರೊಂದಿಲ್ಲ ವೆಂಬುದು ಸಕಲ ಜನಗಳಿಗೂ ತಿಳಿದವಿಷ ಯವೇ! ಹೀಗೆ ಹಿಂದೂ ವೈಧವ್ಯದಲ್ಲಿ ಅನುಪಮೇಯ ನರಕ ಕೂಪದಲ್ಲಿ ಮುಳುಗಿ, ಅಹಲ್ಯಾಬಾಯಿಯು ಈಶ್ವರಭಕ್ತಿ ಮೊದಲಾದ, ಸಾಧನೆಗಳಿಂದ, ಮಹಾಧೈರ್ಯದೊಡನೆ ಕಾಲ ವನ್ನು ಕಳೆಯುತ್ತಿದ್ದಳು. ಆದರೆ ಇವಳು ಎಷ್ಟೆಷ್ಟು ಧೈರ್ಯವ ನ್ನುಅವಲಂಬಿಸುತ್ತಿದ್ದಳೋ ಅಷ್ಟಷ್ಟು ಅಧಿಕ ದುಃಖಗಳು ಬರುತ್ತಲಿದ್ದುವು. ಹೀಗೆ ಕಷ್ಟಗಳನ್ನು ಅವಳಮೇಲೆ ತಂ ದಿದ್ದಕ್ಕೆ ಈಶ್ವರನನ್ನು ನಿಂದಿಸಕೂಡದು. ಏಕೆಂದರೆ? ಹೀಗೆ ಅವಳಿಗೆ ಕಷ್ಟಗಳು ಪ್ರಾಪ್ತವಾಗದೆ ಇದ್ದಿದ್ದರೆ ಆ ನಾರೀಮಣಿಯ ಪ್ರಭಾವವು ಅಡಗಿಹೋಗುವದೆಂತಲೂ, ಆರ್ಯಸ್ತ್ರೀಯರಾದ ನಮಗೆ ನಮ್ಮಲ್ಲಿ ಇಂಥ ಸಾಧ್ವಿಯರಿರುವ ರೆಂಬ ಅಹಂಕಾರಕ್ಕೆ ಅವಕಾಶವಿಲ್ಲದೆ ಹೋಗುವುದೆಂತಲೂ, ವಿದ್ಯೆ ಕಲಿತಸ್ತ್ರೀಯರು ಕಷ್ಟಸಮಯದಲ್ಲಿ ಸನ್ಮಾರ್ಗವನ್ನು ಬಿಡದೆ ಇರುವರೆಂತಲೂ, ಸಿದ್ಧಾಂತಮಾಡುವುದಕ್ಕೆ ಈಶ್ವರನು ಕಷ್ಟಗಳನ್ನು ಅಹಲ್ಯಾಬಾಯಿಗೆ ಕೊಟ್ಟನೆಂದು ತಿಳಿಯ

ಬೇಕು. ಆದ್ದರಿಂದ ಆ ಭಗವಂತನನ್ನು ನಾವು ಹೊಗಳ ಬೇಕಾಗಿರುವುದು.

೨೪. ಪತಿಯ ವಿರಹದುಃಖವು ಕೊಂಚ ಶಾಂತವಾಗುತ್ತಿರುವಷ್ಟರಲ್ಲೇ ಅವಳನ್ನು ಸಹಗಮನದಿಂದ ತಿರುಗಿಸಿ ಪುತ್ರಭಾವದಿಂದ ನೋಡುತ್ತಿದ್ದ ಅವಳ ಮಾವನಾದ ಮಲ್ಹಾರಿರಾಯನೂ ಸ್ವರ್ಗಸ್ಥನಾದನು. ಆದರೂ ಅವಳು ಧೈರ್ಯವನ್ನು ಬಿಡದೆ ಚಿಕ್ಕತನದಲ್ಲಿ ಕಲಿತ ವಿದ್ಯಾಪ್ರಭಾವದಿಂದ ಸದ್ಗ್ರಂಥಗಳನ್ನು ಓದಿಕೊಂಡು, ದುಃಖನಿವಾರಣೆಯನ್ನು ಮಾಡಿಕೊಳ್ಳುತ್ತಿದ್ದಳು. ಈ ಸಂಗತಿಗಳೆಲ್ಲವೂ ೧೭೬೬ನೆಯ ಸಂವತ್ಸರ ಪ್ರಾಂತದಲ್ಲಿ ನಡೆದವು. ಅಂದರೆ ಇವಳಿಗೆ ಆಗ್ಗೆ ಇಪ್ಪತ್ತು ಮೂರು ವರಷ ವಯಸ್ಸಾಗಿತ್ತು.

೨೫. ಮಾವನು ಸತ್ತುಹೋದನಂತರ ಆರು ತಿಂಗಳಿಗೆ ಇವಳ ಮಗನಾದ ಮಾಲೆರಾವು ಮೃತನಾದನು. ಮಾಲೆರಾವಿನಿಂದ ಇವಳಿಗೆ ಎಷ್ಟುಮಾತ್ರವೂ ಸುಖವಿರಲಿಲ್ಲ. ಏತಕ್ಕೆಂದರೆ? ಇವನು ಬಹು ದುರ್ಮಾರ್ಗವೃತ್ತಿಯಿಂದ ನಡೆಯುತ್ತಿದ್ದನು. ಅಹಲ್ಯಾಬಾಯಿ ಬ್ರಾಹ್ಮಣರನ್ನು ಬಹಳ ಆದರದಿಂದ ನೋಡುತ್ತಿರುವುದನ್ನು ನೋಡಿ ಅವರನ್ನೇ ಅವನು ವಿಶೇಷ ಬಾಧೆ ಪಡಿಸುತ್ತಿದ್ದನು. ಬ್ರಾಹ್ಮಣರಿಗೆ ವಸ್ತ್ರವನ್ನು ಕೊಡು ಎಂದು ತಾಯಿ ಹೇಳಿದರೆ, ಬ್ರಾಹ್ಮಣರನ್ನು ಕರಿಸಿ ವಸ್ತ್ರಗಳಲ್ಲಿ ಚೇಳನ್ನು ಇಟ್ಟು ಅವರಿಗೆ ಕೊಡುತ್ತಿದ್ದನು ಸುವರ್ಣದಾನಗಳನ್ನು ಕೊಡುವೆನೆಂದು ತಂಬಿಗೆಯೊಳಗೆ ಆಣೆಗಳನ್ನಿಟ್ಟು ಅದರಲ್ಲಿ ಚೇಳುಗಳನ್ನಿಟ್ಟು ಬ್ರಾಹ್ಮಣರಿಗೆ ಕೊಡುತ್ತಿದ್ದನಂತೆ. ಹೀಗೆ ಬ್ರಾಹ್ಮಣರನ್ನೂ, ಇತರರನ್ನೂ ನಿಷ್ಕಾರಣವಾಗಿ

ಬಾಧೆಪಡಿಸುತ್ತಿದ್ದನು. ಹೀಗೆ ಮಾಲೇರಾವ್ರ, ಸರ್ವಭೂತಗಳಲ್ಲಿ ಯೂ ಹೆಚ್ಚಾದ ದಯೆಯುಳ್ಳ ಅಹಲ್ಯಾಬಾಯಿಗೆ ಅತ್ಯಂತದುಃಖ ವನ್ನು ಉಂಟುಮಾಡುತ್ತಿದ್ದನು. ಇಂತಹ ದುಷ್ಟನುಈ ಲೋ ಕದಲ್ಲಿದ್ದದ್ದಾದರೆ ತನ್ನ ಭಕ್ತಳಾದ ಅಹಲ್ಯಾಬಾಯಿಗೆ ಅತ್ಯಂತ ದುಃಖವಾಗುವುದು ಎಂದು ತಿಳಿದು, ಪರಮೇಶ್ವರನುಅವನನ್ನುತ್ವ ರೆಯಲ್ಲಿಯೇ ಇಹಲೋಕದಿಂದ ತೆಗೆದುಕೊಂಡುಹೋದನು.

೨೬. ತನ್ನ ಮಗನು ಅತ್ಯಂತ ದುರ್ಮಾರ್ಗನೆಂದು ತಿಳಿದು, ಅಹಲ್ಯಾಬಾಯಿಯು ತನ್ನಮಗನನ್ನು ಆನೆಗಳಿಂದ ಲೂ, ಕುದುರೆಗಳಿಂದಲೂ ತುಳಿಸಿ, ಕೊಲ್ಲಿಸಿದಳೆಂದು ವದಂತಿ ಯಿರುವುದು. ಆದರೆ ಈ ವದಂತಿಗೆ ಇತಿಹಾಸದಲ್ಲಿ ಆಧಾರ ವೇನೂಇಲ್ಲ. ಅಹಲ್ಯಾಬಾಯಿಯ ನ್ಯಾಯಪ್ರಿಯತೆಯನ್ನು ತೋರಿಸುವುದಕ್ಕೆ ಯಾರೋ ಇಂತಹ ಕಥೆಯನ್ನು ಕಲ್ಪಿಸಿ ದ್ದಾರೆ. ಈ ವಿಷಯವಾಗಿ ಮಾಲ್ಕಂಮೊರೆಯವರು ಈ ರೀತಿ ಯಾಗಿ ಬರೆದಿರುವರು:—"ಮಾಲೇರಾಯನ ಮರಣ ಸಂಬಂ ಧವಾದ ವದಂತಿಯನ್ನು ಕೆಲವರು ಇಂಗ್ಲಿಷಿನವರು ನಂಬಿ ದರು. ಆದರೆ, ಅಷ್ಟರಲ್ಲಿ ನಾನು ಸುಮ್ಮನಿರದೆ ಅಹಲ್ಯಾಬಾ ಯಿಯಮೇಲೆ ಇಂಥಾ ಕಳಂಕವಿರುವುದೇ? ಇಲ್ಲವೇ?ಎಂದು ಅತ್ಯಂತ ಸೂಕ್ಷ್ಮರೀತಿಯಾಗಿ ವಿಚಾರಿಸಿದೆನು. ಅವಳಮೇಲೆ ಎಷ್ಟುಮಾತ್ರವೂ ದೋಷವಿಲ್ಲವೆಂದು ಸ್ಪಷ್ಟವಾಗಿರುವುದು." ಈಪ್ರಕಾರವಾಗಿ ಅನ್ಯದೇಶಸ್ಥನಾದ ಗ್ರಂಥಕಾರನು ಸಾಕ್ಷ್ಯ ವಿರುವಾಗ ಅಹಲ್ಯಾಬಾಯಿಯು ನಿರ್ದೋಷಿಯೆಂದು ಹೇಳ ಬೇಕಾದ ಅಗತ್ಯವಿಲ್ಲವಷ್ಟೆ ? ಆ ಮಗನನ್ನು ಕೊಂದ ಸಂಗತಿ ನಿಜವಾದರೂ, ಅದು ಅಹಲ್ಯಾಬಾಯಿಗೆ ಭೂಷಣವೇ ಹೊರತು

ದೂಷಣವಲ್ಲವು. ಅಂಥ ಜನಕಂಟಕನು ಮಗನಾದರೂ ಪುತ್ರ ಪ್ರೇಮವನ್ನು ತೊರೆದು ಜನಗಳಿಗೆ ಹಿತವಾಗುವುದಕ್ಕೆ ಅವನನ್ನು ವಧಿಸುವುದೇ ಅಧಿಕ ಭೂಷಣಾಸ್ಪದವು. ಯಾವುದು ಹೇಗಿದ್ದರೂ,ಮಾಲೇರಾವು ಸತ್ತದ್ದರಿಂದ ದೇಶಕ್ಕೆ ಬಹಳ ಮೇಲಾಯಿತೆಂದು ಹೇಳಲು ಸಂದೇಹವಿಲ್ಲ. ಹಾಗಲ್ಲದೆ ಅವನು ಜೀವಿಸಿದ್ದಪಕ್ಷದಲ್ಲಿ, ತದ್ದೇಶೀಯರಿಗೆ ಅನೇಕ ಕಷ್ಟಗಳುಂಟಾಗಿ, ದೇಶವೆಲ್ಲವೂ ಹಾಳಾಗುತ್ತಿತ್ತು.

೨೭. ಅಹಲ್ಯಾಬಾಯಿಯವರ ಸದ್ಗುಣಗಳು:-ಮಾಲೇರಾವು ಮೃತಿಹೊಂದಿದೊಡನೆಯೇ, ರಾಜ್ಯವು ಯಾರ ಹೆಸರಿನಲ್ಲಿ ನಡೆಸಬೇಕೋ ಎಂಬ ವಿಚಾರಣೆಗೆ ಪ್ರಾರಂಭವಾಯಿತು. ಪೂನಾಪಟ್ಟಣದ ಪೇಷ್ವೆಯವರು ಇವರಿಗೆ ಪ್ರಭುಗಳಾದ್ದರಿಂದ, ಅವರಿಗೆ ಈ ವರ್ತಮಾನವನ್ನು ತಿಳಿಯಪಡಿಸಿದರು. ಆಗ ಮಾಧವರಾಯರು ಪೇಷ್ವೆಯಾಗಿದ್ದರು. ಆದರೂ ಅಧಿಕಾರವೆಲ್ಲವೂ ರಘುನಾಥರ ಕೈಯಲ್ಲಿತ್ತು. ಮಾಧವರಾಯರು ಯಾವಾಗಲೂ ನ್ಯಾಯಮಾರ್ಗ ಪ್ರವರ್ತಕರಾಗಿ, ಅನ್ಯಾಯಾರ್ಜನೆಯಲ್ಲಿ ಇಚ್ಛೆ ಇಲ್ಲದೆ ಇದ್ದರು. ರಘುನಾಥರಾಯನು ತಿಳುವಳಿಕೆಯುಳ್ಳವನಾದರೂ, ಅವನು ಭಿಕ್ಷುಕನ ಹಾಗೆ ಮೂರ್ಖತನವನ್ನೇ ಮಾಡುತ್ತಿದ್ದನು. ಮಾಲೇರಾವು ಕಾಲವಾದ ತರುವಾಯ ಅಹಲ್ಯಾಬಾಯಿಯವರಿಗೆ ಗಂಗಾಧರ ಯಶೋವಂತನು ಮಂತ್ರಿಯಾಗಿದ್ದನು. ಆತನು ಅಹಲ್ಯಾಬಾಯಿಗೆ ಹೀಗೆ ಉಪದೇಶಮಾಡಿದನು. “ ನಿಮ್ಮ ಸ್ವಗೋತ್ರನಾಗಿರುವ ಯಾವನಾದರೂ ಒಬ್ಬ ಚಿಕ್ಕ ಹುಡುಗನನ್ನು ದತ್ತು ತೆಗೆದುಕೊಂಡು ಅವನಿಗೆ ಈ ರಾಜ್ಯವನ್ನು ಸಮರ್ಪಿಸುವುದು; ಅವನು ದೊಡ್ಡವನಾ

ಗುವ ವರೆಗೂ ಅವನ ಹೆಸರಿನಲ್ಲಿ ನಾನೇ ರಾಜ್ಯಭಾರವನ್ನು ಮಾಡುವೆನು. ನೀವು ನಿಮಗೋಸ್ಕರ ಕೆಲವು ಗ್ರಾಮಗಳನ್ನು ಇಟ್ಟುಕೊಂಡು ಬೇರೆ ಇರಬೇಕು. ನೀವು ಹೆಂಗಸಾದ್ದರಿಂದ ನಿಮ್ಮ ಕೈಲಿ ರಾಜ್ಯಭಾರಮಾಡುವುದು ಆಗಲಾರದು." ಈ ಮಾತಿಗೆ ಅಹಲ್ಯಾಬಾಯಿಯು ಸಮ್ಮತಿಸದೆ, ತಾನೇ ರಾಜ್ಯಭಾರಮಾಡುವೆನೆಂದು ಗಂಗಾಧರ ಯಶೋವಂತನೊಡನೆ ಹೇಳಿದಳು .ಹೆಂಗಸಾಗಿ ಹೀಗೆ ಸ್ವಬುದ್ಧಿಯೊಡನೆ ರಾಜ್ಯಭಾರಮಾಡುವೆನೆಂದು ತಿಳಿಸಿದ್ದು ನೋಡಿ, ಗಂಗಾಧರನಿಗೆ ಕೋಪವುಬಂದು, ಯಾವದಾದರೊಂದು ಉಪಾಯದಿಂದ ಈಕೆಗೆ ಅವಮಾನಮಾಡಿಸಬೇಕೆಂದು ಅವನು ಯೋಚಿಸಿದನು ಹೀಗೆ ಯೋಚಿಸಿ, "ಹೋಳ್ಕರರವರ ರಾಜ್ಯಕ್ಕೆ ಈಗ ವಾರಸುದಾರರು ಯಾರೂ ಇಲ್ಲದೆ ಇರೋಣದರಿಂದ ಈ ರಾಜ್ಯವನ್ನು ನೀವು ಅನಾಯಾಸವಾಗಿ ಹಿಡಿಯಬಹುದು;" ಎಂದು ರಘನಾಥರಾಯರಿಗೆ ಹೇಳಿ ಕಳುಹಿಸಿದನು. ರಘನಾಥರಾಯನು ಅದ ವರೆಗೇನೇ ಸ್ವಂತ ರಾಜ್ಯವಾಗಬೇಕೆಂದು ಕೋರುತ್ತಿದ್ದನಾದ್ದರಿಂದ, ಗಂಗಾಧರ ಪಂತನಪತ್ರಿಕೆಯನ್ನು ನೋಡಿದೊಡನೆಯೇ, ಸೈನ್ಯಸಮೇತನಾಗಿ ಮಾಳವದೇಶದ ಮೇಲೆ ದಂಡಯಾತ್ರೆಗೆ ಹೊರಟನು. ಈ ಸಂಗತಿಯೆಲ್ಲವನ್ನೂ ದುಃಖಮಗ್ನೆಯಾದ ಅಹಲ್ಯಾಬಾಯಿಗೆ ತಿಳಿದೊಡನೆ, ಆಕೆಯು ಧೈರ್ಯವನ್ನವಲಂಬಿಸಿ, ಭೋಸಲೆ, ಗಾಯಕವಾಡ, ಬಾಪಾಡೆ ಮೊದಲಾದ ರಾಜರಿಗೆಲ್ಲರಿಗೂ ಗುಪ್ತವಾಗಿ ಹೀಗೆ ಬರೆದು ಕಳುಹಿಸಿದಳು. "ಕೈಲಾಸವಾಸಿಯಾದ ಮಲ್ಹಾರರಾವ್ ಸುಬೇದಾರ್ರವರು ಶ್ರೀಮಂತರಿಗೋಸ್ಕರ ಅನೇಕ ಕಷ್ಟಗಳನ್ನು ಅನುಭವಿಸಿ, ಅವರ

ರಾಜ್ಯವನ್ನು ಸ್ಥಿರಪಡಿಸಿದರು. ಅಂತ ಸೇವಕರ ಮರಣಾನಂತರ ಅವರ ವಂಶಸ್ಥರಾದ ನಮ್ಮಗಳನ್ನು ರಕ್ಷಿಸಿ ನಮ್ಮಿಂದ ಸೇವೆ ಮಾಡಿಸಿಕೊಳ್ಳುವುದು ಧರ್ಮವು. ಹಾಗೆ ಮಾಡದೆ ನಮ್ಮಹತ್ತಿರವಿರುವ ಧನಕ್ಕೆ ಆಶೆಪಟ್ಟು, ನಮ್ಮರಾಜ್ಯವನ್ನು ತೆಗೆದುಕೊಳ್ಳುವುದಕ್ಕೆ ಬರುತ್ತಿದ್ದಾರೆ. ಆದ್ದರಿಂದ ನನಗೆ ಸಹಾಯವಾಗಿ ನೀವು ಸೈನ್ಯಗಳನ್ನು ಕಳುಹಿಸಬೇಕು." ಹೀಗೆ ಈಕೆಯು ಪತ್ರವನ್ನು ಬರೆದು ಕಳುಹಿದೊಡನೆಯೇ, ಸಂಸ್ಥಾನಾಧಿಪತಿಗಳೆಲ್ಲರೂ ತಮ್ಮ ಸೈನ್ಯಗಳನ್ನು ಸಹಾಯವಾಗಿ ಕಳುಹಿಸಿ, ತಾವುಗಳೂ ಸಹಾಯಕ್ಕೆ ಬರುತ್ತೇವೆಂದು ವಾಗ್ದಾನ ಪತ್ರವನ್ನು ಕಳುಹಿಸಿದರು.

೨೮. ಇಷ್ಟರಲ್ಲಿಯೇ ಅಹಲ್ಯಾಬಾಯಿಯು ಮಾಧವರಾವ್ ಪೇಷ್ವೆಹತ್ತಿರಕ್ಕೆ, ರಘೋಬನ ದುರುದ್ದೇಶವನ್ನು ತಿಳಿಸುವುದಕ್ಕಾಗಿ ಒಬ್ಬ ಸೇವಕನನ್ನು ಕಳುಹಿಸಿದಳು. ಇದರ ಮೇಲೆ ಅವರು "ನಿನ್ನ ರಾಜ್ಯವನ್ನು ಕುರಿತು ಯಾರಾದರೂ ಪಾಪಬುದ್ಧಿ ಎಣಿಸಿದ ಪಕ್ಷದಲ್ಲಿ ಅವರನ್ನು ತಪ್ಪದೆ ದಂಡಿಸುವೆವು," ಎಂದು ಪ್ರತ್ಯುತ್ತರವನ್ನು ಕಳುಹಿಸಿದರು. ತರುವಾಯ ಶತ್ರುಗಳ ಮನಸ್ಸಿಗೆ ಭಯವನ್ನು ಹುಟ್ಟಿಸುವದಕ್ಕಾಗಿ ಅಹಲ್ಯಾಬಾಯಿಯು ಒಂದು ದೊಡ್ಡ ರಾಜಸಭೆಯನ್ನು ಮಾಡಿ, ಅಲ್ಲಿ ತಾನು ಹೀಗೆ ಸಂಭಾಷಿಸಿದಳು. "ನಾನು ಅಬಲೆಯೆಂದು ತಿಳಿಯಕೂಡದು. ನಾನು ಭುಜದಮೇಲೆ ಶಸ್ತ್ರವನು ಇಟ್ಟುಕೊಂಡು ಯುದ್ಧಕ್ಕೆ ಹೊರಟ ಪಕ್ಷದಲ್ಲಿ, ಶ್ರೀಮಂತರಾಜ್ಯಲಕ್ಷ್ಮಿಗೆ ಮೋಸವು ಬಾರದೆ ಇರದು. ಈ ರಾಜ್ಯವನ್ನು ನಮ್ಮ ಪೂರ್ವಿಕರು ಅಖಂಡಶೌರ್ಯದೊಡನೆ ಸಂಪಾದಿಸಿದರೇ ಹೊ

ರತು, ಆಟಪಾಟಗಳಿಂದ ಸಂಪಾಗಿಸಲಿಲ್ಲ. ಆದ್ದರಿಂದ ಪ್ರಭು ಗಳಾದವರು ನಮ್ಮಗಳಿಂದ ಯೋಗ್ಯವಾದಸೇವೆ ಮಾಡಿಸಿ ಕೊಳ್ಳಬೇಕೇ ಹೊರತು, ಧನಾಶೆಯಿಂದ ನಮ್ಮ ರಾಜ್ಯವನ್ನು ದುರಾಶೆಪಟ್ಟ ಬ್ರಾಹ್ಮಣನಹಾಗೆ ಕಿತ್ತುಕೊಳ್ಳಬೇಕೆಂದು ಪ್ರ ಯತ್ನಪಟ್ಟರೆ ಆ ಕಾರ್ಯವು ಜರುಗಲಾರದೆಂದು ಖಂಡಿತ ವಾಗಿ ತಿಳಿಯತಕ್ಕದ್ದು." ಆಹಾ! ಏನು ಉಗ್ರವಾದ ಸ್ವಾಭಿ ಮಾನವುಳ್ಳ ಕ್ಷಾತ್ರತೇಜದ ಮಾತುಗಳು! ಮಹಾರಾಷ್ಟ್ರಭಾಷೆ ಯಲ್ಲಿ ಈ ಮಾತುಗಳು ವೀರರಸ ಪೂರಿತವಾಗಿ ತುಂಬಿ ತುಳು ಕುತ್ತಿವೆ ಅಂದರೆ ಹಾಗೆ ವೀರರಸದಿಂದ ಕನ್ನಡ ಭಾಷೆ ಯಲ್ಲಿ ಭಾಷಾಂತರೀಕರಿಸುವುದಕ್ಕೆ ಆಗುವುದಿಲ್ಲವೆಂದು ಚಿಂತೆ ಯುಂಟಾಗಿದೆ. ಈ ವಾಕ್ಯಗಳು ಸ್ವಲ್ಪದಿನದಲ್ಲಿಯೇನೆ ದೇಶ ವೆಲ್ಲವೂ ವ್ಯಾಪಿಸಿ, ರಘೋಬನ ಕಿವಿಗೆ ಮುಟ್ಟಿದುವು. ರ ಘೋಬಾಯವರು ಈ ಮಾತುಗಳನ್ನು ಲಕ್ಷ್ಯಮಾಡದೆ ಹೋ ದರು. ಹೀಗೆ ರಘೋಬನು ಎಂಭತ್ತು ಸಾವಿರ ಸೈನ್ಯದೊಡನೆ ತನ್ನ ರಾಜ್ಯವನ್ನು ಸಮೀಪಿಸಿದ್ದಾನೆಂದು ಕೇಳಿ, ಅಹಲ್ಯಾಬಾ ಯಿಯು ಅವನಿಗೆ ಹೀಗೆ ವರ್ತಮಾನವನ್ನು ಕಳುಹಿಸಿದಳು. "ಸ್ತ್ರೀಯ ಸಂಗಡ ಯುದ್ಧವನ್ನು ಮಾಡುವುದು ಧರ್ಮವಲ್ಲವು. ಅದರಿಂದ ನಿಮಗೆ ಅಪಕೀರ್ತಿಯೇ ಹೊರತು ಕೀರ್ತಿಬರುವು ದಿಲ್ಲ. ನಿಮ್ಮ ಸಂಗಡ ಯುದ್ಧ ಮಾಡುವುದಕ್ಕೋಸ್ಕರ ನಾನೂ ನನ್ನ ದೊಡ್ಡ ಸೈನ್ಯವನ್ನು ಸಿದ್ಧಪಡಿಸಿರುವೆನು, ಈ ಯುದ್ಧ ದಲ್ಲಿ ನೀವು ಸೋತುಹೋದಪಕ್ಷದಲ್ಲಿ ನೀವು ತಲೆ ಬಗ್ಗಿಸುವಂ ತಾಗುವುದು. ನೀವು ಗೆದ್ದರೂ ಹೆಂಗಸನ್ನು ಸೋಲಿಸಿದನೆಂಬ ಅಪಕೀರ್ತಿಯೇ ಹೊರತು ನಿಮಗೇನೂ ಲಾಭವಾಗಲಾರದು.

ಮತ್ತು ಕೀರ್ತಿಯುಂಟಾಗಲಾರದು" ಇಂಥ ವರ್ತಮಾನವನ್ನು ಕೇಳಿ ರಘೋಬನು ನಾಚಿಕೆಪಟ್ಟು, ಅಪಜಯವಾಗುವುದೋ ಏನೋ ಎಂದು ಯೋಚಿಸಿ, "ಅಹಲ್ಯಾಬಾಯಿಯವರನ್ನು ಪುತ್ರ ಮರಣದಿಂದ ಆದರಿಸುವುದಕ್ಕೆ ಬರುತ್ತೇನಯೇ ಹೊರತು ರಾಜ್ಯವನ್ನು ತೆಗೆದು ಕೊಳ್ಳಲು ಬರುವುದಿಲ್ಲವೆಂದು ವರ್ತಮಾನವನ್ನು ಹೇಳಿಕಳುಹಿಸಿದನು. ಸೈನ್ಯವೆಲ್ಲವನ್ನೂ ಹಿಂದೆಯೇ ನಿಲ್ಲಿಸಿ, ಕೆಲವುಜನಗಳೊಂದಿಗೆ ಇಂದೂರಿಗೆ ಬಂದು, ಅಹಲ್ಯಾಬಾಯಿ ಯನ್ನು ಆದರಿಸಿ, ಪೂನಾವಿಗೆ ಹೊರಟು ಹೋದನು. ಈ ಪ್ರಕಾರ ಅಹಲ್ಯಾಬಾಯಿ ಭರ್ತೃ, ಶ್ವಶುರ, ಪುತ್ರ ಮರಣ ಶೋಕಗಳಿಂದ ಬಹಳಚಿಂತೆಯ ಪಾಲಾಗಿದ್ದರೂ ಅದನ್ನು ಅಡಗಿಸಿ, ಅನೇಕ ಉಪಾಯಗಳನ್ನು ಆಲೋಚಿಸಿ, ರಘೋಬನಂತಹ ಅಸಮಾನ ಶೂರನನ್ನು ಸಹಿತ, ಯಾವ ಅಪಾಯವೂ ಮಾಡದೆ ಹೋಗುವಹಾಗೆ ಮಾಡಿದವಳಾದ್ದರಿಂದ, ಆಕೆಯು ಶೌರ್ಯ, ಧೈರ್ಯ, ಸಾಹಸಾದಿ ಗುಣಗಳುಳ್ಳವಳೆಂದು ಹೇಳಲು ಸಂದೇಹವಿಲ್ಲ.

೨೯. ಹೀಗೆ ರಾಜ್ಯದಲ್ಲಿ ಸಂಪೂರ್ಣಾಧಿಕಾರವು ಪ್ರಾಪ್ತವಾದ ತರುವಾಯ ೧೭೬೬ನೆಯ ಸಂವತ್ಸರದಿಂದ ೧೭೯೫ರ ವರೆಗೂ, (ಮೂವತ್ತುವರುಷಗಳು) ರಾಜ್ಯವನ್ನು ಆಳಿ, ಅಹಲ್ಯಾಬಾಯಿ ಆ ಚಂದ್ರಾರ್ಕವಾಗಿ ಶಾಶ್ವತವಾದ ಕೀರ್ತಿಯನ್ನು ಸಂಪಾದಿಸಿಕೊಂಡಳು. ಆಕೆಯು ತನಗೆ ದೂರಬಂಧುವಾದ ತುಕ್ಕೋಜಿರಾಯನೆಂಬುವನನ್ನು ತನ್ನ ಮಂತ್ರಿಯಾಗಿ ನೇಮಿಸಿಕೊಂಡಳು. ದಂಪೆತ್ತಿಹೋಗುವುದೂ, ಸೈನ್ಯಗಳನ್ನು ಕೂಡಿ

ಸುವುದೂ, ರಾಜ್ಯವನ್ನು ಚೋರಭಯದಿಂದ ಕಾಪಾಡುವುದೂ, ಮೊದಲಾದ,ಯುದ್ಧಸಂಬಂಧವಾದ ಕೆಲಸವೆಲ್ಲವನ್ನೂ ಇವನು ನೋಡುತಿದ್ದನು. ರಾಜ್ಯದ ಇತರ ಸಂಗತಿಗಳೆಲ್ಲವನ್ನೂ ಅಹಲ್ಯಾಬಾಯಿಯವರೇ ನೋಡಿಕೊಳ್ಳುತ್ತಿದ್ದರು. ತುಕ್ಕೋಜಿಯು ಅಹಲ್ಯಾಬಾಯಿಯವರನ್ನು ಸ್ವಂತ ತಾಯಿಯಹಾಗೆ ನೋಡುತ್ತಿದ್ದನು. ಅಹಲ್ಯಾಬಾಯಿಯವರು ಅವನಲ್ಲಿ ಅಧಿಕ ವಿಶ್ವಾಸವುಳ್ಳವರಾಗಿ ವರ್ತಿಸುತಿದ್ದರು. ಮೂವತ್ತು ವರುಷಗಳವರೆಗೂ, ಇಬ್ಬರೂ ರಾಜ್ಯಭಾರ ಮಾಡಿದರು. ಆದರೆ ಅವನು ಅಷ್ಟುಕಾಲದಲ್ಲಿ ಒಂದು ದಿನವಾದರೂ, ಅಹಲ್ಯಾಬಾಯಿಯವರ ಆಜ್ಞೆಯನ್ನು ಉಲ್ಲಂಘಿಸಿದವನಲ್ಲ. ಅಹಲ್ಯಾಬಾಯಿಯೂ ಅವನನ್ನು ಒಂದು ಮಾತನ್ನಾದರೂ ಆಡಿದವಳಲ್ಲ.

೩೦. ಅಹಲ್ಯಾಬಾಯಿಯ ದಿನಚರ್ಯೆಗಳು:—ಇವಳು ಅತ್ಯಂತನಿಷ್ಠೆಯಿಂದ ಕಾರ್ಯಗಳನ್ನು ಮಾಡುತಿದ್ದಳು. ಸೋಮಾರಿತನವೆನ್ನುವ ಮಾತು ಅವಳ ಸ್ವಪ್ನದಲ್ಲಾದರೂ ಇಲ್ಲದೆ ಇತ್ತು. ಅವಳು ಪ್ರತಿಕಾರ್ಯವನ್ನೂ ಗೊತ್ತುಮಾಡಿಕೊಂಡಿರುವ ಕಾಲಕ್ಕೆ ತಪ್ಪದೆ ಮಾಡುತ್ತಿದ್ದಳು. ಅನಂತರ ಅವಳು ಯೋಚನೆಮಾಡಿದ ಕೆಲಸವನ್ನು ತಪ್ಪದೆ ಮಾಡುತ್ತಿದ್ದಳು. ಇವಳು ಪ್ರತಿನಿತ್ಯವೂ ಸೂರ್ಯೋದಯಕ್ಕೆ ಮುಂಚೆಯೇ ಎದ್ದು ನಿತ್ಯಕರ್ಮಗಳನ್ನು ನಿರ್ವರ್ತಿಸಿಕೊಂಡು, ಸ್ನಾನವನ್ನು ಮಾಡಿ, ಸ್ವಂತವಾಗಿ ದೇವತಾರ್ಚನೆಯನ್ನು ಮಾಡುವಳು. ಆಮೇಲೆ ಪುರಾಣಶ್ರವಣವನ್ನು ಮಾಡಿ, ಬ್ರಾಹ್ಮಣರಿಗೂ, ಭಿಕ್ಷುಕರಿಗೂ ದಾನಧರ್ಮಗಳನ್ನು ಮಾಡುತ್ತಿದ್ದಳು. ತರುವಾಯ ಊಟವನ್ನು ಮಾಡುವಳು. ಇವರ ಜಾತಿಯಲ್ಲಿ

ಮಾಂಸಾಹಾರವನ್ನು ಮಾಡಲು ಏನೂ ಅಭ್ಯಂತರವಿಲ್ಲದಿದ್ದರೂ, ಇವಳು ಮಾತ್ರ ಯಾವಾಗಲೂ ಮಾಂಸವನ್ನು ತಿಂದವಳಲ್ಲ. ಭೋಜನವಾದನಂತರ ಅಹಲ್ಯಾಬಾಯಿಯು ಎರಡು ಗಂಟೆಗೆ ರಾಜಸಭೆಗೆ ಹೋಗುತ್ತಿದ್ದಳು. ಅಲ್ಲಿಗೆ ಹೋಗಿ, ವಸೂಲು ಸಂಬಂಧದ ಲೆಕ್ಕಗಳನ್ನು ಸ್ವಂತವಾಗಿ ನೋಡಿ, ಪ್ರಜೆಗಳ ಕೆಲಸಗಳನ್ನು ವಿಚಾರಿಸಿ, ಪುನಃ ಸೂರ್ಯಾಸ್ತಮಯಕ್ಕೆ ಸರಿಯಾಗಿ ಅರಮನೆಗೆ ಬರುವಳು. ಸಾಯಂಕಾಲದಲ್ಲಿ ಪುನಃ ದೇವತಾಪೂಜೆಯನ್ನು ಮಾಡಿ, ರಾಜ್ಯಸಂಬಂಧವಾದ ಕಾರ್ಯಗಳನ್ನು ಸರಿಮಾಡಿ, ರಾತ್ರಿ ಸಾಧಾರಣವಾಗಿ ಹನ್ನೊಂದು ಗಂಟೆಗೆ ಮಲಗುತ್ತಿದ್ದಳು. ಅಬಾಧಕವಾಗಿ ಇಂಥ ಕ್ರಮಗಳನ್ನು ಅವಳ ಮರಣಾಂತದವರೆಗೂ ನಡಿಸುತ್ತಿದ್ದಳು. ಹಬ್ಬಗಳು, ಉಪವಾಸ ವ್ರತಗಳು ಮೊದಲಾದ ದಿವಸಗಳು ಬಂದಾಗ ಮಾತ್ರ ಅಹಲ್ಯಾಬಾಯಿಯು ಆ ದಿವಸವನ್ನೆಲ್ಲಾ ವ್ರತದಲ್ಲಿಯೇ ಕಳೆಯುತ್ತಿದ್ದಳು. ಸಕಲವಾದ ನೇಮಗಳನ್ನೂ ಕೇವಲ ಬ್ರಾಹ್ಮಣಸ್ತ್ರೀಯರಹಾಗೆ ನಡಿಸುತಿದ್ದಳು. ಅವಳು ರಂಗುಬಟ್ಟೆಗಳನ್ನು ಯಾವಾಗಲೂ ಉಟ್ಟವಳಲ್ಲ. ಯಾವಾಗಲೂ ಸ್ವಚ್ಛವಾದ ಬಿಳೀ ವಸ್ತ್ರವನ್ನೇ ಧರಿಸುತ್ತಿದ್ದಳು ಪತಿಯ ಮರಣಾನಂತರ ಅವಳು ಆಭರಣಗಳನ್ನು ಯಾವಾಗಲೂ ಧರಿಸಿದವಳಲ್ಲ. ಹಿಂದೂ ಶಾಸ್ತ್ರದಲ್ಲಿರುವ ವೈಧವ್ಯ ಧರ್ಮಗಳೆಲ್ಲವನ್ನೂ ತಪ್ಪದೆ ಪಾಲಿಸುತಿದ್ದಳು. ಇಂತಹ ನೇಮಗಳೆಲ್ಲವನ್ನೂ ಸಾಧಾರಣವಾಗಿ ನಾಲ್ವತ್ತು ವರುಷಗಳು ತಪ್ಪದೆ ನಡೆಸಿದಳು.

೩೧ ಅಹಲ್ಯಾಬಾಯಿಯ ದಾನಧರ್ಮಗಳು :—ಅಹ

ಲ್ಯಾಬಾಯಿಯ ಕೀರ್ತಿಯು ಈ ದೇಶವೆಲ್ಲವ್ಯೂ ವ್ಯಾಪಿಸುವುದಕ್ಕೆ ಮುಖ್ಯಕಾರಣವು ಅವಳ ಬುದ್ಧಿಯೇ, ಆಕೆಯ ಹೆಸರನ್ನು ಕೇಳಿದೊಡನೆಯೇ ಅನಿತಾನಂದ ಭರಿತರಾಗಿ ಮಹಾರಾಷ್ಟ್ರದ ವರೆಲ್ಲರೂ ಈಗ್ಯೂ ಆಕೆಗೆ ಅನೇಕ ಆಶೀರ್ವಚನಗಳನ್ನು ಕೊಡುತಿದ್ದಾರೆ. ಈಕೆಯು ಸಾಧಾರಣವಾದ ಮನುಷ್ಯರ ಗುಂಪಿಗೆ ಸೇರಿದವಳಾದರೂ ಈಕೆಯನ್ನು ದೇವಿ ಅಹಲ್ಯೆ ಎಂಬ ಹೆಸರಿನಿಂದ ಕರೆಯುವರು. ಇದಕ್ಕೆ ಕಾರಣವು ಆಕೆಯ ಧರ್ಮಬುದ್ಧಿಯೇ! ಈಕೆಯನ್ನು ಸ್ತುತಿಸುವುದು ಪಾವನವೆಂದೂ, ಈಕೆಯನ್ನು ನೆನೆಯುವುದರಿಂದ ಪಾಪಗಳೆಲ್ಲವೂ ನಾಶವಾಗುವುದೆಂದೂ, ಅನೇಕ ಮಹಾರಾಷ್ಟ್ರರು ತಿಳಿದಿರುವರು. ಇದಕ್ಕೆ ಈಕೆಯ ಧರ್ಮ ಬುದ್ಧಿಯೇ ಕಾರಣವು. ಈಕೆಯ ಗುರ್ತು ಯಾವುದಾದರೂ ಇಲ್ಲದ ಪುಣ್ಯಕ್ಷೇತ್ರವು ಈ ಭರತಖಂಡದಲ್ಲಿ ಇಲ್ಲವೆಂತಲೇ ಹೇಳಬಹುದು. ಭರತಖಂಡವು ಕ್ಷೇತ್ರಗಳಿಗೂ ತೀರ್ಥಗಳಿಗೂ ತೌರುಮನೆಯಾಗಿದೆ. ಮೂವತ್ತುಮೂರುಕೋಟಿ ದೇವತೆಗಳನ್ನು ಪೂಜಿಸುವುದಕ್ಕೆ ಹಿಂದೂ ದೇಶದಲ್ಲಿ ಅಸಂಖ್ಯಕ್ಷೇತ್ರಗಳಿರುವುದೇ ಕಾರಣವೆಂಬುದು ಒಂದು ವಿಚಿತ್ರವಾದದ್ದಲ್ಲ. ಈ ಕ್ಷೇತ್ರಗಳಲ್ಲಿ ಅಹಲ್ಯಾಬಾಯಿ ಶಾಶ್ವತವಾದ ದಾನಗಳನ್ನು ಮಾಡಿರುವಳು. ಆದ್ದರಿಂದ ಆಕೆಯ ಕೀರ್ತಿ ವಿಸ್ತರಿಸಿದೆ. ಹೊಸ ದೇವಾಲಯಗಳನ್ನು ಕಟ್ಟಿಸುವುದೂ ಜೀರ್ಣದೇವಾಲಯಗಳನ್ನು ಉದ್ಧರಿಸುವುದೂ, ಅನ್ನ ಸತ್ರಗಳನ್ನು ಇಡಿಸುವುದೂ, ದೇವತೆಗಳಿಗೆ ಶಾಶ್ವತ ಗಂಗಾಭಿಷೇಕವು ಜರುಗುವಹಾಗೆ ಏರ್ಪಾಡು ಮಾಡುವುದೂ, ಮೊದಲಾದ ಆಕೆಯು ನಂಬಿದ ಧರ್ಮ ಕೃತ್ಯಗ

ಳನೇಕಗಳನ್ನು ಮಾಡಿರುವಳು. ಈ ಕ್ಷೇತ್ರಗಳಲ್ಲಿ ಈಕೆಯ ಹೆಸರಿನಲ್ಲಿ ಅನೇಕ ಧರ್ಮಕೃತ್ಯಗಳು ಜರುಗುತ್ತಿರುವುವು. ಕೇವಲ ಕ್ಷೇತ್ರಬ್ರಾಹ್ಮಣರಿಗೆ ಮಾತ್ರ ಆಕೆ ದಾನಗಳನ್ನು ಮಾಡುತ್ತಿರಲಿಲ್ಲ. ಆತ್ಮ ಎಂಬ ಶಬ್ದವನ್ನುಬಿಟ್ಟು, ವಿಶ್ವಎಂಬ ಶಬ್ದವನ್ನು ಧರಿಸಿ, ಸ್ವಕುಟುಂಬವನ್ನೂ, ವಿಶ್ವವನ್ನೇ ಕುಟುಂಬವಾಗಿ ತಿಳಿದು, ಸ್ವಬಾಲಕರಲ್ಲಿ ಅನುರಾಗವನ್ನು ತಗ್ಗಿಸಿ, ಪ್ರಪಂಚದ ಸಮಸ್ತ ಪ್ರಾಣಿಕೋಟಿಗಳನ್ನು ತನ್ನ ಬಾಲಕರಹಾಗೆ ಗ್ರಹಿಸಿ, ಆತ್ಮವಿಷಯದುಃಖಕ್ಕೆ ವ್ಯಸನ ಪಡದೆ, ವಿಶ್ವವಿಷಯ ದುಃಖಗಳಿಗೆ ಅಶ್ರುಬಿಂದುಗಳನ್ನು ಸುರಿಸುತ್ತ, ಜಗತ್ತಿನಲ್ಲಿ ತನಗೆ ಉಂಟಾಗಿರುವ ಮಾನಾವಮಾನಗಳನ್ನು ಲಕ್ಷ್ಯಮಾಡದೆ ಈ ಜಗತ್ತಿನ ಹಿತಾರ್ಥವಾಗಿ ಜನ್ಮವನ್ನು ಸಾರ್ಥಕಪಡಿಸುವ ವಿಶ್ವ ಕುಟುಂಬಿಗಳಾದ ಮಹನೀಯರ ಗುಂಪಿನಲ್ಲಿ ಈ ಅಹಲ್ಯಾಬಾಯಿಯು ಒಬ್ಬಳಾದ್ದರಿಂದ, ಆಕೆಯು ಶೂದ್ರರಿಗೂ, ಚಂಡಾಲರಿಗೂ, ಪಶುಪಕ್ಷಿಗಳಿಗೂ ಸದಾಹಿತವನ್ನೇ ಮಾಡುತ್ತಿದ್ದಳು. ಮರಣಹೊಂದಿದ ಪುತ್ರಾದಿಗಳಿಗಾಗಿ ದುಃಖವುಂಟಾದಾಗ ಆಕೆ ತನಗೆ ತಾನೇ ಹೀಗೆ ಉಪದೇಶ ಮಾಡಿಕೊಳ್ಳುವಳು. ‘‘ಸತ್ತು ಹೋದ ಮಗನು ಒಬ್ಬನೇ ಅಲ್ಲದೆ ನಿನ್ನ ದುಃಖಕ್ಕೂ ನಿನ್ನ ಉದ್ಯೋಗಕ್ಕೂ, ಪ್ರೇಮಕ್ಕೂ, ಚಿಂತೆಗೂ ಪಾತ್ರರಾದ ಸುತಸಂಘವು ಈ ಜಗತ್ತಿನಲ್ಲಿ ಅನೇಕವಾಗಿರುವುದು. ಈ ಜಗತ್ತಿನಲ್ಲಿ ಎಲ್ಲರಿಗೂ ದುಃಖ ನಿವಾರಣೆಮಾಡಿ, ಎಲ್ಲರಿಗೂ ಸುಖವನ್ನುಂಟುಮಾಡುವುದು. ಲಾಲಿಸುವುದು. ಎಲ್ಲರನ್ನೂ ಪಾಲಿಸಿದರೆ ಎಲ್ಲರೂ ನಿನ್ನ ಮಕ್ಕಳೇ ಆದ್ದರಿಂದ ವ್ಯಕ್ತಿವಿಷಯವಾದ ಶೋಕವನ್ನು ಬಿಡು. ಹೀಗೆ ಮಾಡಿದರೆ ದುಃಖಪಟ್ಟವರ ದುಃಖ

ವನ್ನು ಹಂಚಿಕೊಳ್ಳುವುದಕ್ಕೂ, ಸುಖಿಗಳ ಸುಖವನ್ನು ವೃದ್ಧಿ ಪಡಿಸಿಕೊಳ್ಳುವುದಕ್ಕೂ ಅನಂತ ಸ್ಥಳವು ಯಾವಾಗಲೂ ದೊರಕುವುದು." ಹೀಗೆಯೇ ಯೋಚಿಸಿ, ಅಹಲ್ಯಾಬಾಯಿಯು ಪ್ರಪಂಚದ ದುಃಖವನ್ನು ನಿವಾರಣೆಮಾಡುವುದರಲ್ಲಿ ತನ್ನ ದುಃಖವನ್ನು ಮರೆಯುತ್ತಿದ್ದಳು.

೩೨. ಅನೇಕಅನ್ನಸತ್ರಗಳನ್ನು ಸ್ಥಾಪಿಸಿ, ಪ್ರತಿದಿವಸವೂ ಸಕಲ ಜಾತಿಯವರಿಗೂ ಬಹಳವಾಗಿ ಅನ್ನದಾನವನ್ನು ಮಾಡುತ್ತಿದ್ದಳು. ಶೂದ್ರರು ಪಕ್ಷಿಗಳನ್ನು ಹೊಲಕ್ಕೆ ಬಾರದ ಹಾಗೆ ಕಲ್ಲುಗಳನ್ನು ಎಸೆಯುವುದನ್ನು ನೋಡಿ, ಕರುಣಿಸಿ, ತನ್ನ ಹಣದಿಂದ ಬೆಳೆದ ಹೊಲಗಳನ್ನು ಕೊಂಡು, ಪಕ್ಷಿಗಳಿಗೋಸ್ಕರ ಬಿಡುತ್ತಿದ್ದಳು. ಶೂದ್ರರು ತಮ್ಮ ಎತ್ತುಗಳನ್ನು ಬಾಧೆಪಡಿಸುವುದನ್ನು ನೋಡಿ, ಬಹಳ ವ್ಯಸನಪಟ್ಟು, ಅಹಲ್ಯಾಬಾಯಿಯಿಂದ ನಿಯಮಿತರಾದ ಸೇವಕರು ಶೂದ್ರರು ಉಳುವಾಗ ನೇಗಿಲಿನಿಂದ ಎತ್ತುಗಳನ್ನು ಬಿಡಿಸಿ, ಅವುಗಳಿಗೆ ಮೇವುಹಾಕಿ ನೀರನ್ನು ಕೊಡುತ್ತಿದ್ದರು. ಮಲ್ಹಾರಿರಾಯನು ಸತ್ತುಹೋದಾಗ ನಾಲ್ಕು ಕೋಟಿ ರೂಪಾಯಿಗಳು ಭಂಡಾರದಲ್ಲಿದ್ದುವು. ಇದಲ್ಲದೆ ಅಹಲ್ಯಾಬಾಯಿಯ ಸ್ವಂತ ಖರ್ಚಿಗಾಗಿ ನಾಲ್ಕು ಲಕ್ಷರೂಪಾಯಿ ಬಾಳುವ ಅಗ್ರಹಾರವು ಬೇರೆ ಇತ್ತು. ಈ ಧನವನ್ನೆಲ್ಲಾ ತಿಳಿವಳಿಯಿಂದ ಅಹಲ್ಯಾಬಾಯಿ ಇಂಥ ಧರ್ಮಕಾರ್ಯಗಳಿಗಾಗಿ ಖರ್ಚು ಮಾಡುತ್ತಿದ್ದಳು.

೩೩. ಆಕೆಯ ಉಗ್ರಶಾಸನವು:— ಅಹಲ್ಯಾಬಾಯಿಯು ಮಹಾ ಧಾರ್ಮಿಕಳಾಗಿದ್ದರೂ, ಸರ್ವಭೂತಗಳಲ್ಲಿ ದಯೆಯುಳ್ಳವ

ಳಾಗಿಯೂ ಇದ್ದರೂ, ಆಕೆಯು ಉಗ್ರಶಾಸನಳಾಗಿ ಇದ್ದಳು ಆಕೆಯ ನ್ಯಾಯಬುದ್ಧಿಯೂ ಸತ್ಯಪರಾಯಣತೆಯೂ, ಬಹು ಉಗ್ರವಾಗಿರುವುವು. ತನ್ನ ಸೇವಕರೊಳಗೆ ಯಾರಾದರೂ ತಪ್ಪುಮಾಡಿದ್ದರೆ ಅದರ ದಯೆ ತೋರಿಸದೆ ಅವರಿಗೆ ಘೋರ ಶಿಕ್ಷೆಯನ್ನು ವಿಧಿಸುತ್ತಿದ್ದಳು. ಆಕೆಯ ರಾಜ್ಯದಲ್ಲಿ ಸರ್ವದಾ ತೀರದಬಳ, ಗೊಂಡರೆಂಬ ಜನರು ಪ್ರಜೆಗಳಿಗೆ ಅಪಾಯ ಮಾಡುತ್ತಿದ್ದರು. ಅವರಿಗೆ ಆಕೆಯು ಚೆನ್ನಾಗಿ ಬುದ್ಧಿಹೇಳು ತ್ತಿದ್ದಳು. ಆದರೆ ಅವರು ಕೇಳದೆ ಇದ್ದದ್ದರಿಂದ, ಅವರಲ್ಲಿ ಅನೇಕರಿಗೆ ಪ್ರಾಣಾಂತ ಶಿಕ್ಷೆಯನ್ನು ವಿಧಿಸಿದಳು. ಅವರಿಗೆ ಬಂಜರು ಭೂಮಿಯನ್ನು ಕೊಟ್ಟು, ವ್ಯವಸಾಯಮಾಡಿಕೊಂಡು ಬದುಕಿರೆಂದು ಹೇಳುತ್ತಿದ್ದಳು. ಯಾವಾಗಲೂ ಬಂದಿ ಕೋಟೆಯಲ್ಲಿ ಕೂಡುವುದಿಲ್ಲವೆಂದು ಅವರಿಂದ ಭಾಷೆಮಾಡಿಸಿ ಕೊಳ್ಳುತ್ತಿದ್ದಳು. ಆದ್ದರಿಂದ ಆಕೆಯ ರಾಜ್ಯದಲ್ಲಿ ಜನರು ಅನ್ಯಾಯಮಾಡುವುದಕ್ಕೆ ಭಯಪಡುತ್ತಿದ್ದರು.

೩೪. ಒಂದಾನೊಂದು ಸಮಯದಲ್ಲಿ, ತುಕ್ಕೋಜಿಸೈನ್ಯ ಸಮೇತನಾಗಿರುವಾಗ ಒಂದು ತಪ್ಪು ಮಾಡಿದನಂತೆ! ಈ ಮಾತು ಕೇಳಿದಕೂಡಲೇ ಅಹಲ್ಯಾಬಾಯಿ ವಿಚಾರಿಸಿ, ಆಗ ಅದರ ನಿಜವನ್ನು ತಿಳಿದುಕೊಂಡು, “ರಾಜಧಾನಿಯಲ್ಲಿ ಸೈನ್ಯ ಸಹಿತ ನೀವು ಇದ್ದ ಪಕ್ಷದಲ್ಲಿ ಪ್ರಜೆಗಳಿಗೆ ಬಹಳ ಬಾಧೆಯುಂಟಾಗುವುದು. ಆದ್ದರಿಂದ ಇಂದೂರುಬಿಟ್ಟು ನೀವು ಸೈನ್ಯವನ್ನು ಬೇರೊಂದು ಸ್ಥಳಕ್ಕೆ ತೆಗೆದುಕೊಂಡು ಹೋಗುವುದು.” ಎಂದು ತುಕ್ಕೋಜಿಗೆ ಆಜ್ಞಾಪಿಸಿದಳು. ಈ ಆಜ್ಞೆಯನ್ನು ಶಿರಸಾವಹಿಸಿ ತನ್ನ ತಪ್ಪಿಗೆ ಕ್ಷಮಾಪಣೆಯನ್ನು ಕೇಳಿಕೊಂಡನು.

ಈ ತುಕ್ಕೋಜಿರಾವು ಮಾಡಿದ ಅಪರಾಧವೇನಂದರೆ—ಇಂದೂರು ಪಟ್ಟಣದಲ್ಲಿ ದೇವೀಚಂದ್ ಎಂಬ ಒಬ್ಬ ಸಾಹುಕಾರನು, ಅಪುತ್ರವಂತನಾಗಿ ಮೃತಿ ಹೊಂದಿದನು. ಅವನ ಧನಕ್ಕೆ ಯಾರೂ ವಾರಸುದಾರರು ಇಲ್ಲದ್ದರಿಂದ, ಅವನ ಧನವೆಲ್ಲವನ್ನೂ ತುಕ್ಕೋಜಿಯು ಸರ್ಕಾರದ ಬೊಕ್ಕಸಕ್ಕೆ ಸೇರಿಸಿದನು. ಈಸಂಗತಿ ಅಹಲ್ಯಾಬಾಯಿಗೆ ತಿಳಿದೊಡನೆಯೇ, ಅವಳು ದೇವೀಚಂದ್ ಭಾರ್ಯೆಯನ್ನು ಕರೆಸಿ, ಅವನ ಸ್ವತ್ತೆಲ್ಲವನ್ನೂ ಅವಳಿಗೆ ಕೊಡಿಸಿ, ಒಬ್ಬ ಹುಡುಗನನ್ನು ಸಾಕು ತೆಗೆದುಕೊಂಡು ಸ್ವತ್ತನ್ನು ಅನುಭವಿಸೆಂದು ಅವಳಿಗೆ ಹೇಳಿದಳು. ಆಹಾ ! ಏನು ಇವಳ ಔದಾರ್ಯವು ! ನ್ಯಾಯ ಬುದ್ಧಿಯು!

೩೫. ಇವಳ ರಾಜ್ಯದಲ್ಲಿದ್ದ ಮಾಂಡಲಿಕರಾಜರುಗಳನೇಕರು ಅವಳಿಗೆ ಕಪ್ಪವನ್ನು ಕೊಡುತ್ತಿದ್ದರು. ಇವಳು ಸ್ತ್ರೀಯಾದರೂ, ವಿಧವೆಯಾದರೂ, ಇವಳನ್ನು ಧಿಕ್ಕರಿಸುವಂಥ ಧೈರ್ಯವು ಯಾರಿಗೂ ಇರಲಿಲ್ಲ. ಇವಳ ಉಗ್ರಶಾಸನವನ್ನು ನೋಡಿ, ಇವಳಿಗೆ ತ್ವರೆಯಾಗಿ ಕಪ್ಪವನ್ನು ಕೊಡದೆ ಇದ್ದ ಪಕ್ಷದಲ್ಲಿ ಇವಳು ಏನು ಮಾಡುವಳೋ ಎಂಬ ವಿಚಾರವು ಎಲ್ಲರಿಗೂ ಉಂಟಾಗಿತ್ತು. ಒಂದುಸಾರಿ ಉದಯಪುರದ ರಾಜನು ಇವಳನ್ನು ತಿರಸ್ಕರಿಸಿ, ರಾಮಪುರ ಎಂಬ ಗ್ರಾಮವನ್ನು ತೆಗೆದುಕೊಳ್ಳಲು ಸಿದ್ಧನಾದನು. ಈ ಸಮಯದಲ್ಲಿ ತುಕ್ಕೋಜಿರಾವು ದಕ್ಷಿಣದಲ್ಲಿ ಯುದ್ಧಮಾಡುತ್ತಿದ್ದನು. ಆದರೆ ಅಹಲ್ಯಾಬಾಯಿಯ ಹತ್ತಿರ ಹೆಚ್ಚು ಸೈನ್ಯವಿರಲಿಲ್ಲ. ಆದರೂ ಭಯಪಡದೆ ಅಹಲ್ಯಾಬಾಯಿ ಕೊಂಚ ಸೈನ್ಯವನ್ನು ಕಳುಹಿಸಿ, ಷರೀಫ್‌ಬಾಯಿ ಎಂಬುವನನ್ನು ಉದಯಪುರದ ರಾಜನ

ಸಮೀಪಕ್ಕೆ ಕಳುಹಿಸಿದಳು. ಆ ರಾಜನು ಪರಾಭವವನ್ನು ಹೊಂದಿ ಅಹಲ್ಯಾಬಾಯಿಗೆ ಶರಣಾಗತನಾದನು. ಆಗ ಅವಳು ಆತನನ್ನು ಕ್ಷಮಿಸಿದಳು.

೩೬. ಮೂವತ್ತು ವರುಷಗಳವರೆಗೂ ಇವಳು ರಾಜ್ಯವನ್ನು ಆಳಿದಳು. ತನ್ನ ರಾಜ್ಯದಲ್ಲಿಯೂ, ಪರರಾಜ್ಯದಲ್ಲಿಯೂ ಇವಳಿಗೆ ಬಹುಮಾನ್ಯತೆಗಳಿದ್ದವು. ಇವಳ ರಾಜ್ಯದಲ್ಲಿ ಅಧಿಕಾರಿಗಳೆಲ್ಲರೂ ಇವಳಿಗೆ ಬಹಳ ಭಯಪಡುತ್ತಿದ್ದರು. ಭೀಮದಾಸನೆಂಬ ಒಬ್ಬ ಸಾಹುಕಾರನು ಇವಳ ರಾಜ್ಯದಲ್ಲಿ ಅಪುತ್ರವಂತನಾಗಿ ಮೃತಿಹೊಂದಿದನು. "ಕಮಾವೀಸದಾರ" ಎಂಬ ಅಧಿಕಾರಿಯು ಈ ಸಾಹುಕಾರನ ಪತ್ನಿಯನ್ನು ಲಂಚ ಕೇಳಿದನು. ಅವಳು ಲಂಚಕೊಡದಿದ್ದದರಿಂದ ಆ ಅಧಿಕಾರಿ ಈ ಧನವೆಲ್ಲವನ್ನೂ ಜಫ್ತಿ ಮಾಡುವೆನೆಂದು ಇವಳನ್ನು ಭಯಪಡಿಸಿದನು. ಈ ಸಂಗತಿ ತಿಳಿದಕೂಡಲೇ ಅಹಲ್ಯಾಬಾಯಿಯು ಆ ಅಧಿಕಾರಿಯನ್ನು ಅಧಿಕಾರದಿಂದ ತೊಲಗಿಸಿ, ಭೀಮದಾಸನ ಹೆಂಡತಿಗೆ ದತ್ತುಪುತ್ರನನ್ನು ತೆಗೆದುಕೊಳ್ಳಬಹುದೆಂದು ಆಜ್ಞೆ ಮಾಡಿದಳು. ಅತ್ಯುಗ್ರಶಾಸನ, ಭೂತದಯೆ, ನ್ಯಾಯಬುದ್ಧಿ ಮೊದಲಾದ ಪರಸ್ಪರ ವಿರುದ್ಧಾಭಾಸವೆಂಬ ಸದ್ಗುಣಗಳನ್ನು ಧರಿಸುವುದು ರಾಜರುಗಳಿಗೆ ಅತ್ಯಾವಶ್ಯಕವೆಂದು ಬೇರೆ ಹೇಳಬೇಕೆ?

೩೭. ಆಕೆಯ ಸ್ವಭಾವವು:—ಇದುವರೆಗೂ ಬರೆದ ವರ್ಣನೆಗಳಿಂದ ಇವಳ ಸ್ವಭಾವವು ಇಂಥಾದ್ದೆದು ಸಹಜವಾಗಿಯೇ ತೋರ್ಪಡುವುದು. ಆದರೂ ಒಂದೆರಡುಗುಣಗಳನ್ನು

ವರ್ಣಿಸಲು ಇದುವರೆಗೂ ಅವಕಾಶವಿಲ್ಲದ್ದರಿಂದ ಈಗ ವರ್ಣಿಸುವೆವು. ಸ್ತ್ರೀಯರು ಸಾಧಾರಣವಾಗಿ ಸ್ತೋತ್ರಪ್ರಿಯರು. ಈದುರ್ಗುಣಗಳು ಸ್ತ್ರೀಯರಲ್ಲಿಯೇ ಅಲ್ಲ; ಸಾಮಾನ್ಯವಾಗಿ ಸರ್ವಜನಗಳೂ ಸ್ತೋತ್ರಪ್ರಿಯರೇ. ಅಹಲ್ಯಾಬಾಯಿಯಲ್ಲಿ ಈ ದೋಷವು ಲೇಶಮಾತ್ರವೂ ಇಲ್ಲದೆ ಇತ್ತು. ಇದಕ್ಕೆ ಕೆಲವು ಉದಾಹರಣೆಗಳು ಇರುವುವು. ಒಂದಾನೊಂದು ಸಮಯದಲ್ಲಿ ಒಬ್ಬ ಕವಿಯು ಆಕೆಯಮೇಲೆ ಒಂದು ಕಾವ್ಯವನ್ನು ಬರೆದು, ಬಹುಮಾನವನ್ನು ಪಡೆಯುವುದಕ್ಕಾಗಿ ಆ ಕಾವ್ಯವನ್ನು ತೆಗೆದು ಕೊಂಡು ಅಹಲ್ಯಾಬಾಯಿಯ ಸಮೀಪಕ್ಕೆ ಹೋದನು. ಆಗ ಆಕೆಯು ಆ ಕಾವ್ಯವನ್ನು ನದಿಯಲ್ಲಿ ಬಿಸಾಟು, ಆ ಕವಿಯೊಡನೆ, "ಎಲೆ ಕವಿವರನೇ! ಅಲ್ಪಜ್ಞಳಾದ ನನ್ನನ್ನು ಸ್ತುತಿಸಿದ್ದರಿಂದ ಲಾಭವೇನು? ಸರ್ವಜ್ಞನಾದ ಈಶ್ವರನನ್ನು ಸ್ತುತಿಸಬಾರದೇ? " ಹೀಗೆಂದು ಹೇಳಿ ಅವನನ್ನು ಕಳುಹಿಸಿಬಿಟ್ಟಳು.

೩೮. ಈಕೆಗೆ ಪರಧನದಲ್ಲಿ ಆಶೆ ಇರಲಿಲ್ಲವೆಂದು ಹೇಳುವುದಕ್ಕೆ ಎರಡು ಉದಾಹರಣೆಗಳು ಇದುವರೆಗೆ ಕೊಡಲ್ಪಟ್ಟಿವೆ. ಇನ್ನೊಂದು ಉದಾಹರಣೆಯನ್ನು ಕೇಳಿರಿ. ತಾಪೀದಾಸು, ಬನಾರಸು ದಾಸು, ಎಂಬಿಬ್ಬರು ಅಣ್ಣತಮ್ಮಂದಿರು ಪುತ್ರಹೀನರಾಗಿ ಗತಿಸಿದರು. ಅವರಿಗೆ ನಾಲ್ಕು ಲಕ್ಷ ರೂಪಾಯಿನ ಸ್ವತ್ತು ಇತ್ತು. ತಾಪೀದಾಸನ ಹೆಂಡತಿಯಾದ ಮಹೇಶ್ವರಿ ಎಂಬುವಳು ಅಹಲ್ಯಾಬಾಯಿಯ ಹತ್ತಿರಕ್ಕೆ ಬಂದು, "ಅಮ್ಮಾ! ತಮ್ಮ ರಾಜ್ಯದಲ್ಲಿ, ಇದ್ದು ತಮ್ಮ ಅನುಗ್ರಹದಿಂದ ನನ್ನ ಗಂಡನೂ, ಮೈದನನೂ ಸಂಪಾದಿಸಿದಂಥಾ ಐಶ್ವರ್ಯವು ತಮ್ಮದೇ ಆದ್ದರಿಂದ ಇದನ್ನು ಸ್ವೀಕರಿಸಬೇಕು;" ಎಂದು ಹೇಳಿದ

ಳು. ಆಗ ಅಹಲ್ಯಾಬಾಯಿಯು ಮಹೇಶ್ವರಿಯನ್ನು ನೋಡಿ ಹೀಗೆಂದಳು; "ನಿನ್ನ ಗಂಡನ ಮತ್ತು ಮೈದುನನ ಧನವು ನಿನ್ನದೇ ಹೊರತು ನನ್ನದಲ್ಲ. ನಿನಗೆ ಅಪೇಕ್ಷೆ ಇಲ್ಲದ ಪಕ್ಷಕ್ಕೆ, ನಿನ್ನ ಗಂಡನ ಹೆಸರಿರುವಹಾಗೆ ಏನಾದರೂ ಧರ್ಮಕಾರ್ಯವನ್ನು ಈ ಧನದಿಂದ ಮಾಡಬಹುದು." ಆ ಮಾತನ್ನು ಕೇಳಿ ಮಹೇಶ್ವರಿಯು ಗಂಡನ ಹೆಸರಿನಲ್ಲಿ ದೊಡ್ಡ ದೇವಾಲಯವನ್ನು ನದೀತೀರದಲ್ಲಿ ಕಟ್ಟಿಸಿದಳಂತೆ! ಈಪ್ರಕಾರ ಮನೆಗೆ ಬಂದ ಧನವನ್ನು ನಿರಪೇಕ್ಷಾ ಬುದ್ಧಿಯೊಡನೆ ಹಿಂದಿರುಗಿಸಿದ ಧನ್ಯಾತ್ಮಳಾದ ಇವಳನ್ನು ಎಷ್ಟು ಕೊಂಡಾಡಿದರೂ ಸಾಲದು. ಆರ್ಕಾಡು ಪಟ್ಟಣವನ್ನು ಜಯಿಸಿದಾಗ ಕ್ಲೈವನೆಂಬ (CLIVE) ಇಂಗ್ಲಿಷ್ ಸೈನ್ಯಾಧಿಪತಿಯು, ತನ್ನ ಹತ್ತಿರ ಭದ್ರಪಡಿಸಲು ಕೊಟ್ಟಿದ್ದ ಒಡವೆಯನ್ನು ಸ್ವತ್ತುಕರ್ತರಿಗೆ ವಾಪಸು ಕೊಟ್ಟನಂತೆ! ಈ ಸ್ವಲ್ಪ ಔದಾರ್ಯಕ್ಕೋಸ್ಕರ ಇಂಗ್ಲಿಷ್ ಗ್ರಂಥಕಾರರು ಅವನ ಮೇಲೆ ಸದಾ ಸ್ತುತಿರೂಪವಾದ ವೃಷ್ಟಿಯನ್ನು ಸುರಿಸುತ್ತಿದ್ದಾರೆ. ಆದರೆ ಇಂಥವುಗಳೆಲ್ಲವೂ ಅಹಲ್ಯಾಬಾಯಿಯ ಔದಾರ್ಯ ಗುಣಗಳಲ್ಲಿ ಸ್ವಲ್ಪವಾದದ್ದೆಂದು ಹೇಳಬಹುದು. ಸ್ತ್ರೀಯಾಗಿದ್ದು ಗೊಲ್ಲಜಾತಿಯವಳಾಗಿದ್ದರೂ, ಇಂಥಾ ಸದಾಚಾರ ಸಂಪನ್ನತೆಯನ್ನೂ, ಶ್ರೇಷ್ಠತ್ವವನ್ನೂ, ಅಧಿಕಾರವನ್ನೂ ಸಂಪಾದಿಸಿದ ಅಹಲ್ಯೆಯನ್ನು ನಾರೀರತ್ನವೆಂದು ಏತಕ್ಕೆ ಹೇಳಬಾರದು? ಈಕೆಯ ಸ್ವಭಾವದಲ್ಲಿ ಶಾಂತಿಯೂ, ಸೌಮ್ಯತೆಯೂ, ವಿಶೇಷವಾಗಿದ್ದುವು. ಗರ್ವವು ಈಕೆಯನ್ನು ಯಾವಾಗಲೂ ಸ್ಪರ್ಶಿಸಿದ್ದಿಲ್ಲ. ಕಪಟವೆಂಬ ಮಾತು ಆಕೆಗೆ ತಿಳಿಯಲೇ ಇಲ್ಲ. ಡಂಭವು ಈಕೆಯಲ್ಲಿ ಸ್ವಲ್ಪ

ವಾದರೂ ಇಲ್ಲವೆ ಇತ್ತು. ಅಸತ್ಯಭಾಷಣೆಯನ್ನು ಯಾವಾಗಲೂ ಆಡಿದವಳಲ್ಲ. ದುರಾಚಾರವೆಂಬ ಮಾತು ಇವಳಲ್ಲಿ ಇಲ್ಲವೇ ಇಲ್ಲ. ಕಾಲವನ್ನು ದುರುಪಯೋಗದಲ್ಲಿ ಕಳೆಯುವುದು ಎಂಬ ಮಾತು ಆಕೆಯು ಸ್ವಪ್ನದಲ್ಲಿಯೂ ಕಂಡವಳಲ್ಲ. ಈ ಸಾಧ್ವೀಮಣಿಯ ಯಾವ ಯಾವ ಸದ್ಗುಣಗಣಗಳನ್ನು ಅಧಿಕವಾಗಿ ವರ್ಣಿಸಬೇಕೋ ನಮಗೆ ತಿಳಿಯದೆ ಇದೆ. ಸರ್ವ ಸದ್ಗುಣಗಳಿಗೂ ವಾಸಸ್ಥಾನಳಾದ ಅಹಲ್ಯಾಬಾಯಿಯ ಇಂಥ ಸದ್ಗುಣಗಳು ಅಧಿಕವಾಗಿತ್ತೆಂಬದಾಗಿಯಾಗಲಿ, ಅಂಥವು ಅಲ್ಪವಾಗಿತ್ತೆಂಬದಾಗಿಯಾಗಲಿ ಹೇಳಲು ಆಗುವುದಿಲ್ಲ.

೩೯. ಅಹಲ್ಯಾಬಾಯಿಗೆ ಮಂಚಾಬಾಯಿ ಎಂಬ ಮಗಳು ಇದ್ದಳೆಂದು ಹಿಂದೆಯೇ ಬರೆದಿದೆ. ಈಕೆಗೆ ಮುಕ್ತಾಬಾಯಿ ಎಂಬ ನಾಮಾಂತರವಿತ್ತು. ಈಕೆಗೆ ಮದುವೆ ಮಾಡಿ ಅಹಲ್ಯಾಬಾಯಿಯು ಅಳಿಯನನ್ನು ಮನೆಯಲ್ಲಿಯೇ ಇಟ್ಟುಕೊಂಡಳು. ಈ ಅಳಿಯನು ಬಹಳ ದಿನಗಳವರೆಗೂ ಬದುಕಿ, ಅಹಲ್ಯಾಬಾಯಿಯು ಮರಣಾಕ್ಕೆ ಸ್ವಲ್ಪದಿನಗಳ ಮುಂಚಿತವಾಗಿಯೇ ಮರಣಹೊಂದಿದನು. ಒಡನೇ ಮುಕ್ತಾಬಾಯಿ ಸಹಗಮನಕ್ಕೆ ಸಿದ್ಧಳಾದಳು. ಆಗ ಅಹಲ್ಯಾಬಾಯಿಯು ತನ್ನ ಕುಮಾರಿಯನ್ನು ಸಹ ಗಮನಮಾಡಕೂಡದೆಂದು ನಯಭಯದೊಡನೆ ಹೇಳಿ ನೋಡಿದಳು. ಆದರಿಂದ ಎಷ್ಟು ಮಾತ್ರವೂ ಪ್ರಯೋಜನವಿಲ್ಲದೇ ಹೋಯಿತು. ತಾಯಿಯ ಮಾತನ್ನು ಕೇಳದೆ ಮುಕ್ತಾಬಾಯಿಯು ಪತಿಯೊಡನೆ ಸಹಗಮನವನ್ನು ಮಾಡಿದಳು.

೪೦. ಈ ಪ್ರಕಾರ ಮಗಳೂ, ಅಳಿಯನೂ ಮೃತಿಹೊಂ

ದಲಾಗ, ಅಹಲ್ಯಾಬಾಯಿಗೆ ಬಹಳ ಮನೋವ್ಯಥೆಯು ಪ್ರಾಪ್ತವಾಯಿತು. ವಾರ್ಧಕ್ಯವೂ, ರಾಜ್ಯಭಾರ ಮಾಡುವ ಶ್ರಮವೂ, ವ್ರತಸಿಯುಮಗಳೂ, ಉಪವಾಸಗಳೂ, ಕನ್ಯಾಮರಣ ದುಃಖವೇ ಮೊದಲಾದುವೆಲ್ಲವೂ ಪಿಕೇಭಸು, ಆಕೆಯನ್ನು ದಿನದಿನಕ್ಕೂ ಕ್ಷೀಣದಸೆಗೆ ತಂದುವು. ಕೊನೆಗೆ ರೋಗವು ಸಂಭವಿಸಿ, ಪುಣ್ಯಶ್ಲೋಕಳಾದ ಅಹಲ್ಯಾಬಾಯಿಯು ೧೭೯೫ನೆ, ಯಿಸವಿಯಲ್ಲಿ ಪರಲೋಕವನ್ನೈದಿದಳು. ಅವಳ ಕೀರ್ತಿಯಾದರೋ ಈ ಲೋಕದಲ್ಲಿ ಶಾಶ್ವತವಾಗಿ ನಲಿಸಿರುವದು.

೪೧. ಅಹಲ್ಯಾಬಾಯಿಯ ವರ್ಣನೆಗಳೆಲ್ಲವೂ ಅತಿಶಯೋಕ್ತಿಯಾಗಿರುವುದೆಂದು ಕೆಲವರು ತಿಳಿದುಕೊಳ್ಳಬಹುದು. ಅತಿಶಯೋಕ್ತಿಗಳಿಂದ ಕಾವ್ಯವನ್ನು ತುಂಬುವುದು ನಮ್ಮ ದೇಶದ ಕವಿಗಳಿಗೆ ಸ್ವಭಾವಧರ್ಮವಾದ್ದರಿಂದ ಹೀಗೆ ಹೇಳಿಕೊಳ್ಳುವುದು ಆಶ್ಚರ್ಯವಲ್ಲ. ಆದರೆ, ನಾವು ವರ್ಣಿಸುವುದರಲ್ಲಿ ಅತಿಶಯೋಕ್ತಿಯಾವುದೂ ಇಲ್ಲವೆಂತಲೂ, ಸತ್ಯವೇ ತುಂಬಿರುವುದೆಂತಲೂ, ತೋರಿಸಲು ಪರದೇಶೀಯರ ಗ್ರಂಥಗಳಲ್ಲಿನ ಒಂದು ಪ್ರಮಾಣವನ್ನು ಕೊಡುವೆವು. ಅದೇನೆಂದರೆ:— ಪ್ರಸಿದ್ಧರಾದ ಮಾಲ್ಕಂ ದೊರೆಯವರು ತಮ್ಮ ಇತಿಹಾಸದಲ್ಲಿ ಹೀಗೆ ಬರೆದಿದ್ದಾರೆ. "ಅಹಲ್ಯಾಬಾಯಿಯ ಸಂಗಡ ವೈರವನ್ನು ಮಾಡುವುದೂ, ಕೆಲಸ ಬಂದಾಗ ಆಕೆಗೆ ಸಹಾಯ ಮಾಡದೆ ಹೋಗುವುದೂ, ಗೋಹತ್ಯಕ್ಕೆ ಸಮಾನವಾದ ಪಾಪವೆಂದು ಸಕಲ ಮಹಾರಾಷ್ಟ್ರ ರಾಜರುಗಳೂ ತಿಳಿಯುತಿದ್ದರು. ಸಕಲ ಜನರೂ ಆಕೆಯಲ್ಲಿ ಅಸಮಾನವಾಗಿ ಪೂಜ್ಯಭಾವವನ್ನು ಇಟ್ಟುಕೊಂಡಿದ್ದರು. ಪೇಷ್ವೆಯವರು ಆಕೆಯನ್ನು

ಹೇಗೆ ಸನ್ಮಾನಿಸುತ್ತಿದ್ದರೋ ಹಾಗೆಯೇ ಹೈದರಾಬಾದು ನೈಜಾಮರೂ, ಮೈಸೂರಿನ ಟಿಪ್ಪೂ ಸುಲ್ತಾನರೂ ಸನ್ಮಾನಿಸುತ್ತಿದ್ದರು. ಹಿಂದುಗಳ ಹಾಗೆಯೇ ತುರಕರೂ ಕೂಡ ಈಕೆಯನ್ನು ದೀರ್ಘಾಯುವಾಗಿರಬೇಕೆಂದೂ, ಈಕೆಯ ರಾಜ್ಯವು ವೃದ್ಧಿ ಹೊಂದಬೇಕೆಂತಲೂ, ಈಶ್ವರನನ್ನು ಪ್ರಾರ್ಥಿಸುತ್ತಿದ್ದರು. ಸ್ತ್ರೀಯಾಗಿದ್ದರೂ ಈಕೆಯಲ್ಲಿ ದುರಭಿಮಾನವಿರಲಿಲ್ಲ. ಸ್ವಧರ್ಮದಲ್ಲಿ ವಿಶೇಷವಾಗಿ ಮೂಢಭಕ್ತಿಗಳಿದ್ದರೂ, ಪರಧರ್ಮದವರನ್ನು ಬಾಧೆಪಡಿಸಬೇಕೆಂಬ ಇಚ್ಛೆಯು ಆಕೆಗೆ ಇರಲಿಲ್ಲ. ಧರ್ಮದಲ್ಲಿಯೂ, ಪರಮಾತ್ಮನ ವಿಚಾರದಲ್ಲಿಯೂ ಆಕೆಯು ಸದಾ ನಿರತಳಾಗಿದ್ದರೂ, ಪ್ರಜಾಕಲ್ಯಾಣವಿಷಯದಲ್ಲಿ ಯಾವಾಗಲೂ ಅಲಕ್ಷ್ಯ ಮಾಡಿದವಳಲ್ಲ. ಅತ್ಯಂತದಕ್ಷತೆಯಿಂದಲೂ, ಕರ್ತೃತ್ವ ಶಕ್ತಿಯಿಂದಲೂ ಆಕೆಯು ರಾಜ್ಯಭಾರವನ್ನು ನಡಿಸಿದಳು. ನಿಷ್ಕಪಟವೂ, ವಿನಯವೂ, ಹೆಂಗಸಿನಲ್ಲಿ ಇರಬೇಕಾದ ನೀತಿಯೂ, ಸದಸದ್ವಿಚಾರತೆಯೂ, ಆಕೆಯಲ್ಲಿ ವಾಸಮಾಡಿಕೊಂಡಿದ್ದುವು. ಹೀಗೆ ತನ್ನಲ್ಲಿ ದೋಷವಿಲ್ಲದಿದ್ದರೂ, ಇತರರಿಗುಂಟಾದ ಸ್ವಾಭಾವಿಕ ದೋಷಗಳನ್ನು ಆಕೆಯು ಕ್ಷಮಿಸುತ್ತಿದ್ದಳು. ಅಹಲ್ಯಾಬಾಯಿಯನ್ನು ಕುರಿತು ಲೋಕದವರು ಅತಿಶಯೋಕ್ತಿಗಳನ್ನು ಹೇಳುವರೆಂದು ಯೋಚಿಸಿ, ನಾವು ಆಕೆಯ ವಿಚಾರವಾಗಿ ಸೂಕ್ಷ್ಮರೀತಿಯಲ್ಲಿ ವಿಚಾರಿಸಿದೆವು. ಮತ್ತು, ಬೇರೆ ಬೇರೆ ಜನರನ್ನು ಕೇಳಿದೆವು. ಅವರೆಲ್ಲರೂ ಅಹಲ್ಯೆಯ ನಾಮವನ್ನು ಕೇಳಿದೊಡನೆಯೇ ಅನೇಕವಾಗಿ ಸ್ತುತಿಸುತ್ತಿದ್ದರು. ಆಕೆಯ ನಾಮದ ಮೇಲೆ ಆಶೀರ್ವಚನದ ಮಳೆಯನ್ನು ಸುರಿಸುತ್ತಿದ್ದರು. ಲೋ

ಕದ ಈ ಪೂಜ್ಯಸ್ವಭಾವವು ಈಕೆಯು ವಿಷಯದಲ್ಲಿ ಯೋಗ್ಯ ವಾದದ್ದಲ್ಲವೆಂದು ಹೇಳಲು ನಮಗೆ ಯಾವ ಆಧಾರವೂ ದೊರ ಕಲಿಲ್ಲ. ಎಷ್ಟೆಷ್ಟು ಅಧಿಕವಾಗಿ ವಿಚಾರಿಸಿದೆವೋ, ಅಷ್ಟಷ್ಟು ಅಧಿಕವಾಗಿ ಕುತೂಹಲವುಂಟಾಗುವ ಸಂಗತಿಗಳೇ ತಿಳಿದು ಬರುತ್ತವೆ. ಲೋಕದವರು ಈಕೆಯು ನಾಮಕ್ಕೆ ಸಾಧುಗ ಳಿಗೆ ತಕ್ಕ ಸನ್ಮಾನವನ್ನೇ ಕೊಡುತ್ತಿದ್ದಾರೆ. ಅವರು ಈಕೆ ಯನ್ನು ದೇವತೆಯೆಂದು ತಿಳಿಯುವರು. ಈಕೆಯ ಸದ್ಗುಣ ಗಳ ವಿಷಯವಾಗಿ ಎಷ್ಟು ದೋಷೈಕ ದೃಷ್ಟಿಯೊಡನೆ ವಿಚಾ ರಿಸಿದರೂ, ಪೃಥ್ವಿಯ ಮೇಲೆ ಇದುವರೆಗೂ ಹುಟ್ಟಿದ ಅತ್ಯಂತ ಪವಿತ್ರರಾಗಿಯೂ, ದೂರವಿಚಾರವುಳ್ಳವರಾಗಿಯೂ ಇದ್ದ ಪ್ರಭುಗಳಲ್ಲಿ ಈಕೆಯು ಒಬ್ಬಳೆಂದು ಹೇಳುವುದು ಸುಳ್ಳಲ್ಲ."

"ನಿಜವಾಗಿಯೂ ಅಹಲ್ಯಾಬಾಯಿ ಒಬ್ಬ ಅದ್ವಿತೀಯ ಸ್ತ್ರೀ"--ಹೀಗೆ ಆಕೆಯ ಚರಿತ್ರೆಯನ್ನು ಭೇದಿಸಿ ನೋಡಲಾಗಿ, ತನಿಗೆ ಆಕೆಯಲ್ಲಿ ಪೂಜ್ಯಭಾವವು ವುಂಟಾಯಿತೆಂದು ಅಹಲ್ಯಾ ಬಾಯಿಯನ್ನು ಕುರಿತು ಮಾಲ್ಕಂ ಸರದಾರನು ಬರೆದಿರುವ ಇಂಥನಿಷ್ಪಕ್ಷಪಾತವುಳ್ಳ ಸಾಕ್ಷಿ ಇರುವದರಿಂದ ಅಹಲ್ಯಾಬಾ ಯಿಯು "ಸತ್ಯಸಂಧಳು," "ಅದ್ವಿತೀಯ ಸ್ತ್ರೀ" ಯೆಂದು ದೃಢ ವಾಗಿ ಹೇಳಬಹುದು.

ಸ್ವಸ್ತಿಪ್ರಜಾಭ್ಯಃ ಪರಿಪಾಲಯನ್ತಾಂ<br>
ನ್ಯಾಯ್ಯೇನಮಾರ್ಗೇಣ ಮಹೀಂಮಹೀಶಾಃ ।<br>
ಗೋಬ್ರಾಹ್ಮಣೇಭ್ಯಃ ಶುಭಮಸ್ತುನಿತ್ಯಂ<br>
ಲೋಕಾಸ್ಸಮಸ್ತಾಃ ಸುಖಿನೋಭವಂತು ॥

ಶ್ರೀಃ.

1916.

CAXTON PRESS BRANCH,

FORT, BANGALORE CITY.

1,000 Copies.

ಶ್ರೀ.

# ಭಾರತ ಸಾಧ್ವೀಮಣಿಮಂಜರಿ.

ಆಪದಾಮಪಹರ್ತಾರಂ ।
ದಾತಾರಂ ಸರ್ವಸಂಪದಾಂ ।
ಲೋಕಾಭಿರಾಮಂ ಶ್ರೀರಾಮಂ ।
ಭೂಯೋಭೂಯೋ ನಮಾಮ್ಯಹಂ ॥

## ನಾಟೂರು ಸಂಸ್ಥಾನದ ಮಹಾರಾಣಿ ಭವಾನಿ.

---

ಪೂರ್ವದಲ್ಲಿ ಹಿಂದೂಸ್ಥಾನದಲ್ಲಿ ರಾಜಕಾರ್ಯ ಧುರಂಧರತ್ವವನ್ನು ವಹಿಸಿದ ನಾರೀಮಣಿಗಳಲ್ಲಿ ರಾಣಿಭವಾನಿಯು ಪ್ರಖ್ಯಾತಿ ಪಡೆದವಳೆಂದು ಹೇಳವುದಕ್ಕೆ ಸಂದೇಹವಿಲ್ಲ. ಈಕೆಯು ಬಂಗಾಳಾ ದೇಶದಲ್ಲಿ ರಾಜಷಾಹಿಪರಗಣಾ ಎಂಬ ಡಿಸ್ಟ್ರಿಕ್ಟಿಗೆ ಸೇರಿದ ಛಾತೀ ಎಂಬಗ್ರಾಮದಲ್ಲಿದ್ದಂಥ ಆತ್ಮರಾಮ ಚೌಧರೀ ಎಂಬುವ ಗೃಹಸ್ಥನ ಮಗಳು. ಈಕೆಯತಂದೆ ಬಹಳ ಧನವಂತನಲ್ಲದಿದ್ದರೂ, ಈಕೆಯ ಅಸಮಾನ ಸೌಂದರ್ಯವನ್ನೂ, ಅನುಪಮೇಯ ಸದ್ಗುಣಗಳನ್ನೂ ನೋಡಿ, ನಾಟೂರು ಸಂಸ್ಥಾನಾಧಿಪತಿಯಾದ ರಾಜರಾಮ ಜೀವನೆಂಬುವನು ತನ್ನ ಕುಮಾರನಿಗೆ ಇವಳನ್ನು ಮದುವೆ ಮಾಡಿಕೊಂಡನು.

೨. ಈಕೆಯು ಚಿಕ್ಕಂದಿನಲ್ಲಿಯೇ ವಿದ್ಯೆಕಲಿತಿದ್ದಳೆಂದು ಕೆಲವರುಬರೆದು ಇದ್ದಾರೆ. ಆದರೆ ಯಾವಯಾವ ವಿದ್ಯೆ

ಎಷ್ಟರಷ್ಟು ಮಟ್ಟಿಗೆ ಕಲಿತಿದ್ದಳೋ ತಿಳಿಯದು. ಆದರೂ, ಆಕೆಯು ತರವಾಯ ತೋರಿಸಿದ ಬುದ್ಧಿ ಕೌಶಲ್ಯಗಳಿಂದ ಚಿಕ್ಕಂದಿನಿಂದಲೇ ಬಹಳಮಟ್ಟಿಗೆ ವಿದ್ಯೆಕಲಿತಿದ್ದಳೆಂದು ತೋರುತ್ತದೆ. ದೈವಭಕ್ತಿ, ಧರ್ಮಬುದ್ಧಿ, ಕಾರ್ಯಸಂರಕ್ಷಕತ್ವವೆಂಬ ಈ ಗುಣತ್ರಯಗಳೂ, ಈ ಪತಿವ್ರತಾಶಿರೋಮಣಿಯಲ್ಲಿ ಚಿಕ್ಕಂದಿನಿಂದಲೂ ವಾಸಮಾಡಿಕೊಂಡಿದ್ದವು. ತರವಾಯ ರಾಜ್ಯವಾಳುತ್ತಿದ್ದಾಗಲೂ, ಪತಿಮರಣವಾದನಂತರ ತನಗೆ ಸರ್ವಾಧಿಕಾರವು ಪ್ರಾಪ್ತವಾದ ಕಾಲದಲ್ಲಿಯೂ, ಈ ಲಲನಾರತ್ನವು ತನ್ನ ಸುಗುಣಗಳಿಂದ ಪ್ರಜೆಗಳನ್ನೆಲ್ಲಾ ಸಂತೋಷಪಡಿಸುತ್ತಿದ್ದಳು. ಆದುದರಿಂದಲೇ ಈಕೆಯ ಕೀರ್ತಿಯು ಅಜರಾಮರವಾಗಿ ಇದೆ.

೩. ಈಕೆಯು ಪರಿಪಾಲಿಸಿದ ನಾಟೂರು ಸಂಸ್ಥಾನವನ್ನು ಸಂಪಾದಿಸುವುದರಲ್ಲಿ ಇವಳ ಪೂರ್ವಿಕನಾದ ರಾಮಜೀವನನೆಂಬ ರಾಯರಿಂದ ರಾಣಿಭವಾನಿಯು ಪಡೆದ ಅಮಿತವಾದ ಕೀರ್ತಿಗೆ ಮೂಲಕಾರಣವಾದ ಆ ಐಶ್ವರ್ಯ ಪ್ರಾಪ್ತಿಯನ್ನು ಕುರಿತು ಇಲ್ಲಿ ಸಂಕ್ಷೇಪವಾಗಿ ಬರೆದಿದೆ.

೪. ಕಾಮದೇವನೆಂಬ ಬ್ರಾಹ್ಮಣನಿಗೆ ರಘುನಂದನ, ರಾಮಜೀವನರೆಂಬ ಇಬ್ಬರು ಪುತ್ರರಿದ್ದರು. ಅವರು ದರ್ಪನಾರಾಯಣನೆಂಬ ಚಿಕ್ಕಜಮೀನ್ದಾರನಹತ್ತಿರ ಉದ್ಯೋಗವನ್ನು ಮಾಡಿಕೊಂಡಿದ್ದರು. ರಘುನಂದನನು ಬಹಳ ಸೂಕ್ಷ್ಮಬುದ್ಧಿಯುಳ್ಳವನು, ರಾಮಜೀವನನು ಕೂಡಬುದ್ಧಿವಂತನೇ. ಆದರೂ ರಘುನಂದನನಷ್ಟು ಕೌಶಲ್ಯವುಳ್ಳವನೆಂದು ಹೇಳಲು ಆಗುವುದಿಲ್ಲ. ಆ ಜಮೀನ್ದಾರನು

ರಘುನಂದನನ ಬುದ್ಧಿ ಕುಶಲತೆಗೆ ಮೆಚ್ಚಿ, ಮೂರ್ಷಿದಾಬಾದ್ ನವಾಬನಹತ್ತಿರ ಆ ದರ್ಬಾರಿನಲ್ಲಿ ತನ್ನ ಕಡೆಯ ವಕೀಲನನ್ನಾಗಿ ನೇಮಿಸಿಕೊಂಡನು. ತದನಂತರ ಆ ದರ್ಬಾರಿನಲ್ಲಿರುವಂಥವರೆಲ್ಲರೂ ಆತನ ಚಾತುರ್ಯವನ್ನು ನೋಡಿ, ಆತನನ್ನು ವಿಶೇಷವಾಗಿ ಸನ್ಮಾನಿಸುತ್ತಿದ್ದರು. ಆ ದರ್ಬಾರಿನಲ್ಲಿನ ಮುಖ್ಯ ಮಂತ್ರಿಗೂಕೂಡ ಇವನು ಎಷ್ಟೋ ಪ್ರಿಯನಾಗಿದ್ದನು. ಇವನ ಸಚ್ಛೀಲವನ್ನು ನೋಡಿ ಆ ದಿವಾನನು ತನ್ನ ಕೈಮುದ್ರೆಯನ್ನು ಕೂಡ, ಇವನಹತ್ತಿರ ಇಟ್ಟುಕೊಳ್ಳಲು ಕೊಡುತಿದ್ದನು.

೫. ಈ ಸಮಯದಲ್ಲಿ, ಮುರ್ಷಿದಾಬಾದ್ ನವಾಬನಿಗೆ ಬಹಳ ದ್ರವ್ಯವು ಬೇಕಾಗಿದ್ದುದರಿಂದ ಸರ್ಕಾರದ ಬೊಕ್ಕಸದಲ್ಲಿ ಇದ್ದಂಥ ಧನವೆಲ್ಲವನ್ನೂ, ಖರ್ಚುಮಾಡಿದನು. ಆದ್ದರಿಂದ ಢಿಲ್ಲೀಬಾದುಷಹಾ ತನ್ನನ್ನು ರಾಜ್ಯಭ್ರಷ್ಟನನ್ನಾಗಿ ಮಾಡುತ್ತಾನೆಂದು ಅವನಿಗೆ ಭಯಹುಟ್ಟಿತು. ಖರ್ಚುಮಾಡಿದ ಹಣವನ್ನು ಯಾವರೀತಿಯಲ್ಲಿಯಾದರೂ ಸಂಪಾದಿಸಿ ಬೊಕ್ಕಸವನ್ನು ತುಂಬುವುದಕ್ಕೆ ಆಗಲಿಲ್ಲವಾದಕಾರಣ, ಅಬದ್ಧಲೆಕ್ಕಗಳನ್ನು ಬರೆದು, ಡಿಲ್ಲಿಗೆ ಕಳುಹಬೇಕೆಂದು ನಿಶ್ಚಯಮಾಡಿಕೊಂಡರು. ಹೀಗೆ ಬುದ್ಧಿಯಿಲ್ಲದ ಕಾರ್ಯವನ್ನು ಮಾಡುವುದು ಒಳ್ಳೇದಲ್ಲವೆಂದು ತಿಳಿದು, ರಘುನಂದನನು ತಾನು ಡಿಲ್ಲಿಗೆಹೋಗಿ ಸುಳ್ಳುಲೆಕ್ಕಗಳು ಇಲ್ಲದೆಯೇ ಡಿಲ್ಲೀಶ್ವರನಿಗೆ ಸಮಾಧಾನ ಮಾಡುವೆನೆಂದು ನವಾಬನಿಗೆ ಹೇಳಿದನು. ಅದಕ್ಕೆ ನವಾಬನು ಸಮ್ಮತಿಸಿ ಅವನನ್ನು ಢಿಲ್ಲಿಗೆ ಕಳುಹಿಸಿದನು. ಆಗ ಅವನು ತನ್ನ

ವಾಕ್ಚಾತುರ್ಯದಿಂದ ಆ ಡಿಲ್ಲೀಶ್ವರನನ್ನು ಸಮಾಧಾನಪಡಿಸಿ, ಮೂರ್ಷಿದಾಬಾದಿಗೆ ಬಂದನು. ಅಂದಿನಿಂದ ನವಾಬನು ರಘುನಂದನನಿಗೆ ತನ್ನ ಹತ್ತಿರ ಮಂತ್ರಿತ್ವವನ್ನು ನೇಮಿಸಿ "ರಾಯಾ" ಎಂಬ ಬಿರುದನ್ನು ಕೊಟ್ಟನು. ಇಷ್ಟೇ ಅಲ್ಲ; ಹೆಸರುಮಾತ್ರ ನವಾಬನದು, ರಾಜ್ಯವೆಲ್ಲವೂ ಈತನವೇ ಎಂದು ಹೇಳಲು, ಸಂದೇಹವಿಲ್ಲದಂಥ ಅಧಿಕಾರವು ಈತನಿಗೆ ಪ್ರಾಪ್ತವಾಯಿತು. ಹೀಗೆ ಪೂರ್ಣಾಧಿಕಾರವು ಬಂದಸಮಯದಲ್ಲಿ, ಆತನು ತನ್ನ ತಮ್ಮನಾದ ರಾಮಜೀವನನಿಗೆ ಸಾಧಾರಣವಾಗಿ ಒಂದು ಕೋಟಿ ರೂಪಾಯಿ ಬಾಳುವಂಥ ಒಂದು ಜಮೀನ್ದಾರಿಯನ್ನು ಕೊಡಿಸಿದನು. ಹೀಗಿರುವಲ್ಲಿ, ಕೆಲವು ದಿವಸಗಳಲ್ಲಿಯೇ ರಾಮಜೀವನನಿಗೆ "ರಾಜಾ" ಬಿರುದು ಪ್ರಾಪ್ತವಾಯಿತು. ಇದುವರೆಗೂ ಈ ಬಿರುದನ್ನು ಇವನ ವಂಶಸ್ಥರು ಅನುಭವಿಸುತ್ತಿದ್ದಾರೆ. ರಾಜಾರಾಮಜೀವನನಿಗೆ ಇಬ್ಬರು ಗಂಡುಮಕ್ಕಳಿದ್ದರು. ಅವರಲ್ಲಿ ಒಬ್ಬನು ಬಾಲ್ಯಾವಸ್ಥೆಯಲ್ಲಿಯೇ ಗತಿಸಿದನು. ಎರಡನೆಯವನ ಹೆಸರು ರಾಮಕಾಂತನು. ತಂದೆ ಗತಿಸಿದ ನಂತರ ಇವನು ರಾಜ್ಯಾಧಿಕಾರವನ್ನು ಪಡೆದು "ರಾಜಾ" ಎಂಬ ಬಿರುದನ್ನು ಹೊಂದಿದನು. ಈ ರಾಮಕಾಂತನ ಭಾರ್ಯೆಯೇ ನಮ್ಮ ಚರಿತ್ರ ನಾಯಕಿಯಾದ ರಾಣಿಭವಾನಿಯು.

೬. ವಿವಾಹಕಾಲದಲ್ಲಿ ರಾಮಕಾಂತನಿಗೆ ಹದಿನೆಂಟು ವರುಷವೂ, ಭವಾನಿಗೆ ಹದಿನೈದು ವರುಷವೂ ವಯಸ್ಸು ಆಗಿತ್ತು. ಆ ದಂಪತಿಗಳಿಬ್ಬರಿಗೂ ಪರಸ್ಪರ ಪ್ರೇ

ಮಾನುರಾಗಗಳು ಅಭಿವೃದ್ಧಿಯಾಗುತ್ತಲೆ ಇದ್ದುವು. ಹೀಗಿರುವಲ್ಲಿ ಸ್ವಲ್ಪಕಾಲದಲ್ಲಿಯೇ ರಾಜಕಾರ್ಯವಿಷಯವಾಗಿ ಇವರಿಗೆ ಬಹುಕಷ್ಟವು ಪ್ರಾಪ್ತವಾಯಿತು.

೭. ರಾಜಾರಾಮು ಜೀವನನ ಕಾಲದಲ್ಲಿ ಆತನ ಹತ್ತಿರ ದಯಾರಾಮನೆಂಬ ಬುದ್ಧಿ ಕುಶಲತೆಯುಳ್ಳ ಒಬ್ಬ ಮಂತ್ರಿ ಇದ್ದನು. ರಾಮಜೀವನನು ತನ್ನ ಮಗನಹಾಗೆ ಇವನನ್ನು ಪ್ರೇಮಿಸುತ್ತಿದ್ದನು. ರಾಮಕಾಂತನು ಇವನನ್ನು "ಅಣ್ಣಾ" ಎಂದು ಕರೆಯುತ್ತಿದ್ದನು. ಅವಸಾನಕಾಲದಲ್ಲಿ ರಾಮಜೀವನು ಪ್ರತಿಕಾರ್ಯವನ್ನೂ, ಇನ್ನು ಮುಂದೆ ದಯಾರಾಮನ ಸಮ್ಮತಿಯ ಪ್ರಕಾರ ನಡೆಯಿಸಬೇಕೆಂದು, ತನ್ನ ಮಗನಿಗೆ ಬುದ್ಧಿ ಹೇಳಿ ಪ್ರಾಣವನ್ನು ಬಿಟ್ಟನು. ರಾಮಕಾಂತನಾದರೆ, ಚಿಕ್ಕತನದಲ್ಲಿಯೇ ದೊಡ್ಡ ಅಧಿಕಾರವು ಲಭಿಸಿದ್ದಕ್ಕೆ ಗರ್ವಪಟ್ಟು, ರಾಜ್ಯವನ್ನು ಹೋಗಲಾಡಿಸಿಕೊಳ್ಳುವನಾದನು. ಕೈಗೆ ಸಿಕ್ಕಿದ ಧನರಾಶಿಯೆಲ್ಲವನ್ನೂ ತುಚ್ಛವಾದ ಸುಖಕ್ಕೋಸ್ಕರ ಖರ್ಚು ಮಾಡಿದನು.

೮. ಇದೆಲ್ಲವನ್ನೂ ನೋಡಿ ದಯಾರಾಮನು ಬಹಳ ದಿವಸಗಳ ವರೆಗೂ ರಾಮಕಾಂತನಮೇಲೆ ದ್ವೇಷವನ್ನು ವಹಿಸಿ, ಅಲ್ಲಿಂದ ಹೊರಟು, ಮುರ್ಷಿದಾಬಾದಿಗೆ ಹೋದನು. ಆಗ ಅಲ್ಲಿ ರಾಜ್ಯಪರಿಪಾಲನೆ ಮಾಡುತ್ತಿದ್ದ ನವಾಬನ ಹೆಸರು ಅಲಿವರ್ದಿಖಾನ್. ಅಲ್ಲಿಗೆ ಹೋದ ತರುವಾಯ ದಯಾರಾಮನು, ನವಾಬನ ದರ್ಬಾರ್ ಸ್ಥಳಕ್ಕೆ ಪ್ರತಿ ದಿವಸವೂ ಹೋಗುತ್ತಿದ್ದನು. ಕೆಲವು ದಿವಸಗಳ

ಲ್ಲಿಯೇ ಅವನು ತನ್ನ ಬುದ್ಧಿ ಕುಶಲತೆಯಿಂದ ನವಾಬನ ವಿಶ್ವಾಸಕ್ಕೆ ಪಾತ್ರನಾದನು ದಯಾರಾಮನು ಒಂದು ದಿವಸ ನವಾಬನ ಸಮೀಪಕ್ಕೆಹೋಗಿ, "ಸ್ವಾಮೀ! ರಾಮಕಾಂತನು ಅವನ ದ್ರವ್ಯವೆಲ್ಲವನ್ನು ವೃಥಾ ಖರ್ಚು ಮಾಡುತ್ತಾ ಇದ್ದಾನೆ. ತಮ್ಮ ಸ್ವತ್ತೆಲ್ಲವನ್ನೂ ಅಪಹರಿಸಿ, ರಾಜದ್ರೋಹವನ್ನು ಮಾಡಲು ಯೋಚಿಸಿದ್ದಾನೆ." ಎಂದು ಹೇಳಿದನು. ಆಗಿನ ನವಾಬರು ವಿಚಾರಶೂನ್ಯರು. ಕಾಲಕಾಲದಲ್ಲಿ ವಿಚಾರಣೆಯನ್ನು ಮಾಡುತ್ತಿರಲಿಲ್ಲ ಒಂದು ಮಾತಿನಲ್ಲಿಯೇ ಒಬ್ಬನನ್ನ ಲಕ್ಷಾಧಿಕಾರಿಯನ್ನಾಗಿಯೂ, ಮತ್ತೊಬ್ಬನನ್ನು ಭಿಕ್ಷಾಧಿಕಾರಿಯನ್ನಾಗಿಯೂ ಮಾಡುತ್ತಿದ್ದರು. ಆದ್ದರಿಂದ ದಯಾರಾಮನ ಮಾತು ಕೇಳಿದ ಒಡನೆ, ಈ ಮಾತು ಸತ್ಯವೋ, ಅಸತ್ಯವೋ ಎಂದು ವಿಚಾರಿಸದೆ, ರಾಮಕಾಂತನ ಧನವೆಲ್ಲವನ್ನೂ ಸೂರೆ ಮಾಡುವಂತೆಯೂ, ಅವನನ್ನು ರಾಜ್ಯಭ್ರಷ್ಟನನ್ನಾಗಿ ಮಾಡಿ, ಅವನ ದೊಡ್ಡಪ್ಪನ ಮಗನಿಗೆ ರಾಜ್ಯವನ್ನು ಕೊಡುವ ಹಾಗೆಯೂ, ನವಾಬನು ತನ್ನ ಸೈನ್ಯವನ್ನು ಕಳುಹಿಸಿದನು. ನವಾಬನ ಆಜ್ಞೆಯ ಪ್ರಕಾರ ದಯಾರಾಮನು ಸೈನ್ಯದ ಸಂಗಡಲೇ ಹೋಗಿ, ರಾಮಕಾಂತನ ಧನಭಂಡಾರಕ್ಕೆ ನುಗ್ಗಿ, ಅಲ್ಲಿರುವ ದ್ರವ್ಯವೆಲ್ಲವನ್ನೂ ಕೊಳ್ಳೇ ಹೊಡೆಯಲು ಪ್ರಯತ್ನಿಸಿದನು. ಕೋಟೆಯೊಳಕ್ಕೆ ಸೈನ್ಯವು ನುಗ್ಗಿದಾಗ ರಾಮಕಾಂತನು ಅಂತಃಪುರದಲ್ಲಿ ತನ್ನ ಭಾರ್ಯಾಸಮೇತನಾಗಿ ಇದ್ದನಂತೆ.

೯. ನವಾಬನ ಸೈನ್ಯವು ದಂಡೆತ್ತಿ ಬಂದ ಸಮಾಚಾರವನ್ನು ಕೇಳಿ, ಅದನ್ನು ಎದುರಿಸುವುದಕ್ಕೆ ಸಮರ್ಥನಲ್ಲದೆ, ರಾಮಕಾಂತನು ವಜ್ರಾಘಾತಿತನಹಾಗೆ ಏನೂ ತೋರದೆ ನಿಶ್ಚೇಷ್ಟಿತನಾಗಿ ಇದ್ದನು ಅವನು ಹೀಗೆ ಕೆಲವು ನಿಮಿಷಗಳತನಕ ಇದ್ದಪಕ್ಷದಲ್ಲಿ ಶತ್ರುಗಳು ಅವನನ್ನು ಸೆರೆಹಿಡಿಯುತ್ತಿದ್ದರು. ಆದರೆ ಕುಶಾಗ್ರಬುದ್ಧಿಯುಳ್ಳ ಆತನ ಪತ್ನಿಯಾದ ಭವಾನಿಯು ಮಾತನಾಡಲು ಅವಕಾಶವಿಲ್ಲದ್ದರಿಂದ, ಪತಿಯ ದುಃಖವನ್ನೂ, ಭಯವನ್ನೂ ಶಾಂತಿಪಡಿಸಿ, ತಾನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾದಷ್ಟು ನಗಗಳನ್ನು ಕೈಲಿತೆಗೆದುಕೊಂಡು ತಾನೂ, ತನ್ನ ಪತಿಯೂ ಯಾರಿಗೂ ತಿಳಿಯದಹಾಗೆ ಪಟ್ಟಣವನ್ನು ಬಿಟ್ಟು ಹೊರಗೆ ಹೊರಟು ಹೋದರು

೧೦. ಚಿಕ್ಕತನದಿಂಲೂ ಭವಾನಿಯು ಕನಸಿನಲ್ಲಿಯೂ, ಕಷ್ಟವನ್ನು ತಿಳಿಯದವಳಾಗಿಯೂ, ಶ್ರೀಮಂತಳಾಗಿಯೂ, ಪಲ್ಲಕ್ಕಿಯಿಂದ ಕೆಳಕ್ಕೆ ಕಾಲು ಇಟ್ಟು ನಡೆಯದವಳಾಗಿಯೂ ಇದ್ದ ಭಾಗ್ಯಶಾಲಿನಿಯು. ಇಂಥವಳಿಗೆ ಕಷ್ಟವು ಪ್ರಾಪ್ತವಾದಾಗ ಆಕೆಯು ಎಂಟು ತಿಂಗಳು ಗರ್ಭಿಣಿಯಾಗಿದ್ದಳು. ಇಷ್ಟು ಕಷ್ಟವು ಪ್ರಾಪ್ತವಾದಾಗ್ಯೂ, ಪತಿಯ ಪ್ರಾಣವು ದಕ್ಕಿತೆಂದು ಸಂತೋಷಪಟ್ಟು, ಅವಳು ಧೈರ್ಯವುಳ್ಳವಳಾಗಿ ನಡೆಯುತ್ತಿದ್ದಳು.

೧೧. ಹೀಗೆ ಇವರು ಬಹಳ ಪ್ರಯಾಸದಿಂದ ನಡೆದು ಪದ್ಮಾವತೀ ತೀರವನ್ನು ಸೇರಿ, ಅಲ್ಲಿ ಒಬ್ಬ ಅಂಬಿಗನನ್ನು ಆಶ್ರಯಿಸಿ, ನದೀದಾಟಿ, ಮೂರ್ಷಿದಾಬಾದನ್ನು

ಸೇರಿ, ಅಲ್ಲಿ ಭಿಕ್ಷುಕರಹಾಗೆ ಒಂದು ಚಿಕ್ಕಮಂಟಪದಲ್ಲಿ ವಾಸವಾಡಿಕೊಂಡಿದ್ದರು. ಅಲ್ಲಿಗೆ ಹೋದನಂತರ, ರಾಮ ಕಾಂತನಿಗೆ ತನ್ನ ಪೂರ್ವದ ದುಶ್ಚರಿತೆಗಳಿಗಾಗಿ ಪರಿತಾಪ ವುಂಟಾಗಿ, ಬುದ್ಧಿಕುಶಲತೆಯುಳ್ಳ ತನ್ನ ಹೆಂಡತಿಯು ಹೇಳಿದ ಮಾತಿನಪ್ರಕಾರ ನಡೆದುಕೊಳ್ಳಲು ಸಮ್ಮತಿಸಿದನು. ನವಾಬನ ಬೊಕ್ಕಸದ ಅಧಿಕಾರಿಯಾದ "ಜಗತ್ಸೇಟ್" ಎಂಬುವನನ್ನು ಕರೆಯಿಸಿ, ತನ್ನನ್ನು ಕನ್ಯಕಾಭಾವದಿಂದ ರಕ್ಷಿಸಬೇಕೆಂದು ಬೇಡಿಕೊಂಡು, ತನ್ನ ಪತಿಯನ್ನು ಅವನ ವಶವಾಡಿದಳು. ಮತ್ತು ತನ್ನ ನಗಗಳಲ್ಲಿ ಕೆಲವನ್ನು ಮಾರಿ, ಆಧನದಿಂದಲೇ ನವಾಬನ ಉದ್ಯೋಗಸ್ಥರಲ್ಲಿ ಕೆಲವರನ್ನು ತನ್ನ ಪತಿಯಪಕ್ಷವಾಗಿರುವಂತೆ ಮಾಡಿದಳು. ತಮಗೆ ಪೂರ್ವದಲ್ಲಿ ಮಂತ್ರಿಯಾಗಿದ್ದು, ಆಮೇಲೆ ತಮ್ಮನ್ನು ಈ ಗತಿಗೆತಂದ ದಯಾರಾಮನನ್ನು ಬರಮಾಡಿಕೊಂಡು, ಅವನ ಕಾಲುಗಳಿಗೆ ಗಂಗೆಯಿಂದ ನಮಸ್ಕಾರವಾಡಿ, ಅಪರಾಧಗಳನ್ನೆಲ್ಲಾ ಕ್ಷಮಿಸಬೇಕೆಂದು ಬೇಡಿಕೊಂಡಳು

ಹೀಗೆ ಪ್ರಾರ್ಥಿಸಲಾಗಿ ದಯಾರಾಮನ ಮನಸ್ಸು ಕರಗಿ, ಅವನು ಪುನಃ ರಾಮಕಾಂತನಿಗೆ ರಾಜ್ಯಕೊಡಿಸುವೇನೆಂದು ಪ್ರತಿಜ್ಞೆಮಾಡಿದನು. ತರುವಾಯ ಭವಾನಿಯು ತನ್ನಲ್ಲಿದ್ದ ಆಭರಣಗಳೆಲ್ಲವನ್ನೂ ಎಂಭತ್ತು ಸಾವಿರ ರೂಪಾಯಿಗಳಿಗೆಮಾರಿ, ದಯಾರಾಮನಿಂದ ಆಧನವೆಲ್ಲವನ್ನೂ ಲಂಚಕೊಡಿಸಿ, ನವಾಬನ ಹತ್ತಿರವಿದ್ದ ಅಧಿಕಾರಿಗಳೆಲ್ಲರನ್ನೂ ವಶವಾಡಿಕೊಂಡಳು. ಹೀಗೆ ಅವರ ಪಕ್ಷ

ವನ್ನು ಅವಲಂಬಿಸಿದ ರಾಜಕೀಯ ಉದ್ಯೋಗಸ್ಥರೂ, ದಯಾರಾಮನೂ, ಜಗತ್ಸೇಟುವೂ, ಕೂಡಿ ಹೇಗೋ ನವಾಬನ ಮನಸ್ಸನ್ನು ತಿರುಗಿಸಿ, ಪುನಃ ರಾಮಕಾಂತನಿಗೆ ರಾಜ್ಯವನ್ನು ಕೊಡಿಸಿದರು.

೧೨. ಹೀಗೆ ಹೋದರಾಜ್ಯವನ್ನು ಪುನಃ ಸಂಪಾದಿಸುವುದಕ್ಕೆ ರಾಣಿಭವಾನಿಯು ತೋರಿಸಿದ ಅಸಾಮಾನ್ಯ ಬುದ್ಧಿ ಕುಶಲತೆಯಿಂದಲೂ, ಅನುಪಮೇಯ ಪತಿಭಕ್ತಿಯಿಂದಲೂ "ಸ್ತ್ರೀಬುದ್ಧಿಃ ಪ್ರಳಯಂಕರೀ" ಎನ್ನುವ ಮಾತು ಸರ್ವಥಾ ಅಸತ್ಯವೆಂದೇ ಹೇಳಬೇಕಾಗಿದೆ. ರಾಜ್ಯವನ್ನು ಪುನಃ ಸಂಪಾದಿಸಿದಬಳಿಕ ಹತ್ತು ವರುಷಗಳು ರಾಮಕಾಂತನು ತನ್ನ ಭಾರ್ಯೆ ಮಂತ್ರಿಗಳ ಅನುಮತಿ ಪ್ರಕಾರ ಸುಖವಾಗಿ ರಾಜ್ಯಪರಿಪಾಲನೆಮಾಡಿ ತರುವಾಯ ಮೃತಿಹೊಂದಿದನು.

೧೩. ರಾಮಕಾಂತನ ರಾಜ್ಯ ಹೋದಾಗ ರಾಣಿ ಭವಾನಿಯು ಗರ್ಭವತಿಯಾಗಿದ್ದಳೆಂದು ಹಿಂದೆಯೇ ಬರೆದು ಇರುವೆವಲ್ಲವೇ! ಆ ಗರ್ಭವು ಬೆಳೆದು ಒಬ್ಬ ಮಗನು ಹುಟ್ಟಿದನು. ಆದರೆ ಆ ಮಗನೂ ಇನ್ನೊಬ್ಬ ಮಗನೂ ಬಾಲ್ಯದಲ್ಲಿಯೇ ಗತಿಸಿದರು. ತರುವಾಯ ಅವಳಿಗೆ ತಾರಾ ಎಂಬ ಮಗಳುಮಾತ್ರ ಹುಟ್ಟಿದಳು. ತಾರೆಯು ಚಿಕ್ಕಂದಿನಲ್ಲಿಯೇ ವಿತಂತುವಾಗಿ ತಾಯಿಯ ಬಳಿಯಲ್ಲಿಯೇ ಇರುತ್ತಿದ್ದಳು.

೧೪. ಪತಿಯು ಅವಸಾನಕಾಲದಲ್ಲಿ ಭವಾನಿಯು ಮೂವತ್ತೈದು ವರುಷ ಪ್ರಾಯದವಳಾಗಿದ್ದಳು. ಪತಿಯು

ಮರಣಾನಂತರ ಭವಾನಿ ಸಿಂಹಾಸನವನ್ನೇರಿದಳು. ಆ ಸಮಯದಲ್ಲಿ "ಸುರಾಜುದ್ದೌಲಾ" ಎಂಬ ತುರುಷ್ಕ ಪ್ರಭುವು ಬಂಗಾಳಾ ದೇಶಕ್ಕೆ ನವಾಬನಾಗಿದ್ದನು. ಹಿಂದೂ ದೇಶದ ಚರಿತ್ರೆಯನ್ನು ಓದಿದವರಿಗೆ ಸುರಾಜುದ್ದೌಲನ ದುಶ್ಚೇಷ್ಟೆಗಳು ಚೆನ್ನಾಗಿ ತಿಳಿದೇ ಇವೆ. ಇವನು ವ್ಯಭಿಚಾರಾದಿ ದುಷ್ಕೃತ್ಯಗಳಿಗೆ ತನ್ನ ಧನವೆಲ್ಲವನ್ನೂ ಖರ್ಚು ಮಾಡಿ, ತನ್ನ ಕೈಕೆಳಗಿನ ಮಂಡಲಾಧಿಪತಿಗಳಿಂದ ಬಲಾತ್ಕಾರವಾಗಿ ದ್ರವ್ಯವನ್ನು ಸ್ವೀಕರಿಸುತ್ತಿದ್ದನು. ಹಣ ಕೊಡದೆ ಇದ್ದವರನ್ನು ವಿಶೇಷವಾಗಿ ಬಾಧಿಸುತ್ತಿದ್ದನು. ಪರಸ್ತ್ರೀಯರನ್ನು ಅಕ್ರಮವಾಗಿ ಸೆರೆಹಿಡಿಯುವುದಕ್ಕೆ ಈ ದುಷ್ಟನು ಹಿಂಜರಿಯುವವನಲ್ಲ. ನ್ಯಾಯವೆಂಬ ಮಾತು ಅವನ ರಾಜ್ಯದಲ್ಲಿ ಔಷಧಕ್ಕೂ ಸಿಕ್ಕುವುದು ದುರ್ಲಭವಾಗಿತ್ತು. ರಾಣಿಯು ತನ್ನ ರಾಜ್ಯಕ್ಕೆ ಇಂಥ ದುಷ್ಟನಿಂದ ಎಂದಿಗಾದರೂ ಕೇಡು ಸಂಭವಿಸಬಹುದೆಂದು ಆಲೋಚಿಸಿ ತನ್ನ ಸೈನ್ಯವನ್ನು ಸರಿಯಾಗಿ ಇಡಲು ಪ್ರಾರಂಭಿಸಿದಳು. ಸೈನ್ಯದಲ್ಲಿ ಭಟರಸಂಖ್ಯೆಯನ್ನು ಹೆಚ್ಚಿಸಿ, ಯುದ್ಧಕ್ಕೆ ಅಸಮರ್ಥರಾದವರನ್ನು ತೆಗೆದುಹಾಕಿ, ಸಮರ್ಥರಾದಂಥವರನ್ನು ಸೇರಿಸಿ, ತಾನೇ ಸೈನ್ಯಾಧಿಪತ್ಯವನ್ನು ಸ್ವೀಕರಿಸಿ, ಸೈನ್ಯದೊಳಗಣ ಯೋಧರುಗಳಿಂದ ತಮಾಷೆಗಾಗಿ ಯುದ್ಧವನ್ನು ಮಾಡಿಸುತ್ತಾ, ಸೈನ್ಯವನ್ನು ಬಲಪಡಿಸಿದಳು. ಹೀಗೆ ಮಾಡಿದ್ದರಿಂದಲೇ ಈ ಕೆಳಗೆ ವಿವರಿಸಲ್ಪಡುವ ಕಷ್ಟಗಳ ದೆಸೆಯಿಂದ ತನ್ನ ರಾಜ್ಯವನ್ನು ಈಕೆಯು ಉಳಿಸಿಕೊಂಡಳು.

೧೫. ಆ ಕಷ್ಟಗಳು ಯಾವುವೆಂದರೆ:—ರಾಣಿಯು ಕುಮಾರಿಯಾಗಿ ಪತಿಹೀನಳಾದ ತಾರೆಯು ಬಂಗಾಳ ದೇಶದಲ್ಲಿ ಪ್ರಖ್ಯಾತಿಹೊಂದಿದ ಸೌಂದರ್ಯವತಿಯು. ಈಕೆಯ ರೂಪಿನ ಸಂಗತಿಯನ್ನು ಕೇಳಿ, ನವಾಬನಿಗೆ ಈಕೆಯನ್ನು ಸೆರೆಹಿಡಿಯಬೇಕೆಂಬ ದುರ್ಬುದ್ಧಿ ಹುಟ್ಟಿತು. ತಾರೆಯನ್ನು ತನಗೆ ಕೊಡಬೇಕೆಂಬದಾಗಿ ಭವಾನಿಗೆ ವರ್ತಮಾನ ಕಳುಹಿಸಿದನು. ಆಕೆಯು ಅತ್ಯಂತಕ್ರೋಧೋದ್ದೀಪಿತಳಾಗಿ, ಬಂದಿದ್ದ ದೂತನನ್ನು ಬಹಳ ಅವಮಾನಪಡಿಸಿ ಕಳುಹಿಸಿಬಿಟ್ಟಳು. ಇದರಿಂದ ನವಾಬನು ಕ್ರೋಧಾವೇಶ ಪರವಶನಾಗಿ, ನಾಟೂರು ರಾಜ್ಯವನ್ನೆಲ್ಲ ಹಾಳುಮಾಡಿ, ತಾರಾಭವಾನಿಗಳನ್ನು ಸೆರೆಹಿಡಿದುಕೊಂಡು ಬನ್ನಿರೆಂದು ತನ್ನ ಸೈನ್ಯವನ್ನು ಕಳುಹಿಸಿದನು. ಹೀಗೆ ನಡೆಯುವುದೆಂದು ರಾಣಿಯು ಮುಂಚಿತವಾಗಿಯೇ ತಿಳಿದಿದ್ದ ಕಾರಣ, ಆಕೆಯು ಪಟ್ಟಣದ ಬಾಗಲುಗಳನ್ನೆಲ್ಲ ಮುಚ್ಚಿಸಿ, ತಾನೇ ಸೈನ್ಯಾಧಿಪತ್ಯವನ್ನು ವಹಿಸಿ, ತನ್ನ ಸೈನ್ಯವನ್ನು ಜತೆಯಲ್ಲಿ ತೆಗೆದುಕೊಂಡು ಬಂದು, ಬಹಿರ್ದ್ವಾರದ ಹತ್ತಿರ ನವಾಬನ ಸೈನ್ಯವನ್ನು ಎದುರಿಸಿದಳು. ಇಲ್ಲಿ ಒಂದು ಘೋರ ಯುದ್ಧವು ನಡೆಯಿತು. ತುರುಕರೆಲ್ಲರೂ ಸಂಪೂರ್ಣವಾಗಿ ಸೋತು ಓಡಿಹೋದರು. ಅನೇಕರು ನವಾಬನ ಹತ್ತಿರಕ್ಕೆ ಓಡಿಹೋದರು. ಈ ಸಂಗತಿಯು ಇತರ ರಾಜರಿಗೆ ತಿಳಿದ ಒಡನೆಯೇ, ಅವರು ಆ ನವಾಬನ ಸೈನ್ಯಕ್ಕೆ ಅನೇಕ ಬಾಧೆಗಳನ್ನು ಉಂಟುಮಾಡುವುದಕ್ಕೆ ಯತ್ನಿಸಿದರು.

೧೬. ಬಂಗಾಳ ದೇಶದ ರಾಜಾಧಿಪತಿಗಳೆಲ್ಲರಿಗೂ ನವಾಬನು ದುಷ್ಟನೆಂದು ತಿಳಿದುದರಿಂದ, ಅವರೆಲ್ಲರೂ ಆತನನ್ನು ರಾಜ್ಯಭ್ರಷ್ಟನನ್ನಾಗಿ ಮಾಡಲು ನಿಶ್ಚಯಿಸಿ, ಒಂದುದಿನ ಜಗತ್ಶೇಟನ ಮಂದಿರದಲ್ಲಿ ಸಭೆಸೇರಿದರು.

ಈ ಸಭೆಗೆ ಕೃಷ್ಣಾಪುರ ಸಂಸ್ಥಾನಾಧಿಪತಿಯಾದ ರಾಜಾಕೃಷ್ಣ ಚಂದ್ರರಾಜನೂ, ಢಕ್ಕಾಸಂಸ್ಥಾನಾಧಿಪತಿಯಾದ ರಾಜಾರಾಜವಲ್ಲಭನೂ, ಪಾಟ್ನಾ ಎಂಬ ಹೆಸರುಳ್ಳ ಪಾಟಲೀಪುರ ಸಂಸ್ಥಾನಾಧಿಪತಿಯಾದ ರಾಜಾರಾಯ ದುರ್ಲಭನೂ, ನಾಟೂರು ರಾಜ್ಯಾಧಿಕಾರಿಣಿಯಾದ ಭವಾನಿಯೂ, ಇವರೆಲ್ಲರೂ ಆ ಸಭೆಯಲ್ಲಿ ಪ್ರಮುಖರಾಗಿದ್ದರು. ಆ ಸಭೆಯಲ್ಲಿ ಈಪ್ರಕಾರ ಸಂಭಾಷಣೆಗಳು ಜರುಗಿದವೆಂದು ಒಬ್ಬ ಇತಿಹಾಸಕಾರನು ಬರೆದಿದ್ದಾನೆ.

ಜಗತ್ಶೇಟ್ :—" ಸುರಾಜುದ್ದೌಲನನ್ನು ಪದಚ್ಯುತನನ್ನಾಗಿಮಾಡಿ, ಮೀರ್‌ಜಾಫರ್ ಎಂಬವನನ್ನು ನವಾಬನನ್ನಾಗಿ ಮಾಡುವುದು ಬಹು ಉತ್ತಮವು. ಏತಕ್ಕಂದರೆ, ಹಿಂದೂರಾಜರು ಹೇಳಿದಹಾಗೆ ತಾನು ನಡೆದುಕೊಳ್ಳುವೆನೆಂದೂ, ಪ್ರಜೆಗಳಿಗೆ ಹಿತವಾಗುವಹಾಗೆ ರಾಜ್ಯಭಾರವನ್ನು ಮಾಡುವೆನೆಂದೂ, ಅವನು ಪ್ರತಿಜ್ಞೆಯನ್ನು ಮಾಡಿದ್ದಾನೆ. ಅವನೀಗ ನವಾಬನ ಒಬ್ಬ ಸೈನ್ಯಾಧಿಪತಿಯಾದ್ದರಿಂದ, ತುರುಕರ ಸೈನ್ಯವೆಲ್ಲವೂ ಅವನು ಹೇಳುವಹಾಗೆ ಕೇಳುವುದು. ಆದ್ದರಿಂದ ಪಕ್ಷಪಾತವಿಲ್ಲದೆ ಮೀರ್‌ಜಾಫರನನ್ನು ನವಾಬನನ್ನಾಗಿಮಾಡುವುದು. "

ರಾಣಿಭವಾನಿ :—" ಬಂಗಾಳಾ ದೇಶದ ಸಿಂಹಾಸನದಮೇಲೆ ತುರುಕನನ್ನು ಕೂಡಿಸುವುದಕ್ಕಿಂತಲೂ ಹಿಂ

ದೂರಾಜನೇ ಕೂಡಬಾರದೇಕೆ? ಕಳೆದು ಹೋದ ಸ್ವಾತಂತ್ರ್ಯವನ್ನು ಪುನಃ ಸಂಪಾದಿಸುವ್ರದಕ್ಕೆ ಇದೇ ಸರಿಯಾದ ಸಮಯವೆಂದು ನನ್ನ ತಾತ್ಪರ್ಯವು."

ರಾಜಾಕೃಷ್ಣಚಂದ್ರನು :— "ರಾಣಿಯವರೇ! ತಾವು ಹೇಳಿದ ಮಾತು ಬಹು ಯೋಗ್ಯವಾಗಿಯೇ ಇರುವುದು. ಏತಕ್ಕೆಂದರೆ, ಸ್ವಾತಂತ್ರ್ಯವೆನ್ನುವುದು ಎಲ್ಲರಿಗೂ ಇಷ್ಟವಾದುದೇ. ಆದರೂ, ನಾವು ಅನೇಕ ಸಂವತ್ಸರಗಳಿಂದ ಪರಾಜಿತರಾಗಿದ್ದೇವೆ. ನಮ್ಮ ಕೀರ್ತಿಯು ನಷ್ಟವಾಗಿದೆ. ಇತರ ರಾಷ್ಟ್ರಗಳನ್ನು ಧಿಕ್ಕರಿಸಿ, ಸ್ವಸಂರಕ್ಷಣೆ ಮಾಡಿಕೊಳ್ಳಲು ನಾವು ಅಸಮರ್ಥರು. ನಮ್ಮಲ್ಲಿ ಐಕಮತ್ಯವು ಇಲ್ಲ. ಪರಸ್ಪರ ದ್ವೇಷಗಳು ವಿಶೇಷವಾಗಿವೆ. ಆದರೆ ಒಂದೂ ನವಾಬನನ್ನು ನಿರ್ಗಡಿಸಿದ ಪಕ್ಷದಲ್ಲಿ ನಮ್ಮೊಳಗೆ ನಾವು ದ್ವೇಷಿಸಿ ಒಬ್ಬರನ್ನೊಬ್ಬರು ಸಂಹರಿಸಿಕೊಳ್ಳುವುದು ಸಂಭವಿಸುತ್ತದೆ. ಹೀಗೆ ನಮ್ಮವರ ಅಂತಃ ಕಲಹಗಳನ್ನು ನೋಡಿ ಮರಾಟೆಯವರು ನಮ್ಮ ಮೇಲೆ ದಂಡೆತ್ತಿ ಬಂದು, ನಮ್ಮನ್ನು ಪುನಃ ಪರತಂತ್ರರನ್ನಾಗಿ ಮಾಡುವರು. ಮರಾಟೆಯವರನ್ನು ನಾವು ತಿಳಿಯೆವು. ಅವರು ಬಹು ಕ್ರೂರರೆಂದು ಕೇಳಿರುವೆವು. ನಾವು ತುರಕರ ಸಂಗಡ ಕಲೆತುಇದ್ದೇವೆ. ಅವರ ಸ್ವಭಾವವು ನಮಗೆ ಚೆನ್ನಾಗಿ ತಿಳಿಯುವುದು. ಆದ್ದರಿಂದ ಅವರೇ ನಮಗೆ ರಾಜರಾಗಿದ್ದರೆ ಮೇಲು."

ರಾಣಿಭವಾನಿ:— "ನೀವು ಹೇಳುವ ಮಾತು ಯುಕ್ತವೇ ಸರಿ. ಆದರೆ ರಾಜ್ಯಾಧಿಪತಿಯಾದಮೇಲೆ ಸುರಾಜು

ದ್ದೌಲನ ಹಾಗೆ ಮೀರ್‌ಜಾಫರನೂ ಕ್ರೂರತ್ವವನ್ನು ಅವ ಲಂಬಿಸಿದ ಪಕ್ಷದಲ್ಲಿ ನಾವು ಏನು ಮಾಡಬಲ್ಲೆವು ? ”

ರಾಜರಾಜವಲ್ಲಭ:-“ಈ ಸಂಗತಿಯನ್ನು ಕುರಿತು ನಾವು ಇದುವರೆಗೇ ವಿಚಾರಣೆಮಾಡಿದ್ದೇವೆ. ಮೀರ್‌ಜಾ ಫರನನ್ನು ನಮ್ಮ ಕೈಕೆಳಗೆ ಇಟ್ಟುಕೊಳ್ಳುವುದಕ್ಕೆ ಇಂಗ್ಲೀ ಷಿನವರ ಸಹಾಯವನ್ನು ಕೇಳಲು ಯೋಚಿಸಿದ್ದೇವೆ. ಅ ವರು ಬಹುಬಲವಂತರು ಮತ್ತು ಕೇವಲ ವರ್ತಕರು. ರಾಜ್ಯಾಧಿಪತ್ಯವನ್ನು ಮಾಡಬೇಕೆಂಬ ಇಚ್ಛೆಯು ಅವರಿ ಗೆ ಇಲ್ಲವು. ವರ್ತಕತನದಲ್ಲಿ ವಿಶೇಷ ಲಾಭ ವುಂಟಾಗು ವ ಹಾಗೆ, ಕೊಂಚ ಷರತ್ತುಗಳನ್ನು ಅವರಿಗೆ ಬರೆದು ಕೊ ಟ್ಟ ಪಕ್ಷದಲ್ಲಿ, ಅವರು ನಮಗೆ ಅತ್ಯಾನಂದದಿಂದ ಯಾವಾ ಗಲೂ ಸಹಾಯ ಮಾಡುತ್ತಿರುವರು. ಅವರ ಸಹಾಯ ದಿಂದ ಯಾವಾಗಲೂ ನವಾಬನು ನಮಗೆ ವಶವಾಗಿರುವ ಹಾಗೆ ಮಾಡಿಕೊಳ್ಳಬಹುದು. ”

ಜಗತ್ಸೇಟ್:—“ಇಷ್ಟೇ ಅಲ್ಲದೆ ಕಲ್ಕತ್ತಾ ನಗರ ದ ಕಂಪೆನಿಯವರ ಅಂಗಡಿ (Shops) ಗಳನ್ನು ಸುರಾಜು ದ್ದೌಲನು ಸುಟ್ಟು ಹಾಕಿದ್ದಾನೆ. ಆದಕಾರಣ ಕಂಪೆನಿ ಯವರು ಸುರಾಜುದ್ದೌಲನನ್ನು ಓಡಿಸುವುದಕ್ಕೆ ಯತ್ನಿಸು ತ್ತಿದ್ದಾರೆ. ಆದ್ದರಿಂದ ಈಗ ಹೊಸದಾಗಿ ಸಿಂಹಾಸನಾ ರೂಢನಾಗುವಂಥ ನವಾಬನು ಅವರಿಗೆ ಸ್ನೇಹಿತನಾಗಿದ್ದ ಪಕ್ಷದಲ್ಲಿ, ಅವರು ಇವನಿಗೆ ಬಹಳ ಸಹಾಯವನ್ನು ಮಾಡಿ ಕೃತಜ್ಞತೆಯುಳ್ಳವರಾಗುವರು. ಅವರ ಸಂಗಡ ಸ್ನೇಹ ಮಾಡದ ಪಕ್ಷದಲ್ಲಿ ರಾಜ್ಯವು ಪ್ರಾರಂಭವಾದಾಗಲೇ ಹೊ

ಸ ನವಾಬನ ಸಂಗಡ ಯುದ್ಧವನ್ನು ಮಾಡಬೇಕಾಗಿ ಬರು ವುದು."

ರಾಜಾರಾಮದುರ್ಲಭರು: — "ಇಂಗ್ಲಿಷಿನವರು ದಕ್ಷಿಣದೇಶದ ನವಾಬನನ್ನು ಪರಾಜಿತನನ್ನಾಗಿ ಮಾಡಿದ ರು. ಆದ್ದರಿಂದ ಅವರ ಸಂಗಡ ಸ್ನೇಹವನ್ನು ಮಾಡಬೇ ಕು. ವೈರವು ಕೂಡದು."

ರಾಣಿಭವಾನಿ:—"ನಾನು ಸ್ತ್ರೀಯಾದ್ದರಿಂದ ಇಂಥ ರಾಜಕೀಯ ವ್ಯಾಪಾರದಾಲೋಚನೆಯನ್ನು ಹೇ ಳುವುದಕ್ಕೆ ಅಸಮರ್ಥಳಾಗಿರುವೆನು. ಆದರೂ ನನ್ನ ಅ ಲ್ಪಬುದ್ಧಿಯಿಂದ ಹೇಳುವುದನ್ನು ಕೇಳುವುದು ಇಂಗ್ಲಿಷಿ ನವರು ಈಗ ವ್ಯಾಪಾರಗಾರರಾಗಿದ್ದರೂ ನಾವು ಅವರ ಸ ಹಾಯವನ್ನು ಅಪೇಕ್ಷಿಸಿ ಅವರ ಕೈಗೆ ನಮ್ಮ ಜುಟ್ಟುಕೊಟ್ಟ ಮೇಲೆ, ಈ ಮಹಾರಾಜ್ಯವನ್ನು ನೋಡಿ ರಾಜ್ಯಾಭಿಲಾಷೆ ಯುಂಟಾಗದೆ ಇರಲಾರದು. ಆಗ ನಮ್ಮ ಗತಿಯೇನು? ಮರಾಟಿಯವರ ಗುಣಧರ್ಮಗಳ ವಿಷಯವಾಗಿ ನಮಗೆ ಸ್ವಲ್ಪಮಟ್ಟಿಗಾದರೂ ತಿಳಿಯುವುದು. ಆದ್ದರಿಂದ ತರು ಣಕನನ್ನು ರಾಜ್ಯಾರೂಢನನ್ನಾಗಿ ಮಾಡುವುದಕ್ಕೂ, ಪರ ದೇಶದವರಾದ ಕಂಪೆನಿಯವರನ್ನು ದೀನರಹಾಗೆ ಸಹಾ ಯ ಬೇಡುವುದೂ ಅಯುಕ್ತ."

ಹೀಗೆ ಅಲ್ಲಿ ಬಹಳ ಹೊತ್ತಿನವರೆಗೂ ವಿವಾದವು ಜರುಗಿದನಂತರ, ಇತರರಾಜರುಗಳ ಬಲವಂತದಿಂದ ರಾಣಿ ಭವಾನಿಯು ಇಂಗ್ಲಿಷಿನವರ ಸಹಾಯವನ್ನು ಕೇಳಿಕೊಂ ಡು, ಮೀರ್‌ಜಾಫರನಿಗೆ ರಾಜ್ಯವನ್ನು ಕೊಡಲು ಸಮ್ಮತಿ

ಸಿ ಹೀಗೆಂದಳು. "ಮಹಾರಾಜರುಗಳಿರಾ! ನೀವೆಲ್ಲರೂ ಸಮ್ಮತಿಸಿ ನಿಶ್ಚಯಿಸಿದ ಮಾತಿಗೆ ವಿರುದ್ಧವಾಗಿ ನಡೆಯುವುದು ನನಗೆ ಯೋಗ್ಯವಲ್ಲವು. ಆದುದರಿಂದ ಈ ಮಾತು ನನಗೆ ಸಮ್ಮತವೇ. ಈ ಒದಲಾವಣೆಯಿಂದ ತುರುಕರಿಗಿರುವ ರಾಜ್ಯವನ್ನು ಇಂಗ್ಲಿಷಿನವರ ವಶಮಾಡುತ್ತೇವೆ. ತುರುಕನನ್ನು ರಾಜ್ಯದಿಂದ ತೊಲಗಿಸಿ ಒಂದೂದೇಶದಿಂದ ಹಿಂದೂರಾಜ್ಯವನ್ನು ಸ್ಥಾಪಿಸುವಂಥ ಶಕ್ತಿಯೂ, ದೇಶಾಭಿಮಾನವೂ, ಐಕಮತ್ಯವೂ, ನಮಗೆ ಇಲ್ಲದೆ ಇರುವುದರಿಂದಲೂ; ನಮ್ಮ ದೇಶಸ್ಥರಾದ ಮರಾಟೆಯವರನ್ನು ನಾವು ನಂಬದೆ ಇರುವುದರಿಂದಲೂ; ನಾವೂ, ಮತ್ತು ನಮ್ಮ ರಾಜ್ಯವೂ, ಪೂಣರಕ್ಕೆಗೆ ಒಪ್ಪಿಸಲ್ಪಡುವುದೇ ಯೋಗ್ಯವಾಗಿರುವುದು. ಇವರೇ ನಮಗೆ ಹಿತಕರ್ತರಾಗುವರಲ್ಲವೇ' ಈಪ್ರಕಾರವಾಗಿ ಇವರುಗಳೆಲ್ಲರೂ ನಿಶ್ಚಯಿಸಿ ಅವರವರ ದೇಶಗಳಿಗೆ ಹೊರಟುಹೋದರು. ತರುವಾಯ ೧೭೫೭ರಲ್ಲಿ ನಡೆದ ಪ್ಲಾಸೀ ಯುದ್ಧದಲ್ಲಿ ಕಂಪೆನಿಯುವರೂ, ಮೀರ್‌ಜಾಫರನೂ ಕೂಡಿ, ಸುರಾಜುದ್ದೌಲನನ್ನು ಓಡಿಸಿದ ಸಂಗತಿ ಚರಿತ್ರೆಯನ್ನು ಓದಿದವರೆಲ್ಲರಿಗೂ ತಿಳಿದೇ ಇದೆ.

೧೭ ಪತಿಯು ಜೀವಿತಕಾಲದಲ್ಲಿ ಭವಾನಿ ಧರಾತ್ಮಕತ್ವೆಂದು ವಿಶೇಷ ಪ್ರಖ್ಯಾತಿ ಪಡೆದವಳಲ್ಲ. ಆದರೂ ಆಕೆಯು ಸಾಧಾರಣವಾಗಿ ಯಾವಾಗಲೂ ದಾನಧರ್ಮಗಳನ್ನು ಮಾಡುತ್ತಲೇ ಇದ್ದಳು. ದೇವಾಲಯುಗಳನ್ನು ಕಟ್ಟಿಸುವುದೂ; ಕೆರೆ, ಕೊಳ ಮೊದಲಾದ ಜಲಾಧಾರಗಳನ್ನು ತೋಡಿಸುವುದೂ; ಅನ್ನಸತ್ರಗಳನ್ನು ಸ್ಥಾಪಿಸುವುದೂ; ಬಡ

ಬ್ರಾಹ್ಮಣರಿಗೂ, ಇತರರಿಗೂ ವಿವಾಹ ಮಾಡಿಸುವುದೇ ಮೊದಲಾದ ಭೂತದಯಾ ಪ್ರೇರಿತವಾದ ಸತ್ಕೃತ್ಯಗಳನ್ನು ಅಂದಿನಿಂದಲೇ ರಾಣಿಯು ಮಾಡುತ್ತಿದ್ದಳು.

೧೮. ಈಕೆಗೆ ದೈವಭಕ್ತಿ ವಿಶೇಷವಾಗಿ ಉಂಟಾಗಿತ್ತು. ಯಾವ ವಸ್ತುವನ್ನಾದರೂ ಈಶ್ವರನಿಗೆ ಸಮರ್ಪಿಸದೆ ಈಕೆಯು ಅನುಭವಿಸುತ್ತಿರಲಿಲ್ಲ. ಒಂದುದಿನ ತನ್ನ ಗಂಡನು ಇಪ್ಪತ್ತೈದುಸಾವಿರ ರೂಪಾಯಿಗಳಿಗೆ ಎರಡು ಚಂದ್ರಹಾರಗಳನ್ನು ತೆಗೆದುಕೊಂಡನು. ಅದರಲ್ಲಿ ಒಂದು ಕಾಳಿಕಾದೇವಿಗೆಂತಲೂ, ಮತ್ತೊಂದು ತನ್ನ ಪತ್ನಿಗೆಂತಲೂ ನಿಶ್ಚಯಿಸಿದನು. ಅದರೊಳಗೆ ಒಂದು ಸೌಂದರ್ಯವಾಗಿತ್ತು ಮತ್ತೊಂದು ಸಾಧಾರಣವಾಗಿತ್ತು. ಅದರಲ್ಲಿ ಉತ್ತಮವಾದದ್ದನ್ನು ತನ್ನ ಭಾರ್ಯೆಗೆ ಕೊಡಬೇಕೆಂದು ನಿಶ್ಚಯಿಸಿ, ರಾಜನು ಅವುಗಳನ್ನು ರಾಣಿಗೆ ತೋರಿಸಿದ್ದಕ್ಕೆ, ಉತ್ತಮವಾದದ್ದನ್ನು ಕಾಳಿಕಾದೇವಿಗೆ ಸಮರ್ಪಿಸುವೆನೆಂದು ಅವಳು ಹೇಳಿದಳು. ಆಮೇಲೆ ರಾಜನು ತನ್ನ ಅಭಿಪ್ರಾಯವನ್ನು ತಿಳಿಸಲು; "ತಮಗೆ ಇಷ್ಟವಾದುದನ್ನು ತಾವು ಸಮರ್ಪಿಸಬಹುದು; ನನಗೆ ಇಷ್ಟವಾದುದನ್ನು ನಾನು ಸಮರ್ಪಿಸುವೆನು. ಹೀಗಾದರೆ ಇಬ್ಬರ ಕೋರಿಕೆಯೂ ನೆರವೇರಿದಂತಾಗುವದು." ಎಂದು ರಾಣಿಯು ಹೇಳಿದಳು. ಅದೇಪ್ರಕಾರ ಎರಡು ಹಾರಗಳನ್ನೂ ದೇವಿಗೆ ಸಮರ್ಪಿಸಿದರು. ಹೀಗೆ ಅವರ ನಿಷ್ಕಲ್ಮಷವಾದ ದೈವಭಕ್ತಿಯನ್ನು ತೋರಿಸುವ ದೃಷ್ಟಾಂತಗಳು ಅನೇಕವಾಗಿರುವುವು. ಆದರೆ ಗ್ರಂಥವಿಸ್ತರವಾಗುವುದೆಂಬ ಭಯದಿಂದ ಇಲ್ಲಿ ಅವುಗಳನ್ನು ಬರೆಯಲಿಲ್ಲ.

೧೯. ತನಗೆ ಗಂಡುಮಕ್ಕಳು ಇಲ್ಲದಿದ್ದರೂ, ತನ್ನ ಮಗಳಾದ ತಾರಾಬಾಯಿಯಗೆ ಮಗನು ಹುಟ್ಟಿದ ಪಕ್ಷದಲ್ಲಿ, ಆತನನ್ನು ರಾಜ್ಯಾಭಿಷಿಕ್ತನನ್ನಾಗಿ ಮಾಡಿ, ತಾನು ಗಂಗಾತೀರದಲ್ಲಿ ಇದ್ದು ದಾನಧರ್ಮಗಳನ್ನು ಮಾಡುತ್ತಾ, ಈಶ್ವರನ ಧ್ಯಾನವನ್ನು ಮಾಡಿಕೊಂಡು ಇರಬೇಕೆಂದು, ಅವಳಿಗೆ ಅಭಿಪ್ರಾಯವಿತ್ತು. ಆದರೆ “ ತಾನೊಂದು ಯೋಚಿಸಿದರೆ ದೈವವು ಒಂದುಮಾಡಿತು, ” ಎಂಬವಚನಕ್ಕೆ ಸರಿಯಾಗಿ ಅವಳ ಅಳಿಯನು ಮೃತಿ ಹೊಂದಿದನು. ಅಳಿಯನ ಮರಣದಿಂದ ರಾಣಿಗೆ ಅಪರಿಮಿತವಾದ ದುಃಖವೂ, ನಿರುತ್ಸಾಹವೂ ಉಂಟಾದುವು. ಕೆಲವುದಿವಸಗಳ ವರೆಗೂ ವಿತಂತುವಾದ ಮಗಳನ್ನು ನೋಡಿದಾಗಲೆಲ್ಲಾ ಅವಳಿಗೆ ಅತ್ಯಂತದುಃಖವು ಪ್ರಾಪ್ತವಾಗಿ ಚಿತ್ತಭ್ರಮೆಯುಂಟಾಗುತಿತ್ತು. ನವಾಬ್ ಸುರಾಜುದ್ದೌಲನು, ರಾಣಿಯಮಗಳನ್ನು ಸೆರೆಹಿಡಿಯುವಂತೆ ಸೈನ್ಯವನ್ನು ಕಳುಹಿದನೆಂತಲೂ, ಅವನ್ನು ರಾಣಿಭವಾನಿ ಓಡಿಸಿದಳೆಂತಲೂ ಹಿಂದೆಯೇ ಬರೆದಿರುವೆವು. ಆ ಯುದ್ಧವು ವಿತಂತುವಾದ ತಾರೆಗೋಸ್ಕರ ನಡೆಯಿತೆಂದು ವಾಚಕರು ಇದುವರೆಗೆ ತಿಳಿದೇ ಇರುವರು. ಆ ಯುದ್ಧವು ನಡೆದಂದಿನಿಂದಲೂ ರಾಣಿಯು ತಾರೆಯನ್ನು ಯಾವಾಗಲೂ ತನ್ನ ಸಂಗಡಲೇ ಇಟ್ಟುಕೊಂಡು, ಬಹು ಜಾಗರೂಕತೆಯಿಂದ ಕಾಪಾಡುತ್ತಿದ್ದಳು.

೨೦. ಅಳಿಯನ ಸಾವಿನಿಂದ ರಾಣಿಯ ಆಶೆಯೆಲ್ಲವೂ ಭಂಗವಾಯಿತು. ರಾಜ್ಯಕ್ಕೆ ಹಕ್ಕುದಾರರು ಯಾರೂ ಇಲ್ಲದೆ ಇರೋಣದರಿಂದ, ರಾಣಿಯು ಸಂಪತ್ತೆಲ್ಲವನ್ನೂ ಲೋಕಹಿತಾ

ರ್ಥವಾಗಿ ಉಪಯೋಗಿಸಲು ನಿಶ್ಚಯಿಸಿಕೊಂಡಳು. ಹೀಗೆ ಯೋಚನೆ ಮಾಡಿದನಂತರ ಇವಳು ಮಾಡಿದ ದಾನಧರ್ಮಗಳನ್ನು ಅಷ್ಟಿಷ್ಟೆಂದು ಹೇಳಲು ಸಾಧ್ಯವಲ್ಲ. ಅವುಗಳನ್ನು ತಿಳಿದವರು ಆನಂದಾಶ್ಚರ್ಯಗಳನ್ನು ಹೊಂದದೆ ಇರಲಾರರು. ಇವಳಿಗಿಂತಲೂ ಅಧಿಕ ಶ್ರೀಮಂತರಾಜರು ಅನೇಕರಿರುವರು. ಆದರೆ, ಇವಳು ಮಾಡಿದ ದಾನಧರ್ಮಗಳಲ್ಲನೇಕವುಗಳು, ದೊಡ್ಡದೊಡ್ಡ ಚಕ್ರವರ್ತಿಗಳಿಗೆ ಶೋಭಿಸುವಂಥವುಗಳು.

೭೧. ಪ್ರತಿವರುಷದಲ್ಲಿಯೂ ಇವಳು ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಚಿಲ್ಲರೆ ದಾನಧರ್ಮಗಳಿಗಾಗಿ ಖರ್ಚುಮಾಡುತ್ತಿದ್ದಳು. ಗಂಗಾತೀರದಲ್ಲಿದ್ದು ವೇದಾಧ್ಯಯನ ಮಾಡುವ ಯೋಗಿಗಳಿಗೂ, ಅತಿಥಿ ಅಭ್ಯಾಗತರುಗಳಿಗೂ ಅನ್ನಹಾಕವುದಕ್ಕೋಸ್ಕರ ಇವಳು ಅನೇಕಸತ್ರಗಳನ್ನು ಗಂಗಾತೀರದಲ್ಲಿ ಕಟ್ಟಿಸಿರುವಳು. ಸಂಸ್ಕೃತ ವಿದ್ಯಾಭ್ಯಾಸವನ್ನು ಮಾಡುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಕ್ಕೋಸ್ಕರವಾಗಿ ವರುಷಒಂದಕ್ಕೆ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಖರ್ಚುಮಾಡುವ ಹಾಗೆ ಇವಳು ಏರ್ಪಾಡುಮಾಡಿರುವಳು. ಆ ಏರ್ಪಾಡುಗಳು ಇದುವರವಿಗೂ ನಡೆಯುತ್ತಿರುವುವೆಂದು ಹೇಳುವರು. ಅನೇಕ ಗೀರ್ವಾಣ ಪಾಠಶಾಲೆಗಳನ್ನು ಸ್ಥಾಪಿಸಿ, ಅವುಗಳಲ್ಲಿ ದೊಡ್ಡ ಪಂಡಿತರನ್ನು ಗುರುಗಳನ್ನಾಗಿ ನೇಮಿಸಿ, ವಿದ್ಯಾರ್ಥಿಗಳಿಗೆ ಪಾಠಶಾಲೆಯಲ್ಲಿಯೇ ಅನ್ನ ಹಾಕುವಹಾಗೆ ಏರ್ಪಾಡುಗಳನ್ನು ಮಾಡಿ, ಶಾಸ್ತ್ರಗಳಲ್ಲಿ ಪ್ರವೀಣರಾಗುವಂಥ ವಿದ್ಯಾರ್ಥಿಗಳಿಗೆ ಅವರವರ ಯೋಗ್ಯತಾನುಸಾರ

ಬಹುಮಾನವನ್ನು ಕೊಡುವ ಹಾಗೆ ಏರ್ಪಾಡು ಮಾಡಿದಳು. ತಾನು ಏರ್ಪಡಿಸಿದ ಸತ್ಕಾರ್ಯಗಳು ತನ್ನ ಮರಣಾನಂತರವೂ ನಿರ್ವಿಘ್ನವಾಗಿ ನಡೆಯಬೇಕೆಂದು, ರಾಣಿಯವರು ಈಸ್ಟ್ಇಂಡಿಯಾ ಕಂಪನಿಯವರಿಗೆ ಕೆಲವು ಲಕ್ಷರೂಪಾಯಿಗಳನ್ನು ಕೊಟ್ಟು, ಅದರ ಬಡ್ಡಿಯಿಂದ ಈಪಾಠಶಾಲೆಗಳೆಲ್ಲವೂ ನಿರಂತರವೂ ಜರಗುವಹಾಗೆ ನಿಯಮಕವನ್ನು ಮಾಡಿದಳು. ಆದ್ದರಿಂದ ಈಗಲೂ ಬಂಗಾಳಾದೇಶದಲ್ಲಿ ಈಕೆಗೆ ಅನೇಕ ಆಶೀರ್ವಚನಗಳನ್ನು ಕೊಡುತ್ತ, ಅನೇಕ ವಿದ್ಯಾರ್ಥಿಗಳು ಸಂಸ್ಕೃತ ವಿದ್ಯಾಮೃತವನ್ನು ಪಾನಮಾಡುತ್ತಿದ್ದಾರೆ. ಈಕೆಯು ಭೂದಾನಗಳನ್ನು ಅನೇಕವಾಗಿ ಮಾಡಿದ್ದಾಳೆ. ಅನೇಕರಾದ ಬಡರೈತರುಗಳ ಕಂದಾಯವನ್ನು ತೆಗೆದು ಹಾಕಿದ್ದಾಳೆ. ಆಕಾರಣದಿಂದಲೇ ಈಕೆಯರಾಜ್ಯದಲ್ಲಿ ಬಡವರೆಲ್ಲರೂ ಸುಖವಾಗಿದ್ದರು.

೨೨ ಕಾಶಿ, ಗಯಾ, ರಾಜಷಾಹಿ, ಬಡಾನಗರ್ ಮೊದಲಾದ ಪಟ್ಟಣಗಳಲ್ಲಿ ಈಕೆಯು ದೊಡ್ಡದೊಡ್ಡ ದೇವಾಲಯಗಳನ್ನೂ, ಅನ್ನ ಸತ್ರಗಳನ್ನೂ ಕಟ್ಟಿಸಿರುವಳು. ಇವುಗಳಲ್ಲಿ ಕಾಶೀಕ್ಷೇತ್ರದ ದೇವಾಲಯವು ಬಹು ರಮ್ಯವಾಗಿದೆ. ಇದರೊಳಗೆ ವಿಶ್ವೇಶ್ವರ, ದಂಡಪಾಣಿ, ದುರ್ಗೆ, ತಾರೆ, ರಾಧಾಕೃಷ್ಣ, ಈವಿಗ್ರಹಗಳು ಬಹುಸೌಂದರ್ಯವಾಗಿವೆ. ಅತ್ಯಂತ ಸುಂದರವಾದ ಲಿಂಗಗಳು ಇಲ್ಲಿ ಅನೇಕಗಳುಂಟು. ದೇವಾಲಯವೆಲ್ಲವೂ ಶ್ರೇಷ್ಠವಾದ ಕರಿಕಲ್ಲಿನಿಂದಲೇ ಕಟ್ಟಲ್ಪಟ್ಟಿದೆ. ಇದೇರೀತಿಯಾಗಿ ಆಕೆಯು ಅನೇಕ ಸ್ನಾನಘಟ್ಟಗಳನ್ನು ಕಲ್ಲಿನಿಂದ ಕಟ್ಟಿಸಿದಳು. ಅನೇಕ ಧರ್ಮಶಾಲೆಗಳನ್ನು ಸ್ಥಾಪಿಸಿದಳು. ಕಾಶಿಯಲ್ಲಿ

೭೦೦ ಗೃಹಗಳನ್ನು ಕಟ್ಟಿಸಿ, ಅನಾಥರನ್ನು ಅದರೊಳಗಿಟ್ಟು, ಅನ್ನವನ್ನಿಕ್ಕಿ, ಅವರ ಮರಣಾನಂತರ ಅವರ ಉತ್ತರ ಕ್ರಿಯಾದಿಗಳನ್ನು ಕೂಡ ಯಥಾವಿಧಿಯಾಗಿ ಮಾಡಿಸುತ್ತಿದ್ದಳು. ಪಂಚಕ್ರೋಶದ ಸುತ್ತಲೂ ಈಕೆಯ ಧರ್ಮಗೃಹಗಳು, ಭಾವಿಗಳು ಮೊದಲಾದುವನೇಕವುಂಟು. ಕಾಶೀಕ್ಷೇತ್ರದಲ್ಲಿ ಈಕೆಯ ಸಹಾಯದಿಂದ ನಾಲ್ಕುಸಾವಿರ ಪ್ರಜೆಗಳು ಬದುಕುತ್ತಿದ್ದರು.

೨೩. ಈ ರಾಣಿಯು ಮನುಷ್ಯರಲ್ಲಿ ಮಾತ್ರವೇ, ಅಲ್ಲದೆ ಪಶು, ಪಕ್ಷಿ, ಕ್ರಿಮಿ, ಕೀಟಕಾದಿ ಸಮಸ್ತ ಪ್ರಾಣಿಗಳಲ್ಲಿಯೂ ಕರುಣೆಯುಳ್ಳವಳಾಗಿ ವರ್ತಿಸುತ್ತಿದ್ದಳು. ತನ್ನ ರಾಜ್ಯದಲ್ಲಿ ಯಾವ ಕಡೆಯೂ ಗೋಮಹಿಷಾದಿಗಳವಧೆ ಮಾಡಕೂಡದೆಂದು ಆಕೆಯು ಆಜ್ಞಾಮಾಡಿದ್ದಳು. ಈ ನಿಬಂಧನೆಯನ್ನು ಉಲ್ಲಂಘಿಸಿದವರಿಗೆ ಘೋರವಾದ ಶಿಕ್ಷೆಯನ್ನು ವಿಧಿಸುತ್ತಿದ್ದಳು. ಪಕ್ಷಿಗಳಿಗೆ ಒಂದು ದೊಡ್ಡಿಯಲ್ಲಿ ಅನೇಕ ಧಾನ್ಯಗಳನ್ನು ಚೆಲ್ಲಿಸಿ, ಅದರ ಆಶೆಗೆ ಬರುವಂಥ ಚೆಲುವಾದ ಪಕ್ಷಿಗಳನ್ನು ನಿರ್ಮಾಣ ಮಾಡಿದ ಸರ್ವೇಶ್ವರನ ಅದ್ಭುತ ಶಕ್ತಿ ಪ್ರಭಾವಾದಿಗಳಿಗೆ ಆನಂದಪಡುತ್ತಿದ್ದಳು. ಇರುವೆಗಳಿಗೆ ಅಕ್ಕೀನುಚ್ಚುಗಳನ್ನೂ, ಕಪ್ಪೆಗಳಿಗೆ ರೊಟ್ಟೀ ಚೂರುಗಳನ್ನೂ, ಮಾರ್ಜಾಲಗಳಿಗೆ ಕ್ಷೀರಾನ್ನವೇ ಮೊದಲಾದ ಭಕ್ಷ್ಯಗಳನ್ನೂ ಕೊಡಿಸಿ, ಅವುಗಳು ಭಕ್ಷಿಸುವುದನ್ನು ನೋಡಿ, ಭವಾನಿಯ ಮನಸ್ಸು ಬಹಳ ಸಂತೋಷಪಡುತ್ತಿತ್ತು. ಹೀಗೆ ಇವಳ ಕರುಣಾಪೂರಿತವಾದ ಮನಸ್ಸು ಎಲ್ಲಾ ಪ್ರಾಣಿಗಳಲ್ಲಿಯೂ ಸಮಾನವಾಗಿ ಪ್ರವಹಿಸುತ್ತಲಿತ್ತು.

೨೮ ಇವಳು ಕಾಶೀ ಯಾತ್ರೆಗೆ ಹೊರಡುವಾಗ ಇವಳ ಸಂಗಡ ೧೫೦೦ ಜಹಜುಗಳು ಹೊರಟವಂತೆ! ಭಕ್ಷ್ಯ ಪದಾರ್ಥಗಳು ೧೦೦೦ ದೋಣಿಗಳಮೇಲೆ ಹೊರಟವಂತೆ ! ಹೀಗೆ ಅಪರಿಮಿತವಾಗಿ ಅನ್ನದಾನಗಳನ್ನು ಮಾಡುತ್ತಿದ್ದದರಿಂದ ಇವಳನ್ನು ಅನ್ನಪೂರ್ಣೆಯ ಒಂದು ಅವತಾರವೆಂದು ಎಣಿಸುತ್ತಲಿದ್ದರು.

೨೯ ಭವಾನಿಯು ತನ್ನ ರಾಜ್ಯದಲ್ಲಿ ಅನಾಥರಾದ ರೋಗಿಗಳಿಗೆ ಔಷಧವನ್ನು ಕೊಡಿಸುವುದಕ್ಕೆ ಅನೇಕ ಔಷಧ ಶಾಲೆಗಳನ್ನು ಕಟ್ಟಿಸಿರುವಳು. ಈಗಿನ ಹಾಗೆ ಆಗ ಡಾಕ್ಟರುಗಳೂ ಆಸ್ಪತ್ರೆಗಳೂ ಇಲ್ಲದೆ ಇದ್ದರೂ, ಹಿಂದೂ ವೈದ್ಯಶಾಸ್ತ್ರದಲ್ಲಿ ಪ್ರವೀಣರಾದಂಥ ವೈದ್ಯರುಗಳು (ಪಂಡಿತರು) ಅನೇಕರು ರಾಣಿಭವಾನಿಯಿಂದ ದೊಡ್ಡ ಸಂಬಳಗಳನ್ನು ಪಡೆಯುತ್ತ, ಔಷಧಶಾಲೆಗಳಲ್ಲಿ ಅನಾಥರಿಗೆಲ್ಲ ಔಷಧವನ್ನು ಕೊಡುತ್ತಿದ್ದರು. ರೋಗಿಯು ಔಷಧಶಾಲೆಗೆ ಬಂದು ಗುಣವಾಗಿ ಹೋಗುವವರೆಗೂ, ಅವನಿಗೆ ಬೇಕಾದ ಪಥ್ಯಪಾನಗಳನ್ನೂ, ಔಷಧವನ್ನೂ, ಉಪಚಾರ ಮೊದಲಾದವುಗಳನ್ನೂ ಮಾಡುವುದಕ್ಕೆ ರಾಣಿಯು ಅನೇಕ ಸೇವಕರನ್ನು ನೇಮಿಸಿದ್ದಳು. ಆಹಾ! ಇವಳ ಭೂತಕಾರುಣ್ಯವನ್ನು ಎಷ್ಟು ಕೊಂಡಾಡಿದರೂ ಸಾಲದು. ಇಂಥ ವಿಶ್ವಕುಟುಂಬಿನಿಯನ್ನು ಸಹಸ್ರ ಬಾಯಿಗಳಿಂದ ಕೊಂಡಾಡಿದರೂ ಸ್ವಲ್ಪವೇ !

೩೦. ರಾಣಿಯು ಎಲ್ಲಾ ಪ್ರಜೆಗಳಿಂದಲೂ ಹೊಗಳಿಸಿ ಕೊಳ್ಳುತ್ತಿದ್ದಳು. ಕೇವಲ ಹಿಂದುಗಳಿಗೆ ಮಾತ್ರ

ವಲ್ಲದೆ, ತುರುಕರಿಗೆಕೂಡ ಈಕೆಯು ಪೂಜ್ಯಳಾಗಿದ್ದಳು. ಒಂದಾನೊಂದು ಸಮಯದಲ್ಲಿ ರಾಣಿಯು ಗಯೆಯೊಳಗೆ ಪಿಂಡ ಹಾಕಬೇಕೆಂದು ಹೊರಟಾಗ, ಅಲ್ಲಿನ ರಾಜನು ತನಗೆ ಐದುಲಕ್ಷ ರೂಪಾಯಿ ಕೊಟ್ಟಹೊರತು ಪಿಂಡದಾನವನ್ನು ಮಾಡಕೂಡದೆಂದು ಹೇಳಿದನು. ರಾಣಿಯು ಈ ಸಂಗತಿಯನ್ನು ಕೇಳಿ ಮೂರ್ಷಿದಾಬಾದು ನವಾಬನಿಗೆ ತಿಳಿಸಲು, ಅವನು ಗಯಾಧೀಶ್ವರನನ್ನು ಪದಚ್ಯುತಿ ಮಾಡುವುದಕ್ಕಾಗಿ ತತ್ಕ್ಷಣವೇ ಸೈನ್ಯವನ್ನು ಕಳುಹಿಸಿದನು. ಈಸಂಗತಿಯನ್ನು ಕೇಳಿ ಆ ರಾಜನು ಭಯಹೊಂದಿ, ರಾಣಿಗೆ ಶರಣಾಗತನಾದನು. ಶರಣಾಗತನಾದವನನ್ನು ರಕ್ಷಿಸಬೇಕೆಂದು ರಾಣಿಯು ಪುನಃ ನವಾಬನಿಗೆ ಸಮಾಧಾನವನ್ನು ಹೇಳಿ ಆ ರಾಜನನ್ನು ಕಾಪಾಡಿದಳು. ಕೆಲವು ದಿನಗಳವರೆಗೂ ಈರಾಜನು ನವಾಬನಿಗೆ ಕಪ್ಪವವನ್ನು ಕೊಡದೆ ಇದ್ದುದ್ದರಿಂದ ಅವನನ್ನು ಕಾರಾಗೃಹವಾಸಸ್ಥನನ್ನಾಗಿ ಮಾಡಿದನು. ಆಗ್ಗೆ ರಾಣಿಯು ಅಡ್ಡಬಂದು ಅವನನ್ನು ಬಂದೀಖಾನೆಯಿಂದ ಬಿಡಿಸಿದಳು. ಕಾರಾಗೃಹ ವಿಮುಕ್ತನಾದ ಆ ರಾಜನು, ರಾಣಿಯ ಸಮೀಪಕ್ಕೆ ಹೋಗಿ, ಅತ್ಯಂತ ಕೃತಜ್ಞತೆಯುಳ್ಳವನಾಗಿ, ತಲೆಪಾಗನ್ನು ತೆಗೆದು, ರಾಣಿಯ ಪಾದಗಳಿಗೆ ನಮಸ್ಕರಿಸಿ, “ ಅಪಕಾರ ಮಾಡಿದ ನನಗೆ ಪ್ರಾಣದಾನವನ್ನು ಮಾಡಿದ ನಿಮ್ಮಂಥ ಪರೋಪಕಾರಣಿಯನ್ನು ಎಲ್ಲಿಯೂ ನೋಡಲಿಲ್ಲ. ” ಎಂದು ವಿಜ್ಞಾಪಿಸಿ, ಅಪ್ಪಣೆಯನ್ನು ಪಡೆದು ತನ್ನ ರಾಜ್ಯಕ್ಕೆ ಹೊರಟು ಹೋದನು.

ತರುವಾಯ ಅವನು ಆ ರಾಣಿಯ ಆಜ್ಞಾಪ್ರಕಾರವೇ ನಡೆಯುತ್ತಿದ್ದನು.

೨೭. ಸಾಟೂರಿನಲ್ಲಿ ಗಂಗೆಯುಇಲ್ಲದ್ದರಿಂದ ರಾಣಿಯು ತನ್ನ ರಾಜಧಾನಿಯನ್ನು ಆಸ್ಥಳದಿಂದ ತೆಗೆದು, ಮುರ್ಷಿದಾಬಾದಿನ ಹತ್ತಿರ ಗಂಗಾತೀರದಲ್ಲಿರುವ ಬಡಾನಗರವೆಂಬ ಗ್ರಾಮದಲ್ಲಿ ಸ್ಥಾಪಿಸಿದಳು. ಈಕೆ ಬರುವುದಕ್ಕೆ ಮುಂಚೆ ಬಡಾನಗರವು ಒಂದು ಚಿಕ್ಕಗ್ರಾಮವಾಗಿತ್ತು. ಆದರೆ ಈಕೆಯು ಅಲ್ಲಿಗೆಬಂದ ತರುವಾಯ ಆ ನಗರವು ಬಹುದೊಡ್ಡದಾಗಿ, ಬಡಾನಗರವೆಂಬ ಹೆಸರನ್ನು ಸಾರ್ಥಕಪಡಿಸಿತು.

೨೮. ಇನ್ನು ಈಕೆಯು ದಿನಚರ್ಯೆಗಳನ್ನು ಕುರಿತು ಕೊಂಚ ಬರೆಯುವೆವು. ಈಕೆಯ ದಿನಚರ್ಯವು ಬಹು ರಮ್ಯವಾಗಿಯೂ, ಅನುಕರಣೀಯವಾಗಿಯೂ ಇರುವುದು. ಪ್ರಾತಃಕಾಲದಲ್ಲಿ ೪ಗಂಟೆಗೆ ಎದ್ದು, ಈಶ್ವರನಸ್ತೋತ್ರವನ್ನು ಮಾಡಿ, ಪುಷ್ಪಗಳನ್ನು ಕೊಯಿದು ತಂದು ಗೃಹದೇವತೆಯನ್ನು ಪೂಜಿಸುವಳು. ಸೂರ್ಯೋದಯವಾಗುತ್ತಲೇ ಗಂಗಾ ತೀರಕ್ಕೆ ಹೋಗಿ, ದೇವತೆಗಳನ್ನು ಪೂಜಿಸಿ, ಮಾರ್ಗಸ್ಥರಿಗೆ ದಾನಧರ್ಮಗಳನ್ನು ಮಾಡಿ, ಪುರಾಣಶ್ರವಣವನ್ನು ಮಾಡುವಳು. ಮಧ್ಯಾಹ್ನಕಾಲದಲ್ಲಿ ಭೋಜನವಾದನಂತರ ರಾಜವೇಷವನ್ನು ಹಾಕಿಕೊಂಡು ರಾಜಸಭೆಗೆಹೋಗುವಳು. ಅಲ್ಲಿ ಉದ್ಯೋಗಸ್ಥರಿಗೆ ಅವರು ಮಾಡುವಂಥ ಕಾರ್ಯಗಳನ್ನು ನೇಮಿಸಿ, ಅವರು ಮಾಡಿದ ಕಾರ್ಯಗಳನ್ನು ನೋಡಿ, ತಾನು ಸಭೆಯ

ಳ್ಳಿ ಸ್ವಂತವಾಗಿ ಮಾಡುವಂಥ ಕಾರ್ಯಗಳನ್ನು ಸ್ವಂತವಾಗಿ ನಿರ್ವಹಿಸಿಕೊಂಡು, ಪುನಃ ಪುರಾಣ ಶ್ರವಣಕ್ಕೆ ಹೋಗುವಳು. ಸಾಯಂಕಾಲದಲ್ಲಿ ತಿರುಗಿ ದೇವತಾದರ್ಶನವನ್ನು ಮಾಡಿಕೊಂಡು, ಮುಖ್ಯಮಂತ್ರಿ ಸಭೆಗೆ ಹೋಗಿ, ಪ್ರಜೆಗಳ ವಿಜ್ಞಾಪನೆಗಳನ್ನೂ, ವ್ಯಾಜ್ಯಗಳನ್ನೂ, ಇವೇಮೊದಲಾದುವನ್ನು ಕೇಳಿ, ಅವುಗಳ ತೀರ್ಪುಗಳನ್ನು ಹೇಳಿ, ಮನೆಯುಂ ಸೇರುತ್ತಿದ್ದಳು. ಅನಂತರ ಭಗವದ್ಧ್ಯಾನವನ್ನು ಮಾಡಿ, ಮಲಗಿಕೊಳ್ಳುತ್ತಿದ್ದಳು. ಭವಾನಿಯು ಒಪ್ಪೊತ್ತೇ ಭುಜಿಸುತ್ತಿದ್ದಳೆಂದು ಹೇಳುವರು. ರಾಣಿಭವಾನಿಯ ಕಾಲದಲ್ಲಿ ಆಕೆಯದೃಢವಾದ ಧರ್ಮ ವಿಶ್ವಾಸಗಳೇ ಮೊದಲಾದುವುಗಳನ್ನು ವಿಚಾರಿಸಿ ನೋಡುವಲ್ಲಿ, ರಾಣಿ ಭವಾನಿಯ ದಿನಚರ್ಯವು ಆಕಾಲದಲ್ಲಿ ಉತ್ತಮೋತ್ತಮವಾದದ್ದೆಂದೇ ಸರ್ವರೂ ಒಪ್ಪಿಕೊಳ್ಳತಕ್ಕದ್ದಾಗಿದೆ.

೨೯ ಹೀಗೆ ಪತಿ ಭಕ್ತಿ, ರಾಜಕಾರ್ಯತ್ವ, ಶೌರ್ಯ, ಸ್ವದೇಶಾಭಿಮಾನ, ಭೂತದಯೆ, ಈಶ್ವರಭಕ್ತಿ, ಮೊದಲಾದ ಸುಗುಣ ಸಂಪತ್ತುಗಳಿಗೆ ವಾಸಸ್ಥಾನಳಾದ ರಾಣಿ ಭವಾನಿಯು ೧೮೦೩ನೇ ವರುಷ ಅಂದರೆ ಅವಳ ೭೯ನೇ ವರುಷದಲ್ಲಿ, ಸ್ವರ್ಗಸ್ಥಳಾದಳು. ಈಕೆಯ ಮರಣಕ್ಕಾಗಿ ಲಕ್ಷಾಂತರ ಜನರು ವ್ಯಸನ ಪಟ್ಟರೆಂದು ಬೇರೆಬರೆಯಲೇಕೆ ?

೩೦ ಭವಾನಿಯು ಉದ್ದವಾಗಿಯೂ, ಬಹಳ ಸೌಂದರ್ಯವುಳ್ಳವಳಾಗಿಯೂ ಇದ್ದಳು. ಈಕೆಯು ಸತ್ತುಹೋಗುವವರೆಗೂ ಈಕೆಯ ಕಾಯ ಶಕ್ತಿಯು ತಗ್ಗಲಿಲ್ಲವಂತೆ !

ಅದುವರೆಗೂ ಈಕೆಯು ಸ್ವಂತವಾಗಿ ಅಡಿಗೆಮಾಡಿಕೊಂಡು ಭೋಜನ ಮಾಡುತ್ತಿದ್ದಳಂತೆ.

೩೧ ಇವಳು ರಾಮಕೃಷ್ಣನೆಂಬ ಒಬ್ಬ ಬಡ ಬ್ರಾಹ್ಮಣ ಹುಡುಗನನ್ನು ಬಾಲ್ಯದಿಂದಲೂ ಸಾಕುತ್ತಿದ್ದಳು. ಅವನು ವಿದ್ಯಾವಿನಯ ಸಂಪನ್ನನಾದ್ದರಿಂದ ಕೊನೆಗೆ ಅವನಿಗೆ ಪಟ್ಟಕಟ್ಟಿ ತಾನು ಕೀರ್ತಿಶೇಷಳಾದಳು. ಆ ರಾಜಾರಾಮಕೃಷ್ಣನು ಸಾಧುವಾಗಿಯೂ ಧರ್ಮಿಷ್ಟನಾಗಿದ್ದದರಿಂದ ಪ್ರಜೆಗಳನ್ನು ಸುಖವಾಗಿಟ್ಟುಕೊಂಡು ತಾನೂ ಸುಖವಾಗಿದ್ದನು. ಅವನು ಪುಣ್ಯಶ್ಲೋಕನಾದ್ದರಿಂದ ಮುಂದಿನ ಶ್ಲೋಕವನ್ನು ಸಾರ್ಥಕಪಡಿಸಿದನು.

ವಿದ್ಯಾದದಾತಿವಿನಯಂ
ವಿನಯಾದ್ಯಾತಿ ಪಾತ್ರತಾಂ ।
ಪಾತ್ರತ್ವಾದ್ಧನಮಾಪ್ನೋತಿ
ಧನಾದ್ಧರ್ಮಂ ತತಸ್ಸುಖಂ ॥